
ಸಂಪುಟ 24 ಸಂಚಿಕೆ 8
ಫೆಬ್ರವರಿ 24, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ಟೊಯೋಟೋ ದವಡೆಯಲ್ಲಿ ನಲಗುತ್ತಿರುವ ಕಾರ್ಮಿಕರು

'ಎಲ್ಲಾ ಮತಾಂಧರಿಂದ ಮಹಿಳೆಯ ಧ್ವನಿ ದಮನ'

- ಗೌರಿ ಲಂಕೇಶ್

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 89

ಪಂಚಾಯತ್ ಚುನಾವಣೆ - ಎಡರಂಗ ಮತ್ತೆ ಜಯಭೇರಿ

ಹಿಂದಿನ ಸಂಚಿಕೆಯಲ್ಲಿ ಆರ್‌ಎಸ್‌ಎಸ್ ನಿಷೇಧ, ಉತ್ತರ ಪ್ರದೇಶದ, ಹಿಮಾಚಲ ಪ್ರದೇಶ, ರಾಜಸ್ಥಾನ ಸರ್ಕಾರಗಳ ವಜಾ, ಕಲ್ಕತ್ತದಲ್ಲಿ 'ಮಹಾರ್‍ಯಾಲಿ', ತ್ರಿಪುರಾದಲ್ಲಿ ಮರಳಿ ಎಡರಂಗ ಅಧಿಕಾರಕ್ಕೆ ಬಂದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಪಂಚಾಯತ್ ರಾಜ್ ಕಾನೂನು ರೂಪಣೆ, ಮಹಿಳೆಯರಿಗೆ ಮೂರನೇ ಒಂದು ಸ್ಥಾನ ಮೀಸಲು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ, ಎಡರಂಗದಲ್ಲಿ ಮೂಡದ ಏಕತೆ, ಕಾಂಗ್ರೆಸ್-ಬಿಜೆಪಿ ಹೊಂದಾಣಿಕೆ, ಪಂಚಾಯತ್ ಚುನಾವಣೆಯಲ್ಲಿ ಎಡರಂಗ ಜಯಭೇರಿ, ಕೇಂದ್ರದ ರಾವ್ ಸರ್ಕಾರದ ವಿರುದ್ಧ ಅವಿಶ್ವಾಸ ಮಂಡನೆ, ಜ್ಯೋತಿಬಸುರವರಿಂದ ಮಹತ್ವದ ಕ್ಯೂಬಾ ಭೇಟಿ, ಉತ್ತರ ಪ್ರದೇಶದಲ್ಲಿ ಬಿಜೆಪಿ ಸೋಲು, ಮುಖ್ಯಮಂತ್ರಿಯಾಗಿ ಮುಲಾಯಂ ಸಿಂಗ್ ಯಾದವ್ .... ಈ ಬಗ್ಗೆ ಓದಿ

73ನೇ ಸಂವಿಧಾನ ತಿದ್ದುಪಡಿ ಮುಖಾಂತರ ಏಪ್ರಿಲ್ 23 ರಂದು ಪಂಚಾಯತಿ ರಾಜ್ ಕಾನೂನನ್ನು ರೂಪಿಸಲಾಯಿತು. ಪಂಚಾಯತಿಗಳಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡದವರ ಹೆಚ್ಚಿನ ಪ್ರತಿನಿಧ್ಯವನ್ನು ಖಾತರಿಪಡಿಸಲು ಪಶ್ಚಿಮ ಬಂಗಾಳ ಸರಕಾರ ಕಾನೂನಿನಲ್ಲಿ ಆಗಲೇ ಗಮನಾರ್ಹ ಬದಲಾವಣೆಗಳನ್ನು ಮಾಡಿತ್ತು. ಮಹಿಳೆಯರಿಗೆ ಮೂರನೇ ಒಂದು ಸ್ಥಾನಗಳನ್ನು ಹಾಗೂ ಪರಿಶಿಷ್ಟ ಜಾತಿ ಪಂಗಡದವರಿಗೆ ಆಯಾ ಪ್ರದೇಶಗಳಲ್ಲಿನ ಅವರ ಜನಸಂಖ್ಯೆಗೆ ಅನುಸಾರವಾಗಿ ಮೀಸಲಾತಿ ನಿಗದಿಪಡಿಸಲಾಯಿತು. ಮಹಿಳೆಯರಿಗೆ ಮೀಸಲಿಟ್ಟ ಸುಮಾರು 25,000 ಸ್ಥಾನಗಳಿಗೆ ಸೂಕ್ತ ಅಭ್ಯರ್ಥಿಗಳು ಸಿಗುವ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸಲಾಯಿತು. ನಂತರ ಆ ಅನುಮಾನ, ಆತಂಕಗಳೆಲ್ಲವನ್ನೂ ಹೋಗಲಾಡಿಸಲಾಯಿತು.

ಚುನಾವಣೆಗಳನ್ನು ಸ್ಥಗಿತಗೊಳಿಸುವ ದುರುದ್ದೇಶದಿಂದ ಕಾಂಗ್ರೆಸ್ 300ಕ್ಕೂ ಹೆಚ್ಚು ಮೊಕದ್ದಮೆಗಳನ್ನು ದಾಖಲಿಸಿತ್ತು. ಅದು ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿತು. ಕನಿಷ್ಠ 10,000 ಪಂಚಾಯತ್ ಸ್ಥಾನಗಳಲ್ಲಿ ಬಿಜೆಪಿಗೆ ಮುಕ್ತವಾಗಿ ಬಿಟ್ಟಿತು. ಚುನಾವಣೆಗಳೇ ಭಯೋತ್ಪಾದನೆ ಹಾಗೂ ರಿಗ್ಗಿಂಗ್ ನಡೆಯಿತೆಂದು ಆರೋಪಿಸಿ ಎರಡೂ ಪಕ್ಷಗಳು ಜೂನ್ 7 ರಂದು ಬಂಗಾಳ ಬಂದ್‌ಗೆ ಕರೆಕೊಟ್ಟವು. ಸಿಪಿಐ(ಎಂ) ಪ್ರತಿಪಕ್ಷಗಳನ್ನು ಬಹುತೇಕ ಏಕಾಂಗಿಯಾಗಿ ಎದುರಿಸಬೇಕಿತ್ತು. ನಮ್ಮ ಪಕ್ಷದ 26 ಸಂಗಾತಿಗಳು ಮೃತಪಟ್ಟರು. 400ಕ್ಕೂ ಹೆಚ್ಚು ಮಂದಿ ಗಾಯಗೊಂಡರು.

ಎಡಪಕ್ಷಗಳ ಒಟ್ಟಾರೆ ಒಗ್ಗಟ್ಟನ್ನು ಸಾಧಿಸಲು ನಮಗೆ ಸಾಧ್ಯವಾಗಲಿಲ್ಲ. ಎಡರಂಗ ಕೊನೆಕ್ಷಣದಲ್ಲಿ ಒಂದು ಜಂಟಿ ಹೇಳಿಕೆ ಬಿಡುಗಡೆಮಾಡಿತು. ಅದು ತೀರಾ ವಿಳಂಬವಾಗಿತ್ತು. ಸಾಮಾನ್ಯ ಘೋಷಣೆಯೊಂದು ಇಲ್ಲದಿದ್ದರಿಂದ ಪ್ರಚಾರಕ್ಕೆ ಅಡಚಣೆಯಾಯಿತು. ಬರ್ಧಮಾನ ಜಿಲ್ಲೆಯಲ್ಲಿ ಮಾತ್ರವೇ ನಮ್ಮ ಒಗ್ಗಟ್ಟಿತ್ತು. ಸಿಪಿಐ(ಎಂ), ಸಿಪಿಐ,



ಗೋಡೆ ಬರಹದಲ್ಲಿ ನಿರತನಾಗಿರುವ ಪಕ್ಷದ ಕಾರ್ಯಕರ್ತ

ಆರ್.ಎಸ್.ಪಿ. ಮತ್ತು ಫಾರ್ವರ್ಡ್ ಬ್ಲಾಕ್ 71,112 ಸ್ಥಾನಗಳಿಗೆ 84,051 ಅಭ್ಯರ್ಥಿಗಳನ್ನು ಇಳಿಸಿದವು. 10,000ಕ್ಕೂ ಹೆಚ್ಚು ಸ್ಥಾನಗಳಲ್ಲಿ ರಂಗದ ಅಂಗಪಕ್ಷಗಳ ಮಧ್ಯೆಯೇ ಸ್ಪರ್ಧೆ ಏರ್ಪಟ್ಟಿತು. ಪೂರ್ಣ ಒಗ್ಗಟ್ಟು ಸಾಧಿಸಲು ಸಿಪಿಐ(ಎಂ) ಗರಿಷ್ಠ ಪ್ರಯತ್ನ ಮಾಡಿದರೂ ಇತರ ಪಕ್ಷಗಳ ಅಸಹಕಾರದಿಂದಾಗಿ ಅದು ಸಾಧ್ಯವಾಗಲಿಲ್ಲ. ಏಕತೆ ಬಗ್ಗೆ ನಮ್ಮ ಪಕ್ಷದ ಕೆಲವು ಕಾರ್ಯಕರ್ತರಲ್ಲಿ ಕೂಡ ಸರಿಯಾದ ತಿಳುವಳಿಕೆ

ಅಂಥ ಸನ್ನಿವೇಶದಲ್ಲೂ ಪಂಚಾಯತಿ ಚುನಾವಣೆಗಳ ಫಲಿತಾಂಶ ಉತ್ತೇಜನಕಾರಿ ಯಾಗಿತ್ತು. ಎಡರಂಗ ಶೇ. 65.67 ಸ್ಥಾನಗಳನ್ನು ಬಗಲಿಗೆ ಹಾಕಿಕೊಂಡಿತು. 16 ಜಿಲ್ಲಾ ಪರಿಷತ್‌ಗಳು ರಂಗದ ನಿಯಂತ್ರಣಕ್ಕೆ ಬಂದವು. ಶೇಕಡ 90 ಪಂಚಾಯತ್ ಸಮಿತಿಗಳು, ಶೇ. 71 ಗ್ರಾಮ ಪಂಚಾಯತಿಗಳು ರಂಗಕ್ಕೆ ದೊರೆತವು. ಎಡಪಕ್ಷಗಳಲ್ಲಿ ಪೂರ್ಣ ಒಗ್ಗಟ್ಟಿದ್ದರೆ ಫಲಿತಾಂಶ ಇನ್ನೂ ಉತ್ತಮವಾಗಿರುತ್ತಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಸಿಪಿಐ(ಎಂ) ಮತ್ತು ರಂಗದ ಮತದ ಪಾಲು ಅನುಕ್ರಮವಾಗಿ ಶೇ. 7.9 ಹಾಗೂ ಶೇ. 6.53ರಷ್ಟು ಕುಸಿದಿತ್ತು. ಹಲವು ಗ್ರಾಮ ಪಂಚಾಯತ್ ಮತ್ತು ಪಂಚಾಯತಿ ಸಮಿತಿ ಸ್ಥಾನಗಳು ನಮ್ಮ ಕೈಬಿಟ್ಟು ಹೋದವು. ಕಾಂಗ್ರೆಸ್ ಶೇ. 3.59 ಹೆಚ್ಚಿಗೆ ಮತಪಡೆಯಿತು. ಬಿಜೆಪಿ ಶೇ. 3.51 ರಷ್ಟು ಸ್ಥಾನಗಳನ್ನು ಗಳಿಸಿತು. 1983 ಮತ್ತು 1988ರಲ್ಲಿ ಅದು ಕೇವಲ ಶೇ. 0.07 ಹಾಗೂ 0.06ಸ್ಥಾನ ಪಡೆದಿತ್ತು. ಬಿಜೆಪಿ ಜಿಲ್ಲಾ ಪರಿಷತ್ತಿನ ಯಾವುದೇ ಸ್ಥಾನ ಪಡೆಯಲು ವಿಫಲವಾಯಿತು.

198?ಕ್ಕೆ ಹೋಲಿಸಿದರೆ ಸಿಪಿಐ(ಎಂ) ಮತ್ತು ರಂಗದ ಪಾಲು ಅನುಕ್ರಮವಾಗಿ ಶೇ. 3.38 ಹಾಗೂ ಶೇ. 4.19 ಹೆಚ್ಚಿತ್ತು ಅದೇ ಕಾಂಗ್ರೆಸ್ ಪಾಲು ಶೇ. 6.11ರಷ್ಟು ಕುಸಿದಿತ್ತು.

1993ರಲ್ಲಿ ಒಟ್ಟು 15,937 ಮಹಿಳೆಯರು ಎಡರಂಗದ ಹುರಿಯಾಳಾಗಿ ಸ್ಪರ್ಧಿಸಿದರು. ಜಿಲ್ಲಾ ಪರಿಷತ್‌ಗಳಲ್ಲಿ 197, ಪಂಚಾಯತಿ ಸಮಿತಿಗಳಲ್ಲಿ 2297 ಮತ್ತು ಗ್ರಾಮಪಂಚಾಯತಿಗಳಲ್ಲಿ 13,443 ನಮ್ಮ ಮಹಿಳೆಯರು ಜಯಶಾಲಿಯಾದರು. ಕಣಕ್ಕಿಳಿದ ಮಹಿಳೆಯರ ಪೈಕಿ ಶೇ.64.69, ಅಂದರೆ 14,714 ಸ್ಥಾನಗಳನಲ್ಲಿ ಸಿಪಿಐ(ಎಂ) ಗೆದ್ದಿತು.

16 ಪುರಸಭೆಗಳಿಗೆ ಕೂಡ ಚುನಾವಣೆ ನಡೆಯಿತು ಹಬ್ರಾ ಪುರಸಭೆಯಲ್ಲಿ ಕಾಂಗ್ರೆಸ್ ಬೆಂಬಲದಿಂದ ಬಿಜೆಪಿ ಆಡಳಿತ ಹಿಡಿಯಿತು ಒಂಬತ್ತು ಪುರಸಭೆಗಳು ರಂಗದ ಪಾಲಾದವು.

ಜುಲೈ 12 ರಂದು ರಾಜ್ಯಪಾಲ ನೂರುಲ್ ... ರಾಜ್ಯಪಾಲರ ಜತೆ ಕೆಲಸ ಮಾಡುವ ಅವಕಾಶ ನನಗೆ ಸಿಕ್ಕಿತ್ತು. ಜನರ ಬಳಿ ಹೋಗಿ ಅವರ ವಿಶ್ವಾಸವನ್ನು ಗಳಿಸಿದವರಲ್ಲಿ ಪ್ರೊ. ಹಸನ್ ಒಬ್ಬರಾಗಿದ್ದರು.

ಜುಲೈ 26ರಂದು ಸಂಸತ್ತಿನಲ್ಲಿ ನರಸಿಂಹರಾವ್ ಸರಕಾರದ ವಿರುದ್ಧ ಎಡಪಕ್ಷಗಳು ಅವಿಶ್ವಾಸಗೊತ್ತುವಳಿಯನ್ನು ಮಂಡಿಸಿದವು. ಆರ್ಥಿಕ ನೀತಿಗಳು, ಷೇರು ಹಗರಣ ಮತ್ತು ಎಲ್ಲಾರಂಗಗಳಲ್ಲಿನ ವೈಫಲ್ಯಕ್ಕಾಗಿ ಸರಕಾರವನ್ನು ತರಾಟೆಗೆ ತೆಗೆದುಕೊಳ್ಳಲಾಯಿತು. ಮರುದಿನವೇ ಸ್ವತಃ ಪ್ರಧಾನ ಮಂತ್ರಿ ನನಗೆ ಫೋನ್ ಮಾಡಿದರು. ಪರಿಸ್ಥಿತಿ ಕಠಿಣವಾಗಿರುವುದರಿಂದ ತಕ್ಷಣವೇ ದೆಹಲಿಗೆ ಬರುವಂತೆ ಅವರು ನನಗೆ ಮನವಿ ಮಾಡಿದರು. ನಮ್ಮ ಸಂಸತ್ ಸದಸ್ಯರು ತಮ್ಮ ನಿಲುವನ್ನು ಸ್ಪಷ್ಟಪಡಿಸಿರುವುದರಿಂದ ನಾನು ದೆಹಲಿಗೆ ಬರುವುದರಲ್ಲಿ ಅರ್ಥವಿಲ್ಲ ಎಂದೂ, ಚೆಂಡು ಈಗ ಸರಕಾರದ ಅಂಗಣದಲ್ಲಿದೆ ಎಂದೂ ನಾನು ಅವರಿಗೆ ಸ್ಪಷ್ಟಪಡಿಸಿದೆ. ಸಹಜವಾಗಿಯೇ ನಾನು ದೆಹಲಿಗೆ ಹೋಗಲಿಲ್ಲ. ನಮ್ಮ ಉಪಕ್ರಮದ ಮೇರೆಗೆ ಜಾತ್ಯಾತೀತ ಶಕ್ತಿಗಳು ಒಂದೆಡೆ ಕಲೆ ಹಾಕಲು ಈ ವಿಶ್ವಾಸ ಗೊತ್ತುವಳಿ ನೆರವಾಯಿತು. ಅಂತಿಮವಾಗಿ ಪಕ್ಷಾಂತರಗಳ ನೆರವು ಪಡೆದು ರಾವ್ ಬಚಾವಾದರು (ಅಜಿತ್‌ಸಿಂಗ್ ಬಣದವರು ಹಾಗೂ ಜಾರ್ಖಂಡ್ ಪಕ್ಷದ ಶಿಬುಸೋರೇನ್ ಬಣದ ನಾಲ್ವರು ರಾವ್‌ಗೆ ಬೆಂಬಲಕೊಟ್ಟರು) ಸರಕಾರ ಕೇವಲ 14 ಮತಗಳಿಂದ ಉಳಿಯಿತು. ಸರಕಾರವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಹಣ ನೀಡಲಾಯಿತೆಂಬ ಆರೋಪಗಳೂ ಇವೆ. ವಾಸ್ತವವಾಗಿ ಈ ವಿಚಾರದಲ್ಲಿ ರಾವ್‌ರನ್ನು ಕೋರ್ಟಿಗೆಳೆಯಲಾಯಿತು. ಈ ಮೊಕದ್ದಮೆ ಇನ್ನೂ ನಡೆಯುತ್ತಿದೆ. (ಅನೇಕ ಸಂಸತ್ ಸದಸ್ಯರು ಹಣಪಡೆದಿರುವುದು ಹೌದೆಂಬುದು ನ್ಯಾಯಾಲಯದಲ್ಲಿ ರುಜುವಾತಾಗಿ ಅನೇಕರು ಶಿಕ್ಷೆಗೆ ಒಳಗಾಗಿದ್ದಾರೆ-ಸಂ)

ಕ್ಯೂಬಾ ಪ್ರವಾಸ

ನಾನು ಬಹುತೇಕ ಎಲ್ಲ ಸಮಾಜವಾದಿ ದೇಶಗಳಿಗೆ ಭೇಟಿ ನೀಡಿದ್ದೇನೆ. ಆದರೆ ದುರದೃಷ್ಟವಶಾತ್ ಕ್ಯೂಬಾ ಈ ಪಟ್ಟಿಯಲ್ಲಿ ಇರಲಿಲ್ಲ. ಹೀಗಾಗಿ ಕ್ಯೂಬಾ ಭೇಟಿಗೆ ಆಹ್ವಾನ ಬರುತ್ತಲೇ ನನ್ನ ಕುತೂಹಲ ಮೇರೆಮೀರಿತು. ಅನೇಕ ವರ್ಷಗಳ ಹಿಂದೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಡಂಡಂ ವಿಮಾನ ನಿಲ್ದಾಣದಲ್ಲಿ ನಾನು ಫಿಡೆಲ್ ಕ್ಯಾಸ್ಟ್ರೋರನ್ನು ಭೇಟಿ ಮಾಡಿದ್ದೆ.

1993 ಸೆಪ್ಟೆಂಬರ್ 17 ರಂದು ನಾನು ಪ್ರವಾಸ ಆರಂಭಿಸಿದೆ. ಲಂಡನ್‌ನಲ್ಲಿ ಸ್ಟಾಫ್‌ಓವರ್ ಆದಮೇಲೆ ಸೆಪ್ಟೆಂಬರ್ 25 ರಂದು ಮ್ಯಾಡ್ರಿಡ್ ಮೂಲಕ ಹವಾನಾ ತಲುಪಿದೆ. ನಮ್ಮ ಪಾಲಿಟ್ ಬ್ಯೂರೋ ಸದಸ್ಯ ಕಾಂ। ಸೀತಾರಾಮ್ ಯೆಚೂರಿ ನನ್ನನ್ನು ಅಲ್ಲಿ ಜತೆಗೂಡಿದರು. ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರ ಹಾಗೂ ವಿದೇಶ ಸಚಿವ ಜೋಸ್ ರೇಮನ್ ಬಲಗೈ ನಮ್ಮನ್ನು ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು. ಕ್ಯೂಬಾ ನಾಯಕತ್ವದೊಂದಿಗೆ ನಾವು ಸುದೀರ್ಘ ಚರ್ಚೆ ನಡೆಸಿದೆವು.

ನಾವಿದ್ದ ಸರಕಾರಿ ಅತಿಥಿಗೃಹಕ್ಕೆ ಅಕ್ಟೋಬರ್ ಎರಡರಂದು ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ಆಗಮಿಸಿದರು. ಜಾಗತಿಕ ಪರಿಸ್ಥಿತಿ ಹಾಗೂ ಭಾರತ-ಕ್ಯೂಬಾ ಮೈತ್ರಿ ಬಲಪಡಿಸುವ ಅಗತ್ಯದ ಬಗ್ಗೆ ಅವರು ಚರ್ಚಿಸಿದರು. ಲಾತೂರ ಭೂಕಂಪ ಸಂತ್ರಸ್ತರಿಗೆ ಅವರು ಅಪಾರ ಸಹಾನುಭೂತಿ ವ್ಯಕ್ತಪಡಿಸಿದರು. ಮರುದಿನ ಯಾವುದೇ ಪ್ರಕಟಣೆಯಿಲ್ಲದೆ ನಮ್ಮ ಅತಿಥಿಗೃಹದ ಕಡೆ ಕ್ಯಾಸ್ಟ್ರೋ ಬಂದಿದ್ದನ್ನು ಕಂಡು ನಾನು ಆಶ್ಚರ್ಯಚಕಿತನಾದೆ. ಕಾಂ। ಕ್ಯಾಸ್ಟ್ರೋ ಅಲ್ಲಿಗೆ ಬಂದಿದ್ದು ಮಾತ್ರವೇ ಅಲ್ಲದೆ ಸ್ವತಃ ಅವರೇ ವಿಮಾನನಿಲ್ದಾಣದವರೆಗೆ ಬಂದು ನಮ್ಮನ್ನು ಬೀಳ್ಕೊಟ್ಟರು. ಇದನ್ನು ನಾನು ಎಂದೆಂದೂ ಮರೆಯುವುದಿಲ್ಲ.


1993 ನವೆಂಬರ್ ಡಿಸೆಂಬರ್‌ನಲ್ಲಿ ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಹಿಮಾಚಲಪ್ರದೇಶ ವಿಧಾನಸಭೆಗೆ ಚುನಾವಣೆ ನಡೆಯಿತು. ದೆಹಲಿಯಲ್ಲಿ ಕೂಡ ಚುನಾವಣೆ ನಡೆಯಿತು. ಉತ್ತರ ಪ್ರದೇಶದಲ್ಲಿ ಬಿಜೆಪಿ ಒಂದು ದೊಡ್ಡ ಶಕ್ತಿಯಾಗಿತ್ತು. ಮುಲಾಯಂಸಿಂಗ್‌ರ ಸಮಾಜವಾದಿ ಪಕ್ಷವು ಬಹುಜನ ಸಮಾಜ ಪಕ್ಷ (ಬಿ.ಎಸ್.ಪಿ)ದೊಂದಿಗೆ ಹೊಂದಾಣಿಕೆ ಮಾಡಿಕೊಂಡಿತು. ಜನತಾದಳ ಕೂಡ ಮೈತ್ರಿಗೆ ಕಾತರವಾಗಿತ್ತು. ಮುಲಾಯಂಸಿಂಗ್‌ರನ್ನು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಪ್ರತಿಬಿಂಬಿಸಲಾಯಿತು. ಆದರೆ ಸಮಾಜವಾದಿ ಪಕ್ಷ ಇದಕ್ಕೆ ಒಡಂಬಡಲಿಲ್ಲ. ಹೀಗಾಗಿ ದಳ ನಮ್ಮೊಂದಿಗೆ ಮೈತ್ರಿ ಮಾಡಿಕೊಂಡಿತು.

(ಮುಂದುವರಿಯುವುದು)

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಹಲವಾರು ಗಂಭೀರ ಅಕ್ಷರ ದೋಷಗಳು ಹಾಗೇ ಮುದ್ರಿತವಾಗಿವೆ. ಪುಟ 14 ರಲ್ಲಿ ' ತತ್ವ ನೈತಿಕತೆಗಾಗಿ ಹೋರಾಟ' ಲೇಖನದಲ್ಲಿ - ಗುಡಿ ಕೈಗಾರಿಕೆ ಬದಲು ಗುಂಪುಗಾರಿಕೆ, ಜಾಗತೀಯ ಬದಲು ಜಾತೀಯ ಎಂದಾಗಬೇಕಿತ್ತು. ಪುಟ 3 ರಲ್ಲಿ ಈ ವಾರ ಕನಾಕರ್ನಾಟಕ 2 ಪ್ಯಾರದ ಕೊನೆಯ ಸಾಲು-ಚುನಾವಣೆಯ ಭರವಸೆ ಎನ್ನಲು ಕಾರಣವಿಲ್ಲ ಎಂದಿದೆ 'ಕಾರಣವಿಲ್ಲದಿಲ್ಲ' ... ಹಲವಾರು ಅಕ್ಷರದೋಷಗಳನ್ನು ಸರಪಡಿಸಿಕೊಂಡು

17ನೇ ಅಖಿಲ ಭಾರತ ಮಹಾ ಅಧಿವೇಶನಕ್ಕೆ ಮುನ್ನಡೆಯೋಣ



ಕರ್ನಾಟಕ ರಾಜ್ಯ ಸಮ್ಮೇಳನ ಮುಗಿಯುವದರೊಂದಿಗೆ ಸಮ್ಮೇಳನದ ಸರಣಿಯಲ್ಲಿ ಮೊದಲ ಘಟ್ಟ ಮುಗಿದಂತಾಗಿದೆ. ಇದೀಗ ಅತ್ಯಂತ ಪ್ರಮುಖವಾದ ಉನ್ನತ ಹಂತಕ್ಕೆ ಪ್ರವೇಶಿಸಿದ್ದೇವೆ ತಮ್ಮ ತಮ್ಮ ಪ್ರದೇಶಗಳ ರಾಜಕೀಯ ವಿಶ್ಲೇಷಣೆಯನ್ನು ಹೋರಾಟಗಳ ಅನುಭವವನ್ನು ಮಥನಮಾಡಿದ ಪಕ್ಷದ ಸಂಗಾತಿಗಳು, ಮತ್ತು ಘಟಕಗಳು, ಈಗ ಅಖಿಲ ಭಾರತ ರಾಜಕೀಯ ನಿರ್ಣಯದ ಚರ್ಚೆಯನ್ನು ಕೈಗೆತ್ತಿಕೊಳ್ಳುವ ಮೂಲಕ ಅದರ ರಾಜಕೀಯ ನಿರ್ಣಯವನ್ನು ಆಳವಾಗಿ ಅಭ್ಯಸಿಸುವ ಮೂಲಕ ಮತ್ತು ತಮ್ಮ ಅನುಭವದ ಆಧಾರದಲ್ಲಿ ತಿದ್ದುಪಡಿಯನ್ನು ಸೂಚಿಸುವುದರ ಮೂಲಕ ಪಕ್ಷದ ಅಖಿಲ ಭಾರತ ನಿಲವುಗಳನ್ನು ರೂಪಿಸುವ ಕೆಲಸದಲ್ಲಿ ಪಾಲ್ಗೊಳ್ಳಬೇಕಾಗಿದೆ. ತಮ್ಮ ತಮ್ಮ ಪ್ರದೇಶದ ಸಮ್ಮೇಳನಗಳನ್ನು ಎಷ್ಟು ಉತ್ಸಾಹದಿಂದ ಸಂಗಾತಿಗಳು ನಡೆಸಿದರೋ ಅಷ್ಟೇ ನಿಷ್ಠೆಯಿಂದ ಹಾಗೂ ಗಂಭೀರತೆಯಿಂದ ಅಖಿಲ ಭಾರತ ಮಹಾದಿವೇಶನವನ್ನು ಯಶಸ್ವಿಗೊಳಿಸುವ ಈ ಎರಡನೇ ಹಂತದ ಚರ್ಚೆಯಲ್ಲಿ ತೊಡಗಿಕೊಳ್ಳಬೇಕಾಗಿದೆ.

ನಾನಿನ್ನೂ ಆಗ ಕರ್ನಾಟಕ ಸರ್ಕಾರದ ಸೇವಕ. ಧಾರವಾಡದಲ್ಲಿ ಕೃಷಿ ಉಪನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದ ನಾನೂ ಬೆಂಗಳೂರಿಗೆ ಬಂದಿದ್ದೆ. ಮನೆಗೆ ಬಂದಿಳಿದು ಇನ್ನೂ ಬಟ್ಟೆ ಬದಲಿಸುತ್ತಿರುವಾಗಲೆ ಕೆಲವು ಸಂಗಾತಿಗಳು ನನಗೆ ಒಂದರ ಮೇಲೊಂದು ಪ್ರಶ್ನೆಗಳ ಸುರಿಮಳೆ ಕರೆದರು. ಜಿ.ಡಿ.ಪಿ. ಅಥವಾ ರಾಷ್ಟ್ರೀಯ ಉತ್ಪನ್ನ ಎಂದರೇನು? ಆರ್ಥಿಕ ಬಿಕ್ಕಟ್ಟು ಎಂದರೇನು? ಮುಂದ್ರಾ ಪ್ರಕರಣ ಎಲ್ಲಿಯದು? ಸಾಲ್ಕೀಯ ವರದಿ ಯಾವುದು, ಎಡ ಪ್ರಜಾಸತ್ತಾತ್ಮಕ ರಂಗ ಎಂದರೇನು? ವೈರುಧ್ಯ ಎಂದರೇನು? ಹೀಗೆ ಹಲವು ಪ್ರಶ್ನೆಗಳು ಎದುರಾದವು. ನನಗೆ ಬಹಳ ಆಶ್ಚರ್ಯವಾಯಿತು. ಈ ಪ್ರಶ್ನೆಗಳನ್ನೆಲ್ಲ ಕೇಳುತ್ತಿದ್ದವರೆಲ್ಲ ಪಿ.ಯು.ಸಿ, ಡಿಗ್ರಿಯ ಮೊದಲನೆ ವರ್ಷದಲ್ಲಿದ್ದ ವಿದ್ಯಾರ್ಥಿಗಳು. ಈ ಯಾವುದೇ ಪ್ರಶ್ನೆ ಅವರ ಪಠ್ಯ ಪುಸ್ತಕಗಳಿಗೆ ಸಂಬಂಧಿಸಿದ್ದು ಅಲ್ಲ. ಆಗ ಈ ಪ್ರಶ್ನೆಗಳು ಎಲ್ಲಿಂದ ಉದ್ಭವವಾದವು?

ಈ ಎಲ್ಲಾ ವಿದ್ಯಾರ್ಥಿಗಳು ಕೆಲವೇ ತಿಂಗಳುಗಳ ಹಿಂದೆ ವಿದ್ಯಾರ್ಥಿ ಸಂಘಟನೆಗೆ ಸೇರಿದ್ದವರು. ಅವರ ಚಳುವಳಿಯ ಅಥವಾ ಚಟುವಟಿಕೆಯ ಭಾಗವಾಗಿ ಉದ್ಭವಿಸುವ ಪ್ರಶ್ನೆಗಳಂತೂ ಅವಲ್ಲ. ಹೀಗಾಗಿ ಈ ಪ್ರಶ್ನೆಗಳು ಎಲ್ಲಿಂದ ಬಂದವು ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದಾಗ ಅವರುಗಳು ಪಕ್ಷದ 11ನೇ ಮಹಾದಿವೇಶನದ ಕರಡು ವರದಿಯನ್ನು ಅಭ್ಯಾಸ ಮಾಡುತ್ತಿದ್ದರೆಂದೂ, ಅಂದೆ ಬೆಳಿಗ್ಗೆ ಅದರ ಚರ್ಚೆಗಾಗಿ ಸೇರಲಿರುವ ಸಭೆಯೊಂದರಲ್ಲಿ ಪಾಲ್ಗೊಳ್ಳುತ್ತಿದ್ದಾರೆಂದು, ಅದಕ್ಕಾಗಿ ಅವರಿಗೆ ತುರ್ತಾಗಿ ಈ ಪ್ರಶ್ನೆಗಳಿಗೆ ಉತ್ತರ ಬೇಕಾಗಿದೆ ಎಂದು ತಿಳಿಯಿತು. ಹಾಗೆಯೇ ಹೊಸದಾಗಿ ಸೇರಿದ ಈ ವಿದ್ಯಾರ್ಥಿಗಳನ್ನು ಸಿಪಿಎಂ ಪಕ್ಷದ ಒಂದು ಸಹಾಯಕ ಗುಂಪಿನಲ್ಲಿ ಸೇರಿಸಿಕೊಂಡಿದ್ದಾರೆಂಬುದು ತಿಳಿಯಿತು. ಆಗ್ಗೆ ಪಕ್ಷಕ್ಕೆ ನಾನೂ ಕೂಡ ಹೊಸದಾಗಿ ಸದಸ್ಯನಾಗಿದ್ದವನು ನನಗೆ ಗೊತ್ತಾದ ರೀತಿಯಲ್ಲಿ ಅವರು ಕೇಳಿದ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡಿದೆ.

ಈ ಕಾರ್ಯವಿಧಾನಕ್ಕೆ ನಾನು ಬೆರಗಾದೆ

ಪಕ್ಷದ ಅಖಿಲ ಭಾರತ ಮಟ್ಟದಲ್ಲಿ ತೆಗೆದುಕೊಳ್ಳುವ ತೀರ್ಮಾನಗಳನ್ನು ಈ ಹೊಸ ಹುಡುಗರ ಗುಂಪೊಂದು ಚರ್ಚಿಸಬೇಕೆಂದು ಮತ್ತು ತಮ್ಮ ಅಭಿಪ್ರಾಯಗಳನ್ನು ನೀಡಬೇಕೆಂದು ಬಯಸುತ್ತಿರುವ ಸಿಪಿಐ(ಎಂ) ಪಕ್ಷದ ಈ ಕಾರ್ಯ ವಿಧಾನಕ್ಕೆ ನಾನು ಬೆರಗಾದೆ. ಪಕ್ಷದ ಸದಸ್ಯರೆಲ್ಲರನ್ನೂ ಮತ್ತು ಸದಸ್ಯರಲ್ಲದವರನ್ನೂ ಇಂತಹ ಉನ್ನತ ಮಟ್ಟದ ವಿಷಯಗಳ ಚರ್ಚೆಯಲ್ಲಿ ಪಾಲ್ಗೊಳಿಸುವ ಪ್ರಜಾಪ್ರಭುತ್ವೀಯ ರೀತಿ ಯಾವುದೇ ಪಕ್ಷದಲ್ಲಿ ಚಿಂತನೆಗೆ ತೊಡಗಿತು. ಅಂದೆಲ್ಲ ಬೇರೆ ಯಾವ ಕೆಲಸ ಮಾಡುತ್ತಿದ್ದರೂ ನನ್ನ ಮನಸ್ಸಿನಲ್ಲಿ ಇದೇ ವಿಚಾರಗಳೂ ಸುಳಿಯುತ್ತಿದ್ದವು. **ಈ ಘಟನೆ ನಾನು ಮಾರ್ಕ್ಸ್‌ವಾದವನ್ನು ಅರ್ಥಮಾಡಿಕೊಳ್ಳುವಲ್ಲಿ ಒಂದೂ ಪ್ರಮುಖ ಹೆಜ್ಜೆ ಹಾಕಲು ಸಹಾಯಕವಾಯಿತು.** ಕೊನೆಗೆ ಸರ್ಕಾರಿ ಕೆಲಸಕ್ಕೆ ರಾಜಿನಾಮೆ ನೀಡಿ ಪಕ್ಷದ ಪೂರ್ಣಾವದಿ ಕಾರ್ಯಕರ್ತನಾಗುವ ತೀರ್ಮಾನ ತೆಗೆದುಕೊಳ್ಳುವಲ್ಲಿ ಅಂದು ನನ್ನಲ್ಲಿ ಮೂಡಿದ ಬೆಳಗು ಒಂದು ಪ್ರಮುಖ ಕಾರಣವಾಯಿತು. ಈ ಘಟನೆಯನ್ನು ಇಲ್ಲಿ ಸ್ಮರಿಸಿಕೊಳ್ಳಲು ಕಾರಣ ಪಕ್ಷದ ಕಾರ್ಯವಿಧಾನದಲ್ಲಿ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯದ ಚರ್ಚೆ ಎಷ್ಟೊಂದು ಮುಖ್ಯ ಪಾತ್ರವನ್ನು ವಹಿಸುತ್ತಿದೆ ಎಂಬುದನ್ನು ಸೂಚಿಸುವುದು.

ಎರಡು ಹಂತದ ಚರ್ಚೆ

ನಮ್ಮ ಪಕ್ಷದಲ್ಲಿ ಆರಂಭದಿಂದ ಹಿಡಿದು 1988ರಲ್ಲಿ ನಡೆದ 13ನೇಯ ಮಹಾಧಿವೇಶನದವರೆಗೂ ಶಾಖಾ ಸಮ್ಮೇಳನದಿಂದ ಆರಂಭವಾಗಿ ಎಲ್ಲಾ ಸಮ್ಮೇಳನ ಗಳಲ್ಲೂ ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ರಾಜಕೀಯದ ದಿಕ್ಕು ದೆಶೆಗಳ ಬಗ್ಗೆ ಚರ್ಚೆ ನಡೆಸಲಾಗುತ್ತಿತ್ತು. ಈ ಎಲ್ಲಾ ಸಮ್ಮೇಳನಗಳ ವರದಿಯಲ್ಲಿ ಈ ವಿಷಯಗಳು ಪ್ರಮುಖ ಭಾಗವಾಗಿರುತ್ತಿದ್ದವು. ಏಕೆಂದರೆ ಒಂದು ಅಂತರ್‌ರಾಷ್ಟ್ರೀಯ ಚಳುವಳಿಯಾಗಿ ಕಮ್ಯುನಿಸ್ಟ್ ಪಕ್ಷದ ಪ್ರತಿಯೊಬ್ಬ ಸದಸ್ಯರೂ ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಆರ್ಥಿಕ ರಾಜಕೀಯ ಬೆಳವಣಿಗೆಗಳ ಬಗ್ಗೆ ಸ್ಪಷ್ಟವಾದ ಮಾರ್ಕ್ಸ್‌ವಾದಿ ಕಣ್ಣೋಟವನ್ನು ಹೊಂದಿರಬೇಕಾದ್ದು ಒಂದು ಕ್ರಾಂತಿಕಾರಿ ಅಗತ್ಯ. ಆದರೆ ಶಾಖಾ ಸಮ್ಮೇಳನ ತಾಲೂಕ ಸಮ್ಮೇಳನ, ಜಿಲ್ಲಾ ಸಮ್ಮೇಳನ, ಹಾಗೂ ರಾಜ್ಯ ಸಮ್ಮೇಳನಗಳಲ್ಲಿ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿಚಾರಗಳ ಬಗೆಗೆ ಹೆಚ್ಚು ಚರ್ಚೆಯಾಗುತ್ತಾ ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದ ರಾಜಕೀಯ ಮತ್ತು ಆರ್ಥಿಕ ಚಲನೆಗಳು ಹಾಗೂ ಆಯಾ ಮಟ್ಟಗಳಲ್ಲಿ ಪಕ್ಷದ ಹಿನ್ನೆಲೆಯಲ್ಲಿ ಪಕ್ಷದ ಕೇಂದ್ರ ಸಮಿತಿ ಚರ್ಚಿಸಿ ಪಕ್ಷದೊಳಗಿನ ಚರ್ಚೆಯನ್ನು ಎರಡು ಹಂತದಲ್ಲಿ ನಡೆಸಬೇಕೆಂದು ಶಾಖಾ ಸಮ್ಮೇಳನಗಳಿಂದ, ರಾಜ್ಯ ಸಮ್ಮೇಳನಗಳವರೆಗೆ ಆಯಾ ಪ್ರದೇಶದ ರಾಜಕೀಯ ಆರ್ಥಿಕ ಬೆಳವಣಿಗೆಗಳೂ, ಆಯಾ ಪ್ರದೇಶಗಳಲ್ಲಿ ಪಕ್ಷದ ಕೆಲಸ ಮತ್ತು ಸಂಘಟನೆಯ ವಿಚಾರಗಳು, ಪ್ರಮುಖವಾಗಿ ಚರ್ಚೆಯಾಗಬೇಕೆಂದು ನಿರ್ದೇಶನ ನೀಡಿತ್ತು.

ಪಕ್ಷದ ಸಂವಿಧಾನದ ನಿರ್ದೇಶನದಂತೆ ಮಹಾಧಿವೇಶನದ ಎರಡು ತಿಂಗಳ ಮೊದಲೇ ಎಲ್ಲಾ ಭಾಷೆಗಳಿಗೆ ಭಾಷಾಂತರವಾಗಿ ಲಭ್ಯವಾಗುವ ಮಹಾಧಿವೇಶನದ ಕರಡು ವರದಿಯ ಚರ್ಚೆಯಲ್ಲಿ ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಬೆಳವಣಿಗೆಗಳನ್ನು ಪಕ್ಷ ಇಡಿಯಾಗಿ ಚರ್ಚೆಗೆ ಒಳಪಡಿಸಬೇಕೆಂದು, ಆ ಮೂಲಕ ಪಕ್ಷದ ಸದಸ್ಯರು ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿಚಾರಗಳ ಬಗ್ಗೆ ಮಾರ್ಕ್ಸ್‌ವಾದಿ ಕಣ್ಣೋಟವನ್ನು ರೂಪಿಸಿಕೊಳ್ಳಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿತು.

ಹೀಗೆ, ನಾಲ್ಕು ಮಹಾ ಧಿವೇಶನಗಳ ಕಾಲದಿಂದ ಪಕ್ಷದ ಸಮ್ಮೇಳನಗಳ ಚರ್ಚೆಯೂ ಎರಡೂ ಹಂತಗಳಲ್ಲಿ ನಡೆಯ ಬೇಕಾಗಿದೆ. ಒಂದಕ್ಕೊಂದು ನಿಕಟ ಸಂಬಂಧವಿರುವ ಈ ಎರಡೂ ಹಂತಗಳ ಚರ್ಚೆಗಳೂ ಆಳವಾಗಿ ಮತ್ತು ಗಂಭೀರವಾಗಿ ನಡೆಯದೆ ಪಕ್ಷದ ಸಮ್ಮೇಳನದ ಚರ್ಚೆಗಳು ಪೂರ್ಣಗೊಳ್ಳುವುದಿಲ್ಲ. ಆಗ ಪಕ್ಷದ ಕಾರ್ಯದರ್ಶಿಯಾಗಿದ್ದ ಕಾಂ। ಇ.ಎಂ.ಎಸ್. ನಂಬೂದರಿಪಾದ್‌ರವರು ಬೆಂಗಳೂರು ಜಿಲ್ಲೆಯ ಪಕ್ಷದ ಸರ್ವಸದಸ್ಯರ ಸಭೆಯೊಂದರಲ್ಲಿ ಪಕ್ಷದೊಳಗಿನ 2 ಹಂತಗಳ ಚರ್ಚೆಯ ಅಗತ್ಯವನ್ನು ಮತ್ತು 2ನೇ ಹಂತದ ಚರ್ಚೆಯ ಮಹತ್ವವನ್ನು ಎಳೆಎಳೆಯಾಗಿ ಬಿಡಿಸಿದರು.


ಜಿ.ಎನ್.ನಾಗರಾಜ್

ಈ ಎರಡು ಹಂತಗಳ ಚರ್ಚೆಯಲ್ಲಿ ತಾಲೂಕು, ಜಿಲ್ಲಾ ಸಮ್ಮೇಳನಗಳು ಹಾಗೂ ರಾಜ್ಯ ಸಮ್ಮೇಳನ ಸಂಘಟಿಸುವಲ್ಲಿ ಪಕ್ಷದ ಸದಸ್ಯರು ಮತ್ತು ಸಮಿತಿಗಳು ತಮ್ಮೆಲ್ಲ ಶ್ರಮವನ್ನು ಹಾಕಿ ಮೆರವಣಿಗೆ, ಬಹಿರಂಗಸಭೆ, ಸಮ್ಮೇಳನಗಳ ವರದಿಯನ್ನು ಸಿದ್ಧಪಡಿಸುವುದು, ಸಮ್ಮೇಳನಗಳಲ್ಲಿ ಚರ್ಚೆಗೊಳಪಡಿಸುವುದು, ಸಮಿತಿಗಳ ಆಯ್ಕೆ ಇವುಗಳನ್ನು ಉತ್ಸಾಹದಿಂದ ಮತ್ತು ನಿಷ್ಠೆಯಿಂದ ನಡೆಸುತ್ತಿದ್ದಾರೆ. ಆದರೆ ಅದೇ ಗಂಭೀರತೆ ಮತ್ತು ಸಂಘಟಿಸಲಾಗುತ್ತಿಲ್ಲ. ಇದು ಇತ್ತೀಚಿಗೆ ಪಕ್ಷಕ್ಕೆ ಸೇರಿದ ಸದಸ್ಯರ ರಾಜಕೀಯ ಪ್ರಜ್ಞೆಯ ಬೆಳವಣಿಗೆಗೆ ಮತ್ತು ಮಾರ್ಕ್ಸ್‌ವಾದಿ ವಿಶ್ಲೇಷಣೆಯ ವಿಧಾನವನ್ನು ಮೈಗೂಡಿಸಿಕೊಳ್ಳುವ ಕ್ರಿಯೆಗೆ ದೊಡ್ಡ ಅಂತಂಕವನ್ನೊಡ್ಡಿದೆ. ಆದುದರಿಂದ ಪಕ್ಷದ ಎಲ್ಲಾ ಘಟಕಗಳೂ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯವನ್ನು ನಿಷ್ಠೆಯಿಂದ ಆಳವಾಗಿ ಅಧ್ಯಯನ ಮಾಡಬೇಕು. ಅದರಲ್ಲಿರುವ ಪ್ರತಿ ವಿಚಾರವನ್ನೂ (ಪರಿಕಲ್ಪನೆಯನ್ನು) ಅರ್ಥ ಮಾಡಿಕೊಳ್ಳಲು ಶ್ರಮಿಸಬೇಕು. ಮೇಲ್ ಸಮಿತಿಗಳು ಕೆಳಸಮಿತಿಗಳಲ್ಲಿ ಈ ಚರ್ಚೆಯನ್ನು ಸಂಘಟಿಸುವುದು ಮತ್ತು ನಿರ್ಣಯದಲ್ಲಿರುವ ವಿಚಾರಗಳನ್ನು ಅರ್ಥಮಾಡಿಕೊಳ್ಳುವಂತೆ ಮಾಡುವುದು ಮಹಾಧಿವೇಶನದ ಮೊದಲಿನ ದಿನಗಳಲ್ಲಿ ತಮ್ಮ ಆದ್ಯ ಕರ್ತವ್ಯವೆಂದು ತಿಳಿಯಬೇಕು.

ಬಂಡವಾಳಶಾಹಿ ಎಂಬ ಪ್ರಥಮ ವಿಶ್ವ ವ್ಯವಸ್ಥೆ

ಜಾಗತಿಕ ಬೆಳವಣಿಗೆಗಳನ್ನು ಅರ್ಥ ಮಾಡಿಕೊಳ್ಳದೆ ಪಕ್ಷದ ಯಾವ ಸದಸ್ಯರೂ ಉತ್ತಮ ಕೆಲಸ ಮಾಡಲು ಹಾಗೂ ಉನ್ನತ ಮಟ್ಟದ ಚಳುವಳಿಗಳನ್ನು ಸಂಘಟಿಸಲು ಸಾಧ್ಯವಾಗುವುದಿಲ್ಲ. ಬಂಡವಾಳ ಶಾಹಿಯ ಆರಂಭದ ದಿನಗಳಿಂದಲೇ ಈ ಪದ್ಧತಿಯು ಒಂದು ವಿಶ್ವವ್ಯವಸ್ಥೆಯಾಗಿದೆ. ಇಡೀ ವಿಶ್ವವನ್ನು ತನ್ನ ತೆಕ್ಕೆಗೆ ಒಳಪಡಿಸುತ್ತಾ ನಡೆದಿದೆ. ಜಾಗತೀಕರಣ, ಖಾಸಗಿಕರಣ, ಉದಾರಿಕರಣ ನೀತಿಗಳನ್ನು ಭಾರತದಲ್ಲಿ ಹರಿಬಿಟ್ಟ ನಂತರವಂತೂ ಈ ಮಾತು ಮತ್ತಷ್ಟು ಪ್ರಮುಖವಾಗಿದೆ. ಮತ್ತು ಜನಸಾಮಾನ್ಯರಿಗೂ ಅರ್ಥವಾಗುತ್ತಿದೆ. ಇತ್ತೀಚೆಗೆ ಭಯೋತ್ಪಾದಕರ ಧಾಳಿಗಳು ಮತ್ತು ಅಫಘಾನಿಸ್ತಾನದ ಮೇಲೆ ನಡೆದ ಯುದ್ಧ ಮತ್ತು ನಂತರದ ಪರಿಸ್ಥಿತಿಯಲ್ಲಿ ಇಡೀ ವಿಶ್ವದ ಮೇಲೆ ತನ್ನ ಅಧಿಪತ್ಯವನ್ನು ಹೇರಲು ಅಮೇರಿಕಾ ನಡೆಸುತ್ತಿರುವ ಕುತಂತ್ರಗಳು ಈ ಹಿನ್ನೆಲೆಯಲ್ಲಿ ಜಾಗತಿಕ ಬೆಳವಣಿಗೆಗಳನ್ನು ಮಾರ್ಕ್ಸ್‌ವಾದಿ ಕಣ್ಣೋಟದಿಂದ ಅರ್ಥ ಮಾಡಿಕೊಳ್ಳುವುದು ಮುಖ್ಯ. ಇಂದು ಜನಸಾಮಾನ್ಯರಲ್ಲಿಯೇ ಈ ವಿಷಯಗಳು ಹೆಚ್ಚು ಪ್ರಚಲಿತವಾಗಿರುವ ಹಿನ್ನೆಲೆಯಲ್ಲಿ ಹಾಗೂ ಬಂಡವಾಳಶಾಹಿ ಪತ್ರಿಕೆಗಳು ಮತ್ತು ಮಾಧ್ಯಮಗಳು ಒಂದು ಕಡೆ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಮತ್ತೊಂದು ಕಡೆ ಅದರಲ್ಲಿಯೂ ಆರ್.ಎಸ್.ಎಸ್. ಮತ್ತು ಅದರ ಪರಿವಾರ ಜನರಲ್ಲಿ ಗೊಂದಲವನ್ನು ಮೂಡಿಸಿ ತಪ್ಪು ದಾರಿಗೆಳೆಯಲು ಹಾಗೂ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ದ್ವೇಷವನ್ನು ಕಾರಲು ಬಳಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪಕ್ಷದ ಪ್ರತಿ ಸದಸ್ಯನೂ ಮತ್ತು ಮೇಲ್ ಸಮಿತಿಗಳ ಸದಸ್ಯರು ಜಾಗತಿಕ ಬೆಳವಣಿಗೆಗಳ ಬಗ್ಗೆ ಮಾರ್ಕ್ಸ್‌ವಾದಿ ಕಣ್ಣೋಟವನ್ನು ಅರಿತುಕೊಳ್ಳುವುದು ಮತ್ತು ಅದನ್ನು ಜನಸಾಮಾನ್ಯರ ನಡುವೆ ಕೊಂಡೊಯ್ಯುವುದು ಆದ್ಯತೆಯ ಕೆಲಸವಾಗಿದೆ.

ಹಾಗೆಯೇ ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಎನ್.ಡಿ.ಎ. ಕೂಟವನ್ನು ಬದಿಗೊತ್ತಿ ಬಿಜೆಪಿಯೇ ಪ್ರಧಾನವಾಗಿ ಸರ್ಕಾರದ ಎಲ್ಲಾ ಅಂಗಗಳಲ್ಲೂ, ಆಡಳಿತದ ಎಲ್ಲಾ ರಂಗಗಳಲ್ಲಿಯೂ ಆರ್.ಎಸ್.ಎಸ್. ಪ್ರಮುಖ ಕಾರ್ಯಕರ್ತರನ್ನು ನೇಮಿಸುತ್ತಾ ಅವುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿರುವಾಗ ಈ ಪ್ರಕ್ರಿಯೆಯ ಅಪಾಯವನ್ನು ಅರ್ಥಮಾಡಿಕೊಳ್ಳುವುದು ಒಂದು ಪ್ರಮುಖವಾದ ಕೆಲಸ. ಅದೇ ಸಮಯದಲ್ಲಿಯೆ ಭಾರತದ ದೇಶ ಪ್ರೇಮಿ ಮಿಲಿಟರಿ ಪಡೆಯನ್ನು ಅಮೇರಿಕಾದ



ಈಗ ಆಲಮಟ್ಟಿ ಆಣೆಕಟ್ಟೆಯನ್ನೇ ಕೇಂದ್ರವಾಗಿರಿಸಿಕೊಂಡು, ಕೃಷ್ಣಾ ನದಿಯ ನೀರನ್ನು ಬಳಸಿಕೊಳ್ಳುವುದರತ್ತ ಎಲ್ಲರ ಮಾತು, ಗಮನ. ಅದರ ಹರಿಕಾರರು ತಾವೇ ಎಂದು ಬಿಂಬಿಸಲು ಆಳುವ ಪಕ್ಷದ ಮತ್ತು ಹಲವರ ಸ್ಪರ್ಧೆ. ಆದರೆ ಸ್ವಾತಂತ್ರ್ಯ ಸಂಗ್ರಾಮದ ಹೊತ್ತಿನಲ್ಲೇ ಈ ನೀರಾವರಿ ಪ್ರಶ್ನೆಯನ್ನೆತ್ತಿ, ಬರದ ಬೆಂಗಾಡಾಗಿರುವ ಬಿಜಾಪುರ ಜಿಲ್ಲೆಯ ಭೂಮಿಗಳಿಗೆ ನೀರುಣಿಸಿ ಸಮೃದ್ಧಿಯನ್ನು ಸಾಧಿಸಲು ನಿರ್ದಿಷ್ಟ ಯೋಜನೆ-ಕಾರ್ಯತಂತ್ರ ಮುಂದಿಟ್ಟು ಹೋರಾಟ ರೂಪಿಸಿದ್ದು ಕಮ್ಯುನಿಸ್ಟ್ ಚಳುವಳಿ. ಇದರಲ್ಲಿ ಮುಖ್ಯಪಾತ್ರ ವಹಿಸಿದವರಲ್ಲಿ ಎದ್ದು ಕಾಣುವ ಹೆಸರು ದಿವಂಗತ ಸಂಗಾತಿ ಎನ್.ಕೆ.ಉಪಾಧ್ಯಾಯರದ್ದು. ಈ ಫೆಬ್ರವರಿ 16 (1916) ಅವರು ಹುಟ್ಟಿದ ದಿನ. ಈ ಸಂದರ್ಭಕ್ಕೆ ಅವರದ್ದೇ ಲೇಖನದಿಂದ ಆಯ್ದ ಭಾಗ ಪ್ರಕಟಿಸಲಾಗಿದೆ. ('ಕೃಷ್ಣೆಯ ನೀರು - ರೈತರ ಕಣ್ಣೀರು' ಹೊತ್ತಿಗೆಯಿಂದ)

ಆಲಮಟ್ಟಿ ಆಣೆಕಟ್ಟಿನ ಕರ್ಮಕಾಂಡ

ಆಲಮಟ್ಟಿ ಯೋಜನೆ ಹಿನ್ನೆಲೆ - ಪ್ರಥಮ ಹೋರಾಟ

"ನೀರಿಂಗಾಗಿ ಹಾತೊರೆಯುವ, ಬರಗಾಲಕ್ಕೆ ತುತ್ತಾಗುತ್ತಿರುವ ಮೈಸೂರು ರಾಜ್ಯದ ಉತ್ತರ ಭಾಗದಲ್ಲಿ ಹರಿಯುತ್ತಿರುವ ಕೃಷ್ಣಾನದಿ ಅತಿ ಮಹತ್ವದ್ದಾಗಿದೆ. ಇಂಥ ಪ್ರದೇಶದ ಜನರ ಸಂಕಷ್ಟ ದೂರ ಮಾಡುವ ದೃಷ್ಟಿಯಿಂದ, ಹೆಚ್ಚಿನ ಪ್ರದೇಶವನ್ನು ನೀರಾವರಿಯಾಗಿ ಪರಿವರ್ತಿಸಿ, ಅಭಿವೃದ್ಧಿಗೊಳಿಸಿ, ಒಣಗಿರುವ ಭೂಮಿಯನ್ನು ಹಸಿರುಗೊಳಿಸುವ ಉದ್ದೇಶದಿಂದ ಕೃಷ್ಣಾ ನದಿಗೆ ಬಾಗೇವಾಡಿ ತಾಲೂಕಿನ (ಬಿಜಾಪುರ ಜಿಲ್ಲೆ) ಆಲಮಟ್ಟಿಯಲ್ಲಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಶೋರಾಪುರ ತಾಲೂಕಿನ ನಾರಾಯಣಪುರದಲ್ಲಿ ಆಣೆಕಟ್ಟು ನಿರ್ಮಿಸುವ ನೀರಾವರಿ ಯೋಜನೆಯ ಸಿದ್ಧತೆ ನಡೆದಿದೆ. 12 ಲಕ್ಷ ಎಕ್ರೆ ಭೂಮಿಗೆ ನೀರುಣಿಸಲು ಆಲಮಟ್ಟಿ ಆಣೆಕಟ್ಟಿನಿಂದ ಎಡದಂಡೆ ಕಾಲುವೆ, ನಾರಾಯಣಪುರ ಆಣೆಕಟ್ಟೆಯಿಂದ ಎರಡು ಕಾಲುವೆ ತೆಗೆಯಲಾಗುವುದು. ಮುಂದಿನ ದಿವಸಗಳಲ್ಲಿ 340 ಟಿ.ಎಂ.ಸಿ. ನೀರನ್ನು ಉಪಯೋಗಿಸಲು ಯೋಜನೆ ರೂಪಿಸಲಾಗುವುದು" ಎಂದು ಆ ಯೋಜನೆಯಲ್ಲಿ ಹೇಳಲಾಗಿತ್ತು.


"ಈ ಯೋಜನೆಗೆ ಒಟ್ಟು ಖರ್ಚು ರೂ. 120 ಕೋಟಿ. ಈ ಯೋಜನೆ ಪ್ರಕಾರ ಅಧಿಕಾರಿಗಳ; ನೌಕರರ ಕಟ್ಟಡ, ರಸ್ತೆ ನಿರ್ಮಾಣ 1964 ರಲ್ಲೇ ಮುಗಿದಿದೆ. ಯೋಜನಾ ಆಯೋಗದವರು ಈ ಯೋಜನೆಯ ಒಂದನೇ ಘಟ್ಟದ ರೂ. 58.2 ಕೋಟಿಯ ಯೋಜನೆಗೆ ತಾಂತ್ರಿಕವಾಗಿ ಮಂಜೂರಾತಿ ನೀಡಿದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆ. ಕೆಲಸ ಶೀಘ್ರವೇ ಪ್ರಾರಂಭಿಸಲಾಗುವುದು" ಎಂದು ರಾಜ್ಯ ಸರ್ಕಾರದ ಯೋಜನೆಯ ಪ್ರಸ್ತಾವನೆ ತಿಳಿಸಿತ್ತು.

ಆದರೆ ಯೋಜನಾ ಆಯೋಗದ ಉಪಾಧ್ಯಕ್ಷ ಅಶೋಕ ಮೆಹ್ತಾರವರು ಈ ಯೋಜನೆಯಲ್ಲಿ ಪ್ರತಿ ಎಕರೆ ನೀರಾವರಿಗೆ ಅತಿ ಹೆಚ್ಚಿನ ಖರ್ಚಾಗುವುದರಿಂದ ಸಂಪನ್ಮೂಲಗಳ ಕೊರತೆಯಿಂದ ಆಲಮಟ್ಟಿ ಯೋಜನೆಯನ್ನು ಸಂಪೂರ್ಣ ಕೈಬಿಡಲಾಗಿದೆಯೆಂದೂ ನಾರಾಯಣಪುರ ಯೋಜನೆಗಳಿಗೆ ಮಾತ್ರ ನವೆಂಬರ್ 1963 ರಂದು ಮಂಜೂರಾತಿ ನೀಡಲಾಯಿತೆಂದೂ 28.1.1964 ರಲ್ಲಿ ತಿಳಿಸಿದ್ದರು.

ಬಲಗಾಲಪೀಡಿತ ಬಿಜಾಪುರಕ್ಕೆ ಕಾಮಧೇನುವಾಗಿ ಬರಲಿದ್ದ ಆಲಮಟ್ಟಿ ಆಣೆಕಟ್ಟನ್ನು ಪೂರ್ಣ ಕೈಬಿಡಲಾಗಿದೆಯೆಂಬ ಸುದ್ದಿ ಕಾಡ್ಗಿಚ್ಚಿನಂತೆ ಹರಡಿ ಜನರಲ್ಲಿ ನಿರಾಶೆ ಮಾತ್ರವಲ್ಲದೆ ಸಿಟ್ಟೂ ಉಕ್ಕೇರಿ ಬಂತು. ಎಲ್ಲಾ ಕ್ಷೇತ್ರಗಳಲ್ಲಿ ಪ್ರತಿಭಟನೆಗೆ ನಾಂದಿ ಹಾಕಿತು. ಬರಗಾಲದ ಬವಣೆಗೆ ತುತ್ತಾಗಿ ಕಠಿಣ ಪರಿಸ್ಥಿತಿಯನ್ನೆದುರಿಸುತ್ತಿರುವ ಬಿಜಾಪುರ ಜಿಲ್ಲೆಗಾದ ಪರಮಾವಧಿ ಅನ್ಯಾಯವನ್ನೆದುರಿಸಲು ಕಮ್ಯುನಿಸ್ಟ್ ಪಾರ್ಟಿ, ಕೃಷ್ಣಾ ಯೋಜನೆಗಾಗಿ ಜೀವದ ಹಂಗು ಬಿಟ್ಟು ಚಿಂತನೆ ಮಾಡುತ್ತಿದ್ದ ಮುರಿಗೆಪ್ಪಣ್ಣ ... ಬಿಜಾಪುರಕಾದ ಅನ್ಯಾಯದ ...

... ನವರು ಆಲಮಟ್ಟಿ ಯೋಜನೆಯನ್ನು ಕೈಬಿಟ್ಟಿದ್ದನ್ನು ತೀವ್ರವಾಗಿ ಖಂಡಿಸಿ ಚಳುವಳಿ ಹೂಡುವ ಬೆದರಿಕೆ ಒಡ್ಡಿದರು ಮತ್ತು ಬಿಜಾಪುರ ಜಿಲ್ಲೆಯ ಆಲಮಟ್ಟಿ ಯೋಜನೆ ಕೈಗೊಳ್ಳದಿದ್ದರೆ ನಮ್ಮ ಜಿಲ್ಲೆಯ ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರು ಹಾಗೆಯೇ ನಮ್ಮ ಜಿಲ್ಲೆಯನ್ನು ಪ್ರತಿನಿಧಿಸುವ ಶ್ರೀಮಾನ್ ನಿಜಲಿಂಗಪ್ಪ, ಕಂಠಿ ಮತ್ತು ಜತ್ತಿಯವರೂ ತಮ್ಮ ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟು ಹೊರಗೆ ಬರಬೇಕೆಂದು ಕರೆ ನೀಡಲಾಯಿತು. 23.1.1964 ರಲ್ಲಿ ಸಂದರ್ಶನ ವಾರಪತ್ರಿಕೆಯ ಸಂಪಾದಕೀಯದಲ್ಲಿ 'ಆಲಮಟ್ಟಿಗೆ ಆತಂಕವೇಕೆ' ಎಂಬ ಶೀರ್ಷಿಕೆಯಡಿಯಲ್ಲಿ 'ಆಲಮಟ್ಟಿಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಪ್ರಕಾರ ಆಣೆಕಟ್ಟನ್ನು ಕಟ್ಟದಿದ್ದರೆ ಬಿಜಾಪುರದ ಬರಗಾಲ ಭೂತವನ್ನು ಇಲ್ಲಿಂದ ಓಡಿಸಲು ಸಾಧ್ಯವೇ ಇಲ್ಲ. ಈ ಮಾತು ನಿಚ್ಚಳವೆಂಬುದಕ್ಕೆ ಮೈಸೂರು ಸರಕಾರವೇ ತಮ್ಮ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿದ ಮಾತೇ ನಿದರ್ಶನವಾಗಿದೆ' ಎಂದು ಬರೆಯಿತು.

ಆ ಯೋಜನಾ ವರದಿಯಲ್ಲಿ 1903 ರಿಂದ 1947 ರ ಅವಧಿಯಲ್ಲಿ ಅಂದರೆ 44 ವರ್ಷಗಳಲ್ಲಿ 11 ಸಲ ಬರಗಾಲವನ್ನು ಸಾರಬೇಕಾದ ಪ್ರಸಂಗವು ಬಿಜಾಪುರ ಜಿಲ್ಲೆಗೆ ಬಂದಿದೆ ಎಂದು ಹೇಳಿರುವರು. ಹಾಗೆಯೇ ಬರಗಾಲ ಪರಿಹಾರಕ್ಕಾಗಿ ಕೋಟ್ಯಾಂತರ ರೂಪಾಯಿಗಳು ಈಗಾಗಲೇ ಖರ್ಚಾಗಿರುವುದನ್ನು



ಆಲಮಟ್ಟಿ ಜಲಾಶಯ

ಒಪ್ಪಿಕೊಂಡಿರುವರು. ಇದೇ ಸಂದರ್ಭದಲ್ಲಿ ಅವರು ಇನ್ನೂ ಒಂದು ಮಹತ್ವದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಅದು ಚಿಕ್ಕ ಹಾಗೂ ಮಧ್ಯಮ ತರಗತಿಯ ನೀರಾವರಿಯೋಜನೆಗಳಿಂದ ಬಿಜಾಪುರ ಜಿಲ್ಲೆಯ ಬರಗಾಲವು ಹಿಂಗಲಾರದೆ? ಎಂಬ ಪ್ರಶ್ನೆಗೆ ಸಂಬಂಧಿಸಿ. ಈ ನೀರಿಲ್ಲದ ಜಿಲ್ಲೆಗಳಲ್ಲಿ ...

ಹೇಳಿರುವುದು.

"ಈ ಹಿನ್ನೆಲೆಯನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ವಿಚಾರ ಮಾಡಿದರೆ ಆಲಮಟ್ಟಿ ಆಣೆಕಟ್ಟಿನ ಯೋಜನೆಯನ್ನು ಈಗ ಕೈಗೊಳ್ಳದಿದ್ದರೆ ಬಿಜಾಪುರ ಜಿಲ್ಲೆಯನ್ನು ವಿಶೇಷತಃ ಉತ್ತರ ಭಾಗವನ್ನು ನಿರಂತರವಾಗಿ ಬರಗಾಲ ಭೂತಕ್ಕೆ ಬಲಿದಾನ ಮಾಡಿದ ಅಪಕೀರ್ತಿಯು ಮೈಸೂರು ಸರಕಾರಕ್ಕೂ ನಮ್ಮ ಜನಪ್ರತಿನಿಧಿಗಳಿಗೂ ಬಾರದೆ ಇರಲಾರದು. ಈ ವಿಷಯದಲ್ಲಿ ಮೀನಮೇಷ ಮಾಡದೆ ಸುಸಂಘಟಿತವಾಗಿ ಕರ್ನಾಟಕದ ಪ್ರತಿನಿಧಿಗಳು ಬೇಗ ಆಲಮಟ್ಟಿ ಆಣೆಕಟ್ಟಿನ ಯೋಜನೆಗೆ ಆಗ್ರಹಿಸಿ ಅದು ದೊರಕುವಂತೆ ಮಾಡಬೇಕು ಹಾಗೆಯೇ ಕರ್ನಾಟಕದ ಸಮಸ್ಯೆಗಳ ಪರಿಹಾರಕ್ಕಾದರೂ ತೀವ್ರತರವಾಗಿ ಶ್ರಮಿಸಬೇಕು" ಎಂದು ಅದು ಜನಾಭಿಪ್ರಾಯವನ್ನು ಬಹಿರಂಗಗೊಳಿಸಿತ್ತು.

ಜನತೆಯ ಒತ್ತಡ ಮಿತಿಮೀರಿದಾಗ ಅನಿವಾರ್ಯವಾಗಿ ಆಲಮಟ್ಟಿ ಯೋಜನೆ ಆಗದಿದ್ದರೆ ನಾವೆಲ್ಲರೂ ರಾಜಿನಾಮೆ ಕೊಡುವೆವು ಎಂದು 16.3.64 ರಲ್ಲಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶರಣಯ್ಯ ವಸ್ತ್ರದ ಘೋಷಿಸಬೇಕಾಯಿತು. ಈ ರೀತಿ ಹಲವಾರು ಸಂಘ ಸಂಸ್ಥೆಗಳೂ ಕಾಂಗ್ರೆಸ್ ಪಕ್ಷ ಆಲಮಟ್ಟಿ ಆಣೆಕಟ್ಟಿನ ಕೆಲಸ ಪ್ರಾರಂಭಿಸಬೇಕೆಂದು ಒತ್ತಾಯ ತಂದರೂ ಕೇಂದ್ರ ಮತ್ತು ರಾಜ್ಯ ಸರಕಾರ ಅದರ ಕುರಿತು ಗಂಭೀರ ಚಿಂತನೆ ಮಾಡಿ ಕಾರ್ಯ ಪ್ರಾರಂಭಿಸಲು ಮುಂದೆ ಬಾರದಿದ್ದಾಗ ಬಿಜಾಪುರ ಜಿಲ್ಲಾ ಕಮ್ಯುನಿಸ್ಟ್ ಪಾರ್ಟಿ ಸಣ್ಣ ಪಾರ್ಟಿಯಾಗಿದ್ದರೂ ಕೂಡ ಧೈರ್ಯ ಮಾಡಿ 1964 ಫೆಬ್ರವರಿ ತಿಂಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ಕೆಲಸ ಪ್ರಾರಂಭಿಸಲು ಒಂದು ತಿಂಗಳ ನೋಟೀಸು ಕೊಟ್ಟು ಹೋರಾಟದ ಕಣಕ್ಕಿಳಿದು ಸಿದ್ಧತೆ ನಡೆಸುವ ಧೈರ್ಯ ತೋರಿಸಿತು. ಎಲ್ಲರೂ ಅದನ್ನು ಸ್ವಾಗತಿಸಿದರು. ಸರಕಾರದಿಂದ ... 15.3.1964 ರಿಂದ

ಡಿ.ಎಚ್.ಬಿಳಗಿ, ಸ್ಟಾಂಡಿಂಗ್ ಕಮಿಟಿ ಚೇರ್‌ಮನ್ ರಮೇಶ್ ಕಡಗದ ಕೈ, ಸ್ಯಾನಿಟರಿ ಕಮಿಟಿ ಚೇರ್‌ಮನ್ ಎನ್.ಕೆ.ಉಪಾಧ್ಯಾಯ, ದೇಶಾಭಿಮಾನಿ ಪತ್ರಿಕೆ ಸಂಪಾದಕ ಲಾಯದ ಗುಂದಿ, ಮಾಜಿ ಶಾಸಕ ಬಾಬು ಹುಜೂರೆ ಹಾಗೂ ನಗರಸಭೆ ಸದಸ್ಯರು, ಹಿರಿಯ ಮುಖಂಡ ಎಂ.ಎಸ್.ಸುಗಂಧಿಯವರನ್ನೊಳಗೊಂಡ 10 ಜನ ಅನ್ನ ಸತ್ಯಾಗ್ರಹ ಪ್ರಾರಂಭಿಸಿದರು.

ಎರಡನೇ ದಿನ ನಗರಸಭೆ ಉಪಾಧ್ಯಕ್ಷರನ್ನೊಳಗೊಂಡು 21 ಜನ,ಮೂರನೇ ದಿನ 11 ವರ್ಷದ 3 ಹುಡುಗರು ಸೇರಿ 27 ಹೆಣ್ಣು ಮಕ್ಕಳ ಅನ್ನ ಸತ್ಯಾಗ್ರಹ, ನಾಲ್ಕನೇ ದಿನ 63 ಹೀಗೆ ವಕೀಲರೂ, ವ್ಯಾಪಾರಸ್ಥರೂ, ಬಾಗಲಕೋಟೆಯಿಂದ ಸಿಮೆಂಟ್, ನೂಲಿನ ಗಿರಣಿ ಕಾರ್ಮಿಕರು, ಎಂ.ಎಸ್.ಸುಗಂಧಿ, ಎಂ.ಕೆ.ಮೊಗಲಿ, ಮುಸ್ಲಿಂ ಜಮಾಯತ್ ಅಧ್ಯಕ್ಷ ಅಡತಿ ಬಜಾರ, ಭಾಗವಾನ, ಟೈಲರ, ಸಮಗಾರ ಮೊದಲಾದ ಸಂಘಟನೆಗಳ ಪದಾಧಿಕಾರಿಗಳೂ ಸತ್ಯಾಗ್ರಹದಲ್ಲಿ ಭಾಗವಹಿಸಿ ಸತ್ಯಾಗ್ರಹಕ್ಕೆ ಕಳೆತರುತ್ತಿದ್ದರು. ಜನರಲ್ಲಿ ಸ್ಫೂರ್ತಿ ತುಂಬುತ್ತಿದ್ದರು. ನಗರಸಭಾಧ್ಯಕ್ಷ ಡಿ.ಎಚ್.ಬಿಳಗಿ, ಕಮ್ಯುನಿಸ್ಟ್ ಮುಖಂಡರಾದ ಎನ್.ಕೆ. ಉಪಾಧ್ಯಾಯ, ಎಲ್.ಬಿ.ಲಾಯದ ಗುಂದಿ, ಬಾಬು ಹುಜೂರೆಯವರೆಲ್ಲ ಮೂರು ದಿವಸ ಸತತ ಅನ್ನ ಸತ್ಯಾಗ್ರಹ ಕೈಗೊಂಡರು.

ಬಸವನ ಬಾಗೇವಾಡಿಯ ಹೂವಿನ ಹಿಪ್ಪರಗಿಯಲ್ಲಿ 21.3.64 ರಂದು ಬ್ಯಾಕೋಡ ಮತ್ತು ಜೋಶಿ ವಕೀಲರ ನೇತೃತ್ವದಲ್ಲಿ 16 ಜನರ ಸತ್ಯಾಗ್ರಹ ನಡೆಸಲಾಯಿತು.

ಅಥರ್ಗಾದಲ್ಲಿಯೂ ಹರತಾಳ, ಅನ್ನ ಸತ್ಯಾಗ್ರಹ 15 ದಿವಸ ನಡೆಯಿತು. ಎಂ.ಎಲ್.ಎ., ಎಂ.ಪಿ.ಗಳು ರಾಜಿನಾಮೆ ಕೊಡಬೇಕೆಂದು ಒತ್ತಾಯಿಸಲಾಯಿತು. ಇಂಡಿ ತಾಲೂಕು ಚಡಚಣದಲ್ಲಿ ಸತ್ಯಾಗ್ರಹ 26.3.64 ರಂದು ಪ್ರಾರಂಭವಾಗಿ 31.3.64 ರವರೆಗೆ ನಡೆಯಿತು.

ಇಂಡಿ, ಹಿರೆಮೊಸಳಿ, ಮುದ್ದೆಬಿಹಾಳ, ನಿಡಗುಂದಿ ಮುಂತಾದ ಹಲವಾರು ಗ್ರಾಮಗಳಲ್ಲಿ ಯಶಸ್ವಿಯಾಗಿ ಸತ್ಯಾಗ್ರಹ ನಡೆಸಲಾಯಿತು. ಮುದ್ದೆಬಿಹಾಳದಲ್ಲಿ ಎಂ.ಎಂ.ಸಜ್ಜನ ವಕೀಲರು, ಪಿ.ಎ.ದೇಶಪಾಂಡೆ ವಕೀಲರೆಲ್ಲ ಭಾಗವಹಿಸಿದ್ದರು.

ಈ ರೀತಿ ಬಿಜಾಪುರ ನಗರ ಮತ್ತು ಆಲಮಟ್ಟಿ ಆಣೆಕಟ್ಟಿಗೆ ಒಳಪಡುವ ಬಹುತೇಕ ತಾಲ್ಲೂಕು ಕೇಂದ್ರ ಮತ್ತು ಮುಖ್ಯಗ್ರಾಮಗಳಲ್ಲಿ ಯಶಸ್ವಿಯಾಗಿ ಅನ್ನ ಸತ್ಯಾಗ್ರಹ ನಡೆದ ಮೇಲೆ ಬಿಜಾಪುರದ ಲೋಕಸಭೆ ಸದಸ್ಯ ರಾಜಾರಾಂ ದುಬೆಯವರು ಚುರುಕಾದರು. ಕೇಂದ್ರ ಸರಕಾರಕ್ಕೂ ಬಿಸಿ ತಟ್ಟಿತು. ಆಲಮಟ್ಟಿ ಆಣೆಕಟ್ಟು ಸತ್ಯಾಗ್ರಹ ಸಮಿತಿಯ ಸಂಚಾಲಕ ಎನ್.ಕೆ.ಉಪಾಧ್ಯಾಯರಿಗೆ ದಿಲ್ಲಿಯಿಂದ ತಂತಿಬಂದು ಸತ್ಯಾಗ್ರಹ ನಿಲ್ಲಿಸಬೇಕೆಂದೂ ಬೃಹತ್ ನೀರಾವರಿ ಮಂತ್ರಿ ಡಾ॥ ಕೆ.ಎಲ್.ರಾವ್ ಅವರು ಬಿಜಾಪುರಕ್ಕೆ ಭೇಟಿ ನೀಡುವರೆಂದೂ ತಿಳಿಸಿದ ನಂತರ ಅನ್ನ ಸತ್ಯಾಗ್ರಹ ನಿಲ್ಲಿಸಲಾಯಿತು. ಈ ಅನ್ನ ಸತ್ಯಾಗ್ರಹದ ಕುರಿತು ಸಂದರ್ಶನ ವಾರಪತ್ರಿಕೆ 9.4.1964 ರ ಸಂಪಾದಕೀಯದಲ್ಲಿ ಈ ರೀತಿ ಬರೆದಿದೆ. 'ಅನ್ನಸತ್ಯಾಗ್ರಹದ ಮುಕ್ತಾಯ' ಎಂಬ ತಲೆಬರಹದಲ್ಲಿ 'ಆಲಮಟ್ಟಿಯಲ್ಲಿ ಕೃಷ್ಣಾ ನದಿಗೆ ದೊಡ್ಡ ಆಣೆಕಟ್ಟನ್ನು ಕಟ್ಟಬೇಕೆಂದು ಸರಕಾರವನ್ನು ಒತ್ತಾಯಿಸುವ ಬಗೆಗೆ ಜನಜಾಗೃತಿಯನ್ನು ಮಾಡಲು ...

ಅಕ್ಕಿ ಕಸಿಯುವ ಸರಕಾರದ ನೀತಿ



ಕಡುಬಡವರಿಗೆ ರಿಯಾಯಿತಿ ದರದಲ್ಲಿ ಪಡಿತರ ವ್ಯವಸ್ಥೆ ಮೂಲಕ ಆಹಾರ ಧಾನ್ಯ ಒದಗಿಸುತ್ತೇವೆ ಎಂದು ಸರಕಾರ ಬೆನ್ನು ತಟ್ಟಿಕೊಳ್ಳುತ್ತಿದೆ. ಆಹಾರ ಸಚಿವರು ಈ ಕುರಿತು ದಿನಕ್ಕೊಂದು ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ. ದಿನಕ್ಕೊಂದು ಗಡುವು ಘೋಷಿಸುತ್ತಿದ್ದಾರೆ.

ಕಾರ್ಯತಃ ಒಟ್ಟು ವಿಷಯದಲ್ಲಿ ಗೊಂದಲ ಉಂಟು ಮಾಡಿದೆ. ಗ್ರಾಮಾಂತರ ಭಾಗದಲ್ಲಿ ದೊಡ್ಡ ಸಂಖ್ಯೆಯಲ್ಲಿ ಈಗಿರುವ ಹಸಿರು ಪಡಿತರ ಕಾರ್ಡ್‌ಗಳನ್ನು ಹಿಂತೆಗೆದು ಕೊಳ್ಳಲಾಗುತ್ತಿದೆ. ಬಡತನ ರೇಖೆ ಕೆಳಗಿನವರು ಎಂದು ಗುರುತಿಸುವ ಜನರಿಗೆ ಹಳದಿ ಬಣ್ಣದ ಪಡಿತರ ಕಾರ್ಡು, ಬಡತನ ರೇಖೆ ಮೇಲಿನವರು ಎಂದು ಗುರುತಿಸುವ ಜನರಿಗೆ ಕೇಸರಿ ಬಣ್ಣದ ಕಾರ್ಡುಗಳನ್ನು ನೀಡುವ ಮೂಲಕ ಭಾರೀ ಸಂಖ್ಯೆಯ ಬಡವರಿಗೆ ರಿಯಾಯಿತಿ ದರದ ಆಹಾರ ಧಾನ್ಯ ನೀಡುವುದನ್ನು ಕೈಬಿಡಲಾಗುತ್ತಿದೆ.

ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಾವಿರಾರು ಬಡ ಕಾರ್ಮಿಕರು, ಕೂಲಿಕಾರರು ಇತ್ಯಾದಿ ಜನ ಇದ್ದಾರೆ. ಇವರ ಸಮೀಕ್ಷೆ ನ ನಡೆಸಿ ಎಲ್ಲ ಅರ್ಹರನ್ನು ಗುರುತಿಸಿ ಹಳದಿ ಕಾರ್ಡು ನೀಡುವ ಬದಲು ಘೋಷಿತ ಮತ್ತು ಅಘೋಷಿತ ಕೊಳಚೆ ಪ್ರದೇಶಗಳಲ್ಲಿ ಮಾತ್ರ ಸಮೀಕ್ಷೆ ನಡೆಸಲಾಗುತ್ತಿದೆ. ಇದರಿಂದ ಬಹುಪಾಲು ಬಡವರು ಈ ಸೌಲಭ್ಯದಿಂದ ವಂಚಿತರಾಗುತ್ತಾರೆ.

ಇಡೀ ನಗರ ಮತ್ತು ಪಟ್ಟಣ ಪ್ರದೇಶವನ್ನು ಒಂದು ಘಟಕವಾಗಿ ಪರಿಗಣಿಸಿ ಸಮೀಕ್ಷೆ ನಡೆಸಿದರೆ ಮಾತ್ರ ಎಲ್ಲ ಬಡವರಿಗೆ ಅನುಕೂಲವಾಗುವುದು.

ಈ ಬಗ್ಗೆ ರಾಜ್ಯಾದ್ಯಂತ ಚಳುವಳಿ ಆರಂಭಗೊಂಡರೆ ಮಾತ್ರ ಸರಕಾರ ತನ್ನ ನೀತಿ ಬದಲಾಯಿಸುವಂತೆ ಒತ್ತಾಯಿಸಲು ಸಾಧ್ಯ.

ನಗರ, ಪಟ್ಟಣ ಪ್ರದೇಶಗಳಲ್ಲೂ ಸೂಕ್ತ ಸಮೀಕ್ಷೆ ನಡೆಸಿ ಈ ಹಳದಿ ಪಡಿತರ ಕಾರ್ಡು ನೀಡಲು ಒತ್ತಾಯಿಸಿ ಬೃಹತ್ ಮತ ಪ್ರದರ್ಶನ

ರಾಮದುರ್ಗ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ತಕ್ಷಣ ಪಡಿತರ ಕಾರ್ಡು ನೀಡಲು ಒತ್ತಾಯಿಸಿ ನಡೆದ ಯಶಸ್ವೀ ಚಳುವಳಿ ಹಿನ್ನೆಲೆಯಲ್ಲಿ ರಾಮದುರ್ಗ ಪಟ್ಟಣ ಪ್ರದೇಶಕ್ಕೂ ಸಮೀಕ್ಷೆ ನಡೆಸಿ ಅರ್ಹರಿಗೆ ಹಳದಿ ಪಡಿತರ ಕಾರ್ಡು ನೀಡಲು ಒತ್ತಾಯಿಸಿ ಜನವರಿ 9ರಂದು ರಾಮದುರ್ಗದಲ್ಲಿ ಬೃಹತ್ ಮತಪ್ರದರ್ಶನ ನಡೆಯಿತು.

ಸಾವಿರಾರು ಮಹಿಳೆಯರು ಪಾಲ್ಗೊಂಡ ಭಾರೀ ಮೆರವಣಿಗೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಸಧ್ಯಕ್ಕೆ ನಗರ, ಪಟ್ಟಣಗಳ ಘೋಷಿತ ಮತ್ತು ಅಘೋಷಿತ ಕೊಳಚೆ ಪ್ರದೇಶಗಳಿಗೆ ಮಾತ್ರ ಸಮೀಕ್ಷೆಯನ್ನು ಸೀಮಿತಗೊಳಿಸಿದ್ದು ಇದರಿಂದ ಇತರ ಪ್ರದೇಶಗಳ ಬಡವರಿಗೆ ಭಾರೀ ಅನ್ಯಾಯ ನಡೆಯುತ್ತಿರುವುದನ್ನು ಅಧಿಕಾರಿಗಳಿಗೆ ಸಾಕ್ಷ್ಯಾಧಾರಗಳ ಮೂಲಕ ಮನವರಿಕೆ ಮಾಡಿಕೊಡಲಾಯಿತು.


ಈ ಸಂದರ್ಭದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ವಿ.ಪಿ. ಕುಲಕರ್ಣಿ ಮತ್ತು ಕಾಂ. ಗೈಬು ಜೈತಿನ ಮಾತನಾಡಿ ಈ ಕೂಡಲೇ ರಾಮದುರ್ಗ ಪಟ್ಟಣದ ಎಲ್ಲಾ ಬಡವರಿಗೆ ಹಳದಿ ಕಾರ್ಡು ನೀಡಲು ಒತ್ತಾಯಿಸಿದರು. ನಾಗಪ್ಪ ಸಂಗೊಳ್ಳಿ, ಪಡಿಯಪ್ಪ ರಾನವಾಡ, ಫಕರೂಸಾಬ ನದಾಫ, ಸಿದ್ದಪ್ಪ ಕುಲವಾರ ಮತ್ತಿತರರು ಮೆರವಣಿಗೆ ನೇತೃತ್ವ ವಹಿಸಿದ್ದರು.

ಜನವರಿ 11ರಿಂದ 16ರವರೆಗೆ ರಾಮದುರ್ಗದ ಎಲ್ಲಾ 23 ವಾರ್ಡುಗಳ ಬಡವರಿಂದ ಅರ್ಜಿಗಳನ್ನು ಸಂಗ್ರಹಿಸಿ ತಹಶೀಲ್ದಾರರಿಗೆ ಸಲ್ಲಿಸಲಾಗಿದೆ.

- ವಿ.ಪಿ. ಕುಲಕರ್ಣಿ

ನೂತನ ಕಾರ್ಯದರ್ಶಿ

ಸಿಪಿಐ(ಎಂ) ನ ಕುಂದಾಪುರ ತಾಲೂಕು ಸಮಿತಿಗೆ ನೂತನ ಕಾರ್ಯದರ್ಶಿಯಾಗಿ ಮಹಾಬಲ ಒಡೇರ ಹೋಬಳಿಯವರು




ಆಯ್ಕೆಯಾದರು.

ಜನವರಿ 10 ರಂದು ಸಿಪಿಐ(ಎಂ) ಕುಂದಾಪುರ ತಾಲೂಕು ಸಮಿತಿಯು ಸಿ.ನಾರಾಯಣರವರ ಅಧ್ಯಕ್ಷತೆಯಲ್ಲಿ ಸೇರಿತು. ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿಯವರಾದ ಕೆ.ಶಂಕರ್ ಮತ್ತು ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಡೇವಿಡ್ ಕರ್ಕಡರವರು ಉಪಸ್ಥಿತರಿದ್ದರು.

ಡೇವಿಡ್ ಕರ್ಕಡರವರು ಮಾತನಾಡಿ ಕುಂದಾಪುರ ತಾಲೂಕಿನಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಯನ್ನು ಈ ಹಿಂದಿಗಿಂತಲೂ ಹೆಚ್ಚು ಬಲಗೊಳಿಸಲು ಮುಂದಿನ ದಿನಗಳಲ್ಲಿ ತಾಲೂಕು ಸಮಿತಿ ಸದಸ್ಯರೆಲ್ಲಾ ಶ್ರಮಿಸಬೇಕೆಂದು ಕರೆ ನೀಡಿದರು.

ಬದುಕುವ ಹಕ್ಕಿನ ರಕ್ಷಣೆಗಾಗಿ ಬುಗಿಲೆದ್ದ ಬಡಜನರ ಹೋರಾಟ

ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನತೆಯ ಹಕ್ಕುಗಳ ರಕ್ಷಣೆಗಾಗಿ ಸ್ಲಂ ಕಾಯ್ದೆ ತಿದ್ದುಪಡಿ ಸುಗ್ರೀವಾಜ್ಞೆಯಲ್ಲಿರುವ ಜನವಿರೋಧಿ ಅಂಶಗಳನ್ನು ವಿರೋಧಿಸಿ ಜನವರಿ 19 ರಂದು ತುಮಕೂರಿನ ಸುಮಾರು 26 ಸ್ಲಂಗಳ ಸಾವಿರಾರು ನಿವಾಸಿಗಳು ತಮ್ಮ ಹಕ್ಕುಗಳ ರಕ್ಷಣೆಗಾಗಿ ತುಮಕೂರಿನ ಮಿನಿ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಿದ್ದರು.



ಬೆಳಿಗ್ಗೆ ನಗರದ ಪುರಭವನದಿಂದ ಹೊರಟ ಸಾವಿರಾರು ಜನರ ಬೃಹತ್ ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ನಡೆಸಿ ಸುಮಾರು ಎರಡು ಗಂಟೆಗಳಾಗಿದ್ದರೂ ಮನವಿ ಸ್ವೀಕರಿಸಲು ಬಾರದ ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಮಿನಿ ವಿಧಾನ ಸೌಧದಕ್ಕೆ ನುಗ್ಗಿ ಕೆಲ ಕಾಲ ಘೋಷಣೆಗಳನ್ನು ಕೂಗಿದ ನಂತರ ಒಂದೇ ಸಮಯಕ್ಕೆ ಒಬ್ಬರಿಂದೊಬ್ಬರು ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಆಗಮಿಸಿದರು.

ಮನವಿ ಸ್ವೀಕರಿಸಲು ಬರದೆ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವರ್ತನೆಯಿಂದ ಕೋಪೋದ್ರಿಕ್ತರಾದ ಜನರು ಅಧಿಕಾರಿಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಯಾವುದೇ ಸಮಯದಲ್ಲಿ ಸ್ಲಂ ಜನರ ಗುಡಿಸಲುಗಳನ್ನು ಕೀಳಲು ಹೋಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿ ಪ್ರತಿಕ್ರಿಯಿಸಿದರು. ಈ ಪ್ರತಿಭಟನೆಯಲ್ಲಿ ಸಮಿತಿ ಸಂಚಾಲಕರಾದ ಎ.ನರಸಿಂಹಮೂರ್ತಿ, ಡಿ.ಎಸ್.ಎಸ್.ನ ರಂಗಸ್ವಾಮಿ ಬೆಲ್ಲದ ಮಡು, ಸಿಐಟಿಯುನ ಸೈಯ್ಯದ್ ಮುಜೀಬ್, ನರಸಿಂಹಯ್ಯ, ಕೋದಂಡರಾಮು.ವಿ., ಡಿ.ವೈ.ಎಫ್.ಐನ ಸುಬ್ರಮಣ್ಯ ಚಂದ್ರಪ್ಪ.ಟಿ ಮುಂತಾದವರು ಪಾಲ್ಗೊಂಡಿದ್ದರು. ಪ್ರಾರಂಭದಲ್ಲಿ ಸ್ಲಂ ಜನರ ಸಮಸ್ಯೆಗಳ ಬಗ್ಗೆ ಬೀದಿ ನಾಟಕವನ್ನು ಪ್ರದರ್ಶಿಸಲಾಯಿತು.

........ಮುನ್ನಡೆಯೋಣ

ಪುಟ 3 ರಿಂದ

ಕೈಯಾಡಿಸಲು ಅಮೇರಿಕಾದ ಗುಪ್ತಾಚಾರ ಪಡೆಗಳಿಗೆ ಅವಕಾಶ ನೀಡುವ ಕೇಂದ್ರ ಸರ್ಕಾರದ ಕ್ರಿಯೆಯಂತೂ ಭಾರತದಲ್ಲಿ ಪ್ರಗತಿಪರ ಚಳುವಳಿಗಳನ್ನು ಹತ್ತಿಕ್ಕುವ ಮತ್ತು ಇನ್ನೂ ಅನೇಕ ದೂರಗಾಮಿ ಗಂಡಾಂತರಗಳನ್ನು ಉಂಟುಮಾಡುವ ಕ್ರಿಯೆಯಾಗಿದೆ. ಜಾಗತೀಕರಣ ನೀತಿಗಳಿಂದ ಸಂಕಟವನ್ನು ಅನುಭವಿಸುತ್ತಿರುವ ವಿವಿಧ ಜನಸಮುದಾಯಗಳ ಜಾಗತೀಕರಣದ ಪ್ರೇರಕ ಶಕ್ತಿಯಾದ ... ಸಜ್ಜಾಗುತ್ತಿರುವ ಸನ್ನಿವೇಶದಲ್ಲಿ ಅಮೇರಿಕಾದ ಮಿಲಿಟರಿ ಪಡೆಗಳ ಕೈವಾಡಕ್ಕೆ ಭಾರತದ ಮಿಲಿಟರಿ ಪಡೆಯನ್ನು ಒಪ್ಪಿಸುವುದರ ಅಪಾಯವನ್ನು ಭಾರತದ ಜನತೆಗೆ ಮನದಟ್ಟು ಮಾಡಬೇಕಾಗಿದೆ.

ಮಹಾಧಿವೇಶನಕ್ಕೆ ಮುನ್ನಡೆಯೋಣ ಎಂದರೆ...

ಈ ಹಿನ್ನೆಲೆಯಲ್ಲಿ ಪಕ್ಷದ ರಾಜಕೀಯ ನಿರ್ಣಯದಲ್ಲಿ ಮಾಡಿರುವ ಜಾಗತಿಕ, ಮತ್ತು ಭಾರತದ ಬೆಳವಣಿಗೆಗಳ ಬಗೆಗಿನ ಆಳವಾದ ವಿಶ್ಲೇಷಣೆಯ ವಿಧಾನವನ್ನು ಮೈಗೂಡಿಸಿ ಕೊಳ್ಳುವುದು ಅತ್ಯಂತ ಜರೂರಿನ ಕೆಲಸ.

ಆದ್ದರಿಂದ ಸಂಗಾತಿಗಳೇ, ಮಾರ್ಚ್ 19 ರಂದು ಆರಂಭವಾಗುವ ಪಕ್ಷದ 17ನೇ ಮಹಾಧಿವೇಶನದವರೆಗಿನ ಈ ಸಮಯದಲ್ಲಿ ಎಲ್ಲಾ ಸಂಗಾತಿಗಳೂ ಸಮ್ಮೇಳನದ ಚರ್ಚೆಗಳ ಈ ಎರಡನೇ ಹಂತವನ್ನು ಗಂಭೀರವಾಗಿ ತೆಗೆದುಕೊಂಡು ರಾಜಕೀಯ ನಿರ್ಣಯವನ್ನು ವೈಯಕ್ತಿಕವಾಗಿ ಅಭ್ಯಾಸ ಮಾಡಬೇಕಾಗಿದೆ. ಹಾಗೂ ಶಾಖೆಗಳಿಂದ ಆರಂಭವಾಗಿ ಪಕ್ಷದ ಎಲ್ಲಾ ಘಟಕ ಗಳಲ್ಲಿ ಆಳವಾದ ಚರ್ಚೆಗೆ ತೊಡಗಬೇಕಾಗಿದೆ.

ಸಮಿತಿಗೆ ಕಳುಹಿಸಬೇಕಾಗಿದೆ. ಇದೇ ಪಕ್ಷದ ಪ್ರತಿಯೊಬ್ಬ ಸದಸ್ಯರೂ 17ನೇ ಮಹಾಧಿವೇಶನದ ಯಶಸ್ಸಿಗೆ ನೀಡಬೇಕಾದ ಕಾಣಿಕೆ. ಪಕ್ಷದ ರಾಜ್ಯ ಸಮ್ಮೇಳನ ಯಶಸ್ವಿಯಾಯಿತು. 17ನೇ ಮಹಾಧಿವೇಶನಕ್ಕೆ ಮುನ್ನಡೆಯೋಣ ಎಂಬ ಮಾತಿನ ತಿರುಳು ಕೂಡ 17ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯದ ತಿಳುವಳಿಕೆಯನ್ನು ಗ್ರಹಿಸೋಣ, ನಮ್ಮ ಪ್ರಜ್ಞೆಯ ಭಾಗವನ್ನಾಗಿ ಮಾಡಿಕೊಳ್ಳೋಣ ಮತ್ತು ನಮ್ಮ ಅನುಭವದ ಆಧಾರದ ಮೇಲೆ ಈ ರಾಜಕೀಯ ನಿರ್ಣಯದ ತಿಳುವಳಿಕೆಯನ್ನು ಶ್ರೀಮಂತಗೊಳಿಸಲು ...

‘ಟಯೋಟಾ’ ಎಂಬ ರಾಕ್ಷಸನ
ಜೀವ ಬೀಡುತ್ತಿರುವ ಕಾ

‘ಟಯೋಟಾ’ ಎಂಬ ಕಾರು ಉತ್ಪಾದಕ ಜಪಾನಿ ಕಂಪನಿ ಜಾಗತೀಕರಣದ ಗತ್ತಿನಲ್ಲಿ ನಡವಳಿಕೆಗಳನ್ನು ಗಾಳಿಗೆ ತೂರಿದೆ. ಕಾರ್ಮಿಕರನ್ನು ಯಂತ್ರಗಳೆಂದೇ ಭಾವಿಸಿರುವ ಉತ್ಪಾದನೆ, ಅಧಿಕ-ಅತ್ಯಧಿಕ ಲಾಭ. 7 ನಿಮಿಷಕ್ಕೆ ಒಂದು ಕಾರು ಹೊರಬರುವಂತ ಹಲವು ರೋಗಗಳಿಗೆ ಬಲಿಯಾಗಿ, ಬೆನ್ನೆಲುಬು ಶಸ್ತ್ರ ಚಿಕಿತ್ಸೆಗೆ ಒಳಗಾಗಿ ನಳುತಿದ ಹೋರಾಟದ ಕಣದಲ್ಲಿ ಕಾರ್ಮಿಕರಿದ್ದಾರೆ. ಅದರ ಸ

ಸಿದ್ದಯ್ಯ

ಎಸ್.ಎಂ.ಕೃಷ್ಣ ಸರಕಾರವು ಎನ್‌ಡಿಎ ಸರಕಾರದ ನೀತಿಯನ್ನೇ ನಮ್ಮ ರಾಜ್ಯದಲ್ಲಿ ಜಾರಿಗೆ ತರಲು ಪ್ರಯತ್ನಿಸುತ್ತಿದೆ. ಐಎಂಎಫ್, ವಿಶ್ವಬ್ಯಾಂಕ್ ಆದೇಶಗಳನ್ನು ಜನ ಬೆಂಬಲದೊಡನೆ ವಿರೋಧಿಸಲು ಅಶಕ್ತವಾಗಿದೆ. ಮೆಕ್ಸಿಕೊ, ಬ್ರೆಜಿಲ್, ಅರ್ಜೆಂಟೈನ್ ಈ ದೇಶಗಳು ಐಎಂಎಫ್ ಶರತ್ತುಗಳಿಗೆ ಒಪ್ಪಿ ಏನಾಗಿವೆ ಎಂಬುದು ಮುಖ್ಯಮಂತ್ರಿ ಕೃಷ್ಣರವರಿಗೆ ಗೊತ್ತಿಲ್ಲವೇ? ವಿದೇಶಿ ಕಂಪನಿಗಳು ನಮ್ಮ ದೇಶದೊಳಕ್ಕೆ ಬಂದರೆ, ದೇಶದ ಅಭಿವೃದ್ಧಿಯಾಗುತ್ತದೆ ಎಂಬ ಭ್ರಮೆಯಿಂದ ಅವರಿಗೆ ಕೆಂಪು ಹಾಸು ಹಾಸಿ ನಮ್ಮ ಸರ್ಕಾರ ಸ್ವಾಗತಿಸುತ್ತಿದೆ. ಲಾಭದ ಕೊಳ್ಳೆ ಹೊಡೆಯಲು ಬಂದಿರುವ ಈ ಬಂಡವಾಳಿಗರು ನಮ್ಮ ದೇಶದ ಕಾರ್ಮಿಕರ ಹಕ್ಕುಗಳನ್ನೆ ಇಲ್ಲವಾಗಿಸುವಂತೆ ನಮ್ಮ ಆಳುವ ವರ್ಗದ ಮೇಲೆ ಒತ್ತಡ ತರುತ್ತಿವೆ. ಕಾರ್ಮಿಕರು ಹಲವು ತ್ಯಾಗ ಬಲಿದಾನಗಳಿಂದ ಗಳಿಸಿದ ಸವಲತ್ತುಗಳನ್ನು ಕಸಿಯತೊಡಗಿದ್ದಾರೆ. ಇಲ್ಲಿನ ಕಾರ್ಮಿಕರಿಗೆ ಕಡಿಮೆ ಕೂಲಿ ನೀಡಿ ಕಾರ್ಮಿಕರ ರಕ್ತ ಹೀರಿ ಲಾಭಗಳಿಸುತ್ತಿವೆ. ನಮ್ಮ ದೇಶದ ಸಂಪತ್ತನ್ನು ಲೂಟಿ ಹೊಡೆಯುತ್ತಿವೆ. ಕೇಂದ್ರ ಸರ್ಕಾರ ಕಾರ್ಮಿಕ ಕಾಯ್ದೆಯನ್ನೇ ತಿದ್ದುಪಡಿ ಮಾಡಿ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳಲು ಹೊರಟಿರುವಾಗ, ರಾಜ್ಯದಲ್ಲಿ ಇರುವ ಕಾನೂನುಗಳ ಜಾರಿಗೂ ಸರ್ಕಾರ, ಕಾರ್ಮಿಕ ಇಲಾಖೆ ಮುಂದಾಗುತ್ತಿಲ್ಲ. ವಿದೇಶಿ ಬಂಡವಾಳಿಗರು ನಮ್ಮ ದೇಶದ ಕಾನೂನಿಗೆ ಸವಾಲು ಹಾಕಲು ಹೊರಟಿರುವುದನ್ನು ಸರ್ಕಾರ ಮೂಕ ಪ್ರೇಕ್ಷಕರಾಗಿ ನೋಡುತ್ತಿದೆ. ಕಾನೂನಿಗೆ ಅಗೌರವ ತೋರಿಸುವ ವಿದೇಶಿ ಕಂಪೆನಿಗಳ ವಿರುದ್ಧ ಕ್ರಮ ಜರುಗಿಸುವ ಧೈರ್ಯ ಸರ್ಕಾರಕ್ಕಿಲ್ಲವಾಗಿದೆ. ಅಮೇರಿಕ ಮತ್ತು ವಿಶ್ವಬ್ಯಾಂಕ್, ಐ.ಎಂ.ಎಫ್ ಷರತ್ತುಗಳಿಗೆ ತಲೆ ಬಾಗಿರುವ ನಮ್ಮ ಸರ್ಕಾರ ಕಾರ್ಮಿಕರ ಹಿತವನ್ನು ಬಲಿಕೊಡಲು ಹೊರಟಿದೆ. ನಮ್ಮ ದೇಶದ ಬಂಡವಾಳಶಾಹಿಗಳು ವಿದೇಶಿಯರೊಡನೆ ಕೂಡಿ ಲಾಭ ಹೊಡೆಯತೊಡಗಿದ್ದಾರೆ. ದೇಶದ ಕಾನೂನಿಗೆ ಸವಾಲು ಹಾಕಿರುವ ಟೊಯೋಟಾ ಕಿರ್ಲೋಸ್ಕರ್ ಕಂಪೆನಿ ಆಡಳಿತ ಮಂಡಳಿ ಇದಕ್ಕೆ ಇತ್ತೀಚಿನ ನಿದರ್ಶನ.



ಹೊಸ ವರ್ಷ ಕಾರ್ಮಿಕರ ಪಾಲಿಗೆ ಹೊಸ ಭರವಸೆ ತರಲಿಲ್ಲ. ಮತ್ತದೇ ಆತಂಕ, ಅದೇ ಭಯ, ಅದೇ ಅತಂತ್ರ ಸ್ಥಿತಿ, ಅದೇ ನೋವು ನರಳುವಿಕೆಯಿಂದಲೇ ಕೆಲಸ ಮಾಡಬೇಕಾದ ಒತ್ತಡ. ಹೊಸ ವರ್ಷದಲ್ಲಿ ಈ ಸಂಕಟಗಳು ಮತ್ತಷ್ಟು ಹೆಚ್ಚುವ ಬೀತಿ ಹೊಸ ವರ್ಷವನ್ನು ಹೊಸ ಹರುಷದೊಂದಿಗೆ ಸ್ವಾಗತಿಸಬೇಕೆಂದುಕೊಂಡರು, ಅದು ಸಾಧ್ಯವಾಗುತ್ತಿಲ್ಲ. ನಾಳೆಗಳ ಕುರಿತು ಸುಂದರ ಕನಸುಗಳನ್ನು ಕಂಡಿದ್ದ ಯುವ ಮನಸ್ಸಿಗೆ ಏನೋ ಆತಂಕ, ಮೂರು ವರ್ಷಗಳ ಹಿಂದೆ ಉದ್ಯೋಗ ಸಿಕ್ಕಾಗ ಕಟ್ಟಿದ್ದ ಕನಸಿನ ಆಶಾಗೋಪುರ ಕುಸಿಯತೊಡಗಿತು. ಅಧಿಕ ಲಾಭಗಳಿಸುವ ಏಕೈಕ ಉದ್ದೇಶದ ವಿದೇಶಿ ಕಂಪೆನಿಯ ಮಾಲೀಕರಿಂದಾಗಿ ಕಾರ್ಮಿಕರ ಬದುಕು ಅಸಹನೀಯವಾಗಿದೆ. ಹತ್ತು ಗಂಟೆಗಳ ನಿರಂತರ ದುಡಿಮೆಯಿಂದಾಗಿ ಬೆನ್ನು ಮೂಳೆ ಬಾಗಿದೆ. ಹಲವರು ಶಸ್ತ್ರಚಿಕಿತ್ಸೆ ಮಾಡಿಸಿ ಬೆನ್ನು ಮೂಳೆ ಸರಿಪಡಿಸಿಕೊಂಡು ಮತ್ತೆ ದುಡಿಯುತ್ತಿದ್ದಾರೆ. ನಡು ಪಟ್ಟಿ ಕಟ್ಟಿಕೊಂಡು ಕಾಲು ನೋವಿನಲ್ಲೂ ಕಾಲಿಗೆ ಬಿಗಿಯಾದ ಪಟ್ಟಿ ಕಟ್ಟಿಕೊಂಡಿದ್ದಾರೆ. ಶ್ವಾಶಕೋಶ ಶಸ್ತ್ರ ಚಿಕಿತ್ಸೆಯ ನಂತರವೂ ಅದೇ ಕೆಲಸದಲ್ಲಿ ನಿರತರಾಗಿದ್ದಾರೆ. ಅದೇ ಕೆಲಸ ಅದೇ ಒತ್ತಡ ಮತ್ತದೇ ನೋವು.

ಬೆಂಗಳೂರಿನಿಂದ 30 ಕಿ.ಮೀ ದೂರವಿರುವ ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುಲ್ಲಿರುವ ಟೊಯೊಟೊ ಕಿರ್ಲೋಸ್ಕರ್ ಕಾರ್ಮಿಕರ ನೋವಿನ ಕತೆ ಇದು.



ಕಿಬ್ಬೊಟ್ಟೆ ಶಸ್ತ್ರಚಿಕಿತ್ಸೆಗೊಳಗಾದ ಕಾರ್ಮಿಕ

ಸ್ಥಳೀಯರ ನಿಂದನೆ :

ಡಿಸಂಬರ್ 31 ಗಿರೀಶ್ ಗೌಡ ಎಂಬ ಕಾರ್ಮಿಕನೊಬ್ಬ ಸೂಪರ್ ವೈಸರ್ ಜೊತೆ ತನಗಾಗುತ್ತಿರುವ ತೊಂದರೆಯ ಬಗ್ಗೆ ಹೇಳಿಕೊಳ್ಳುತ್ತಿರುವಾಗ ಆಡಳಿತ ಮಂಡಳಿಯ ಸುಲಾಸ್ ಡಿ ವಾಲ್ ಎಂಬ ವ್ಯಕ್ತಿ ಮಧ್ಯಪ್ರವೇಶಿಸಿ ಗೀರೀಶ್‌ನನ್ನು ತುಚ್ಛವಾಗಿ ನಿಂದಿಸಿದರು. ಮಾತ್ರವಲ್ಲದೆ ಸ್ಥಳೀಯರನ್ನು ಕೀಳು ಪದಗಳಿಂದ ನಿಂದಿಸಿದ ಸುದ್ದಿ ಕಾರ್ಯನಿರತ ಕಾರ್ಮಿಕರ ನಡುವೆ ಹರಡಿ ಕಾರ್ಮಿಕರಿಗೆ ರೋಷ ಉಕ್ಕಿತು. ಹೊರದೇಶದ ಮಾಲೀಕನ ಗುಲಾಮನಾಗಿರುವ ಆ ವ್ಯಕ್ತಿ ನಮ್ಮ ನೆಲದಲ್ಲಿ ನಿಂತು ಸ್ಥಳೀಯರನ್ನು ನಿಂದಿಸಿದ್ದನ್ನು ತಕ್ಷಣವೇ ಪ್ರತಿಭಟಿಸಿದರು. ಆತನ ಮೇಲೆ ಕ್ರಮ ಜರುಗಿಸುವಂತೆ ಒತ್ತಾಯಿಸಿ ಕೆಲಸ ಸ್ಥಗಿತಗೊಳಿಸಿದರು. ಕಾರ್ಮಿಕ ಮುಖಂಡರ ಮಧ್ಯೆ ಪ್ರವೇಶದಿಂದ ಈ ಮುಷ್ಕರ 50 ನಿಮಿಷಗಳ ನಂತರ ವಾಪಸ್ಸಾಯಿತು. ಅಂದೇ ಗಿರೀಶ್‌ನನ್ನು ಕೆಲಸದಿಂದ ವಜಾ ಮಾಡಿದ ಆಡಳಿತ ಮಂಡಳಿ ಕಾರ್ಮಿಕರ ಒಗ್ಗಟ್ಟಿಗೆ ಸವಾಲು ಎಸೆಯಿತು. ಆಡಳಿತ ವರ್ಗದ ಈ ವರ್ತನೆಯನ್ನು ಮುಖಂಡರು ಖಂಡಿಸಿದರು. ವಜಾ ಆದೇಶವನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿದರು. ಮುಖಂಡರ ಮಾತಿಗೆ ಒಪ್ಪುವುದಿರಲಿ ಅವರನ್ನು ತುಚ್ಛವಾಗಿ ಕಾಣಲಾಯ್ತು. ನಾವು ಒಮ್ಮೆ ತೆಗೆದುಕೊಂಡ ನಿರ್ಧಾರವನ್ನು ಯಾರೇ ಬಂದರೂ ಹಿಂತೆಗೆದುಕೊಳ್ಳುವುದಿಲ್ಲ. ಯಾರೇ ಆಗಲಿ ನಮ್ಮನ್ನು ಎದುರು ಹಾಕಿಕೊಂಡಲ್ಲಿ ಅಂತಹವರನ್ನು ಮುಲಾಜಿಲ್ಲದೆ ಕೆಲಸದಿಂದ ವಜಾಮಾಡುತ್ತೇವೆ ಎಂದರು. 50 ನಿಮಿಷ ಕೆಲಸ ಸ್ಥಗಿತಗೊಳಿಸಿದ್ದಕ್ಕೆ ಶಿಕ್ಷೆಯಾಗಿ 8 ಗಂಟೆಗಳ ವೇತನವನ್ನು ಕಡಿತಗೊಳಿಸಿದರು.

ಮುಷ್ಕರ

ಆಡಳಿತ ವರ್ಗದ ನಿರಂತರ ಶೋಷಣೆ ವಿರುದ್ಧ ಕಾರ್ಮಿಕರು ಎಚ್ಚೆತ್ತುಕೊಂಡರು. ಈ ನೀತಿಯನ್ನು ಪ್ರತಿಭಟಿಸದಿದ್ದರೆ ನಮಗೆ ಉಳಿಗಾಲವಿಲ್ಲವೆಂದರಿತ ಕಾರ್ಮಿಕರು ಹೋರಾಟದ ಸಿದ್ದತೆ ನಡೆಸಿದರು. ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಕಾರ್ಮಿಕರು ಆಡಳಿತ ಮಂಡಳಿಗೆ ಹಲವು ಬಾರಿ ಮನವಿ ಸಲ್ಲಿಸಿದರು. ಕೊಬ್ಬಿದ ವಿದೇಶಿ ಗೂಳಿಗೆ ಕಾರ್ಮಿಕ ಕೂಗು ಕೇಳಿಸಲೇ ಇಲ್ಲ. ಜನವರಿ 8 ರಂದು ಕಾರ್ಮಿಕ ಮುಖಂಡರು ಬೇಡಿಕೆಯ ಪಟ್ಟಿ ಸಲ್ಲಿಸಿ ತಮ್ಮ ಬೇಡಿಕೆ ಈಡೇರಿಸದಿದ್ದರೆ ಜನವರಿ 24 ರಿಂದ ಅನಿರ್ಧಿಷ್ಟಾವಧಿ ಮುಷ್ಕರ ಮಾಡುವುದಾಗಿ ಬೆದರಿಕೆ ಒಡ್ಡಿದರು. ಅಂದು ಮನವಿ ಪತ್ರ ಸ್ವೀಕರಿಸಿದ ಆಡಳಿತ ಮಂಡಳಿ ಮರುದಿನ ಸಂಘದ ಮುಖಂಡರ ಮೇಲೆ ಕ್ರಮ ಜರುಗಿಸಿತು. ಅಧ್ಯಕ್ಷ ಸತೀಶ್‌ರನ್ನು ಅಮಾನತುಗೊಳಿಸಿ ಕಾರ್ಯದರ್ಶಿ ಶಿವಕುಮಾರ್ ಮತ್ತು ಜಂಟಿ ಕಾರ್ಯದರ್ಶಿ ರಘು ಈ ಇಬ್ಬರನ್ನು ಯಾವುದೇ ನೋಟೀಸ್ ನೀಡದೆ ವಜಾಗೊಳಿಸಿದರು. ಈ ಸುದ್ದಿ ಕಾರ್ಮಿಕರ ನಡುವೆ ಕಾಡ್ಗಿಚ್ಚಿನಂತೆ ಹರಡಿತು. ಮೊದಲೇ ನೋವಿನಿಂದ ಕುದಿಯುತ್ತಿದ್ದ ಕಾರ್ಮಿಕರಿಗೆ ಮಾಲೀಕರ ಇಂತಹ ದಬ್ಬಾಳಿಕೆ ಸಹಿಸಲು ಸಾಧ್ಯವಾಗಲಿಲ್ಲ. ಇದನ್ನು ಪ್ರತಿಭಟಿಸಲು ಜನವರಿ 10 ರಿಂದಲೇ ಮುಷ್ಕರಕ್ಕಿಳಿದರು.

ಬಿಡದಿ ಸಭೆಗೆ ಶಾಸಕರಿಂದ ಅಡ್ಡಿ

ಕಾರ್ಮಿಕರ ಮುಷ್ಕರವನ್ನು ಹತ್ತಿಕ್ಕಲು ಆಡಳಿತ ವರ್ಗ ನಿರಂತರ ಪ್ರಯತ್ನಿಸುತ್ತಿದೆ. ಕಾರ್ಮಿಕರು ಕಾರ್ಖಾನೆಯ ಬಳಿ ಸೇರದಂತೆ ತಡೆಯಲು ಪೊಲೀಸರಿಗೆ ಹಣ ನೀಡಿ 144 ಸೆಕ್ಷನ್ ಜಾರಿಗೊಳಿಸಿದರು. ಸಾರ್ವಜನಿಕರ ಗಮನ ಸೆಳೆಯಲು ಕಾರ್ಮಿಕರು ರಕ್ತದಾನ ಶಿಬಿರ ನಡೆಸಿ 80 ಕಾರ್ಮಿಕರು ತಮ್ಮ ರಕ್ತ ದಾನ ಮಾಡಿದರೆ, ಪೊಲೀಸರು ಈ ಶಿಬಿರದ ಟೆಂಟನ್ನೆ ಕಿತ್ತು ಬಿಸಾಡಿದರು. ಮುಷ್ಕರ ನಿರತ ಕಾರ್ಮಿಕರು ಬರುತ್ತಿದ್ದ, ವಾಹನವನ್ನು ತಡೆದು ಕೇಸು ದಾಖಲಿಸಿದರು. ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಮತು ಮತೊಬ್ಬ ಮುಖಂಡ ವಾಸು

ಹಾಸುಂಡು ಬೀಸಿ ಹೊಗೆದಂಗ

‘ಬಾಳೆಲೆಯ ಹಾಸುಂಡು ಬೀಸಿ ಹೊಗೆದಂಗ’ ಈ ಮಾತು ಟೊಯೊಟಾ ಕಿರ್ಲೋಸ್ಕರ್ ಕಾರ್ಮಿಕರಿಗೆ ಅನ್ವಯಿಸುತ್ತದೆ. ಕಾರ್ಮಿಕರಿಂದ ನಿರಂತರ ದುಡಿಸಿ ಶಕ್ತಿ ಹೀನವಾಗಿ ‘ಅನ್ ಫಿಟ್’ (ಕೆಲಸಕ್ಕೆ ಯೋಗ್ಯವಲ್ಲ) ಎಂಬ ಸರ್ಟಿಫಿಕೆಟ್ ಕೊಟ್ಟು ಮನೆಗೆ ಕಳಿಸುವ ಕಾರ್ಮಿಕನ ಸ್ಥಿತಿ ಊಟಕ್ಕೆ ಉಪಯೋಗಿಸಿದ ಬಾಳೆ ಎಲೆಯಂತಾಗಿದೆ.

ಒಂದೇ ಸಮನೆ ಬಗ್ಗಿ ದುಡಿಯಬೇಕು. ನಿಶಕ್ತಿಯಿದ್ದರೂ ಭಾರವಾದ ವಸ್ತುಗಳನ್ನು ಮೇಲೆತ್ತಲೇಬೇಕು. ಕಾಲು ನೋವಿದ್ದರೂ ಸರಿ ಕಾಲಿಗೆ ಬಿಗಿಯಾದ ಪಟ್ಟಿ ಕಟ್ಟಿಕೊಂಡಾದರೂ ಗಾಲಿ ತಳ್ಳಲೇಬೇಕು. ಸೊಂಟ ನೋವಿರಲಿ, ಶಸ್ತ್ರಚಿಕಿತ್ಸೆಯೇ ಆಗಿರಲಿ ಸೊಂಟಕ್ಕೆ ಬೆಲ್ಟ್ ಹಾಕಿಯಾದರೂ ಕೆಲಸ ಮಾಡಲೇಬೇಕು. ಕೇವಲ 2 ವರ್ಷಗಳಲ್ಲಿ ಇನ್ನೂ ಕಾಯಂ ಆಗುವ ಮುನ್ನವೇ 15 ಕಾರ್ಮಿಕರು ಅನ್‌ಫಿಟ್ ಆಗಿ ಮನೆಗೆ ಹೋಗಿದ್ದಾರೆ. ಹೀಗೆ ದುಡಿದರೆ ಉಳಿದ ಕಾರ್ಮಿಕರಿಗೂ ಅನ್‌ಫಿಟ್ ಸರ್ಟಿಫಿಕೆಟ್ ತೆಗೆದುಕೊಳ್ಳುವ ಕಾಲ ದೂರವಿಲ್ಲ. ಖಾಲಿ ಜಾಗ ತುಂಬಲು ನಿರುದ್ಯೋಗಿಗಳ ಪಡೆಯೇ

...ವಡೆಯಲ್ಲಿ ...ರ್ಮಿಕರು

...ಲ್ಲಿ ಕಾರ್ಮಿಕ ಕಾನೂನುಗಳನ್ನು, ನಾಗರೀಕ ...ರಾಕ್ಷಸ ಕಂಪನಿಯ ಒಂದೇ ಗುರಿ ಅತ್ಯಧಿಕ ...ತ್ತಡದ ಪರಿಸ್ಥಿತಿಯಲ್ಲಿ ಯುವ ಕಾರ್ಮಿಕರು ... ಈ ಅಮಾನವೀಯ ಶೋಷಣೆ ವಿರುದ್ಧ ...ರದಿ ಇಲ್ಲಿದೆ.

ಜೈಲಿಗೆ ತಳ್ಳಿದರು.

ಕಾರ್ಮಿಕರು ಸಾರ್ವಜನಿಕರಿಗೆ ತಮ್ಮ ಸಂಕಷ್ಟ ವಿವರಿಸಲು ಮತ್ತು ಸರ್ಕಾರದ ಮೇಲೆ ಒತ್ತಡ ತರುವ ಸಲುವಾಗಿ ನಗರದ ನಾಲ್ಕು ಕಡೆ ಬಹಿರಂಗ ಸಭೆ ನಡೆಸಲು ತೀರ್ಮಾನಿಸಿದರು. ಬಿಡದಿ ಬಳಿ ಸಭೆ ನಡೆಸಲು ಪೊಲೀಸರು ಅನುಮತಿ ನಿರ್ಾಕರಿಸಿದರು. ಸ್ಥಳೀಯ ಶಾಸಕರು ಸಭೆ ನಡೆಸಲು ಸಿಐಟಿಯು ಸಂಘಟನೆಗೆ ಅವಕಾಶ ಕೊಡಬಾರದೆಂದು ಹೇಳಿದ್ದಾರೆ, ನಾವು ಸಭೆ ನಡೆಸಲು ಬಿಡುವುದಿಲ್ಲ ಎಂದರು. ಸಭೆ ನಿಗದಿಯಾಗಿದ್ದ ಸಮಯದಲ್ಲಿ ಸಾವಿರಾರು ಕಾರ್ಮಿಕರು ಒಂದೆಡೆ ನೆರೆದಿದ್ದರೆ, ಸಭೆಯಲ್ಲಿ ಗಲಭೆ ಸೃಷ್ಟಿಸಲೆಂದೇ ಶಾಸಕ ಸಿ.ಎ. ಲಿಂಗಪ್ಪನವರ ಮಗ 50 ಜನ ಗೂಂಡಾಗಳ ಜೊತೆಗೂಡಿ ಪೊಲೀಸ್ ಠಾಣೆಯ ಬಳಿಯೇ ನೆರೆದಿದ್ದರು. ಹೆಜ್ಜಾಲದ ಗೋಲಿಬಾರ್ ಜನರ ಮನದಲ್ಲಿ ಇನ್ನೂ ಮಾಸುವ ಮುನ್ನ ಮತ್ತೊಂದು ಅಂತಹ ದುರಂತಕ್ಕೆ ಈ ಗೂಂಡಾ ಪಡೆ ಸಜ್ಜಾಗಿತ್ತು. ಹೆಜ್ಜಾಲ ಗೋಲಿಬಾರ್ ಬಗ್ಗೆ ತನಿಖೆ ನಡೆಸಿದ ಆಯೋಗ ಸಿ.ಎಂ. ಲಿಂಗಪ್ಪನವರ ಗೂಂಡಾ ಪಡೆ ಇದಕ್ಕೆ ಕಾರಣವೆಂದು ಗುರುತಿಸಿ ಶಾಸಕರ ಮೇಲೆ ವಿಚಾರಣೆ ನಡೆಸುವಂತೆ ಸೂಚಿಸಿರುವ ಸುದ್ದಿ ವಿಧಾನಸಭೆಯಲ್ಲಿ ಪ್ರಕಟವಾಗುತ್ತಿರುವ ಸಂದರ್ಭದಲ್ಲೆ ಮತ್ತೆ ಅಂತದೆ ದಾಳಿಗೆ ಈ ಪಡೆ ಸಜ್ಜಾಗಿದ್ದುದನ್ನು ಗಮನಿಸಿದ ಕಾರ್ಮಿಕರು ಅಂದು ಶಾಂತರಾಗಿಯೇ ಹಿಂತಿರುಗಿದರು.

ಕೆಂಗೇರಿ ಉಪನಗರ, ವಿಜಯನಗರ, ದಾಸರಹಳ್ಳಿಗಳಲ್ಲಿ ಯಶಸ್ವಿ ಸಭೆ ನಡೆಸಿದರು. ದಾಸರಹಳ್ಳಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶದ ಕಾರ್ಮಿಕರೂ ಸೇರಿದಂತೆ 3 ಸಾವಿರಕ್ಕೂ ಅಧಿಕ ಕಾರ್ಮಿಕರು 2 ಕಿ.ಮೀ ದೂರ ಮೆರವಣಿಗೆ ನಡೆಸಿ ಬೃಹತ್ ಬಹಿರಂಗ ಸಭೆ ನಡೆಸಿದರು. ಇಂದೆಂದೂ ಕಾಣದಂತ ಭಾರೀ ಪೊಲೀಸ್ ಬಂದೂಬಸ್ತ್ ಏರ್ಪಡಿಸಲಾಗಿತ್ತು. ಪೆಪ್ಸಿ, ಟಾಟಾ, ವಿಪ್ರೋ, ಪೈನ್ ಕ್ರಾಫ್ಟ್, ಔಮಾ ಇಂಜಿನಿಯರಿಂಗ್, ಸದರನ್ ಡ್ರೈಸ್ಸಿಂಗ್‌ಫೋರೆಸ್, ಕಮ್ಮಾಡಯಲ್ಸ್ ಅಂಡ್ ಡಿವೈಸಸ್ ಕಾರ್ಖಾನೆಗಳ ಕಾರ್ಮಿಕರೂ ಇದರಲ್ಲಿ ಸೇರಿದ್ದರು.

ಮುಖ್ಯಮಂತ್ರಿ ಮನೆ ಮುಂದೆ ದರಣಿ

ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಿ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿ ನಡೆಸಿ ಮನವಿ ಪತ್ರ ಸಲ್ಲಿಸಿದರು. ಚುನಾವಣಾ ಗುಂಗಿನಲ್ಲಿದ್ದ ಮುಖ್ಯಮಂತ್ರಿಗಳು ಮನವಿ ಸ್ವೀಕರಿಸಿ ಸಮಸ್ಯೆ ಪರಿಹರಿಸಲು ಯತ್ನಿಸುವುದಾಗಿ ಹೇಳಿದರು. ಕಾರ್ಮಿಕ ಮಂತ್ರಿ ಒಂಡಸಗೇರಿ ಮನೆ ಮುಂದೆ ಜಮಾಯಿಸಿದ ಒತ್ತಾಯಿಸಿದರು. ಟೊಯೋಟಾ ಕಿರ್ಲೋಸ್ಕರ್ ಆಡಳಿತ ಮಂಡಳಿ ಕಾರ್ಮಿಕ ಕಾನೂನನ್ನೇ ಉಲ್ಲಂಘಿಸಿ ಕಾರ್ಮಿಕ ಇಲಾಖೆಗೆ ಸವಾಲು ಹಾಕಿದ್ದಾರೆ. ಯಾವುದೇ ನೋಟಿಸ್ ನೀಡದೆ, ವಿಚಾರಣೆ ಇಲ್ಲದೆ ಕಾರ್ಮಿಕ ಮುಖಂಡರನ್ನು ವಜಾಗೊಳಿಸಲಾಗಿದೆ. ನಿಯಮ ಉಲ್ಲಂಘಿಸಿ 10 ಗಂಟೆಗಳ ಕಾಲ ದುಡಿಸುತ್ತಿದ್ದಾರೆ. ಕಾನೂನು ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಒತ್ತಾಯಿಸಿದರು. ಮಾಲೀಕರನ್ನು ಕರೆದು ನಿಮ್ಮ ಸಮಸ್ಯೆ ಪರಿಹರಿಸುತ್ತೇನೆಂದು ಅವರು ಕಾರ್ಮಿಕರಿಗೆ ಭರವಸೆ ನೀಡಿದರು.

ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಮಾಲೀಕ ಯಾವುದೇ ಬೇಡಿಕೆಗೂ ಒಪ್ಪಲು ಸಾಧ್ಯವಿಲ್ಲವೆಂದು ಖಡಾಖಂಡಿತವಾಗಿ ನುಡಿದರು. ಯಾವುದೇ ಕಾರಣಕ್ಕೂ ವಜಾ ಆದ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಹಾಗೇನಾದರೂ ಆದರೆ ನಾನು ಕಾರ್ಖಾನೆ ನಡೆಸಲು ಸಾಧ್ಯವಿಲ್ಲ. ಕಾರ್ಮಿಕರು ಮುಷ್ಕರ ಬಿಟ್ಟು ಕೆಲಸಕ್ಕೆ ಹಾಜರಾಗಲಿ. ಶೇ. 100ರಷ್ಟು ಉತ್ಪಾದನೆ ಮಾಡಿ ತೋರಿಸಲಿ, ನಂತರ ಉಳಿದ ಬೇಡಿಕೆಗಳ ಬಗ್ಗೆ ಮಾತನಾಡುತ್ತೇನೆ ಎಂದು ಹೇಳಿದರು. ಕಾರ್ಮಿಕ ಆಯುಕ್ತರು ತಮ್ಮ ಅಧಿಕಾರ ಚಲಾಯಿಸಲು ಅಸಮರ್ಥರಾದರು. ಕಾಯ್ದೆ ಉಲ್ಲಂಘಿಸಿದ ಆಡಳಿತ ವರ್ಗದ ವಿರುದ್ಧ ಕ್ರಮ ಜರುಗಿಸುವ ಬದಲು ಮುಷ್ಕರ ವಾಪಸ್ ತೆಗೆಯುವಂತೆ ಕಾರ್ಮಿಕರ ಮನವೊಲಿಸಿದರು. ಅದಕ್ಕೆ ಒಪ್ಪದಿದ್ದಾಗ ವಜಾ ಕ್ರಮವನ್ನು ಅಮಾನತ್ತಿಗೆ ಬದಲಾಯಿಸಿ ವಿಚಾರಣೆ ನಡೆಸಲು ಒಪ್ಪಿದರೆ ಮುಷ್ಕರ ವಾಪಸ್ ತೆಗೆಯುವುದಾಗಿ ಒಂದು ಹಂತದಲ್ಲಿ ಮುಖಂಡರು ಸಲಹೆ ಕೊಟ್ಟರು. ಆಡಳಿತ ವರ್ಗ ತನ್ನ ಬಿಗಿ ಪಟ್ಟು ಬಿಡಲಿಲ್ಲ.

ಕೈ ಚೆಲ್ಲಿದ ಇಂಟಕ್

ಇಲ್ಲಿನ ಸಂಘಕ್ಕೆ ಕಾನೂನು ಸಲಹೆಗಾರರಾಗಿದ್ದ INTUC ಮುಖಂಡ ಕಾರ್ಮಿಕರ ಮುಷ್ಕರ ಪ್ರಾರಂಭವಾಗುತ್ತಿದ್ದಂತೆ ಮಾಲೀಕರ ಜೊತೆ ಮಾತುಕತೆ ನಡೆಸಿದರು. ಕಾರ್ಮಿಕರ ಬೇಡಿಕೆಗೆ ಮಾಲೀಕ ವರ್ಗ ಮಣಿಯಲಾರದೆಂದು ಅರಿತ ಆ ಮುಖಂಡ, ಮುಷ್ಕರ ವಾಪಸ್ ತೆಗೆದು ಕೆಲಸಕ್ಕೆ ಹೋಗುವಂತೆ ಕಾರ್ಮಿಕರ ಬಳಿ ಹೇಳಿದರು. ಈಗಾಗಲೇ ಆಡಳಿತ ವರ್ಗದಿಂದ ಸಾಕಷ್ಟು ಕಿರುಕುಳ ಅನುಭವಿಸಿದ್ದು, ಈಗ ಸೋತು ಒಳಹೋದರೆ ಖಂಡಿತ ನಮಗೆ ಉಳಿಗಾಲವಿಲ್ಲ, ಮುಖಂಡರೇ ಇಲ್ಲವೆಂದ ಮೇಲೆ ನಮ್ಮನ್ನು ಕೇಳುವವರಾರು? ನಾಳೆ ನಮಗೂ ಇಂತಹದೆ ಗತಿ ಬರಬಹುದೆಂದು ಅರಿತ ಕಾರ್ಮಿಕರು ಇಂಟಕ್ ಮುಖಂಡರ ಮನವಿಗೆ ಒಪ್ಪಲಿಲ್ಲ. ಆ ಮುಖಂಡರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿ ಹೊರಟು ಹೋದರು. ದಿಕ್ಕು ಕಾಣದ ಕಾರ್ಮಿಕರು ಸ್ಥಳೀಯ ಶಾಸಕರ ಮೊರೆ ಹೋದರು. ಶಾಸಕರ ಮಗ ಮಾಲೀಕರೊಡನೆ ಮಾತುಕತೆಯ ನಾಟಕವಾಡಿ, ಮುಷ್ಕರವನ್ನು ವಾಪಸ್ ಪಡೆದು ಕೆಲಸಕ್ಕೆ ಹಿಂತಿರುಗುವಂತೆ ಹೇಳಿದರು. ಕಾರ್ಮಿಕರು ಒಪ್ಪದಿದ್ದಾಗ ಬೆದರಿಸಿದರು. ಒಂದು ವೇಳೆ ನೀವು ಸಿಐಟಿಯು ಸಂಘಟನೆಯನ್ನು ತಂದರೆ ನಾನು ಬಿಡುವುದಿಲ್ಲವೆಂದು ಹೆದರಿಸಿದರು. ಕಾರ್ಮಿಕರು ಜನತಾದಳ(ಎಸ್) ಮುಖಂಡರೊಬ್ಬರನ್ನು ಕರೆ ತಂದರು. ಅವರದೂ ಅದೇ ಮಂತ್ರ. ಮೊದಲು ನೀವು ಕೆಲಸಕ್ಕೆ ಹೋಗಿ ನಂತರ ಮಾತನಾಡೋಣ ಎಂದರು. ಕಾರ್ಮಿಕರು ಒಪ್ಪಲಿಲ್ಲ. ಕನಕಪುರ ಉಪ ಚುನಾವಣಾ ಕಾಂಗ್ರೆಸ್ ಅಭ್ಯರ್ಥಿ, ರಾಜ್ಯ ಸಚಿವ ಡಿ.ಕೆ. ಶಿವಕುಮಾರ್ ಬಳಿ ಹೋದರೂ ಏನೂ ಪ್ರಯೋಜನವಾಗಲಿಲ್ಲ. ಇವರೆಲ್ಲರೂ ಮಾಲೀಕರ, ಬಂಡವಾಳ ಶಾಹಿಗಳ ಪರ ವಕಾಲತ್ತು ವಹಿಸುವ ಜನ. ಕಾರ್ಮಿಕರ ಹಿತಕ್ಕಿಂತ ಇವರಿಗೆ ಮಾಲೀಕರ ಹಿತವೇ ಮುಖ್ಯ ಎಂಬ ಸತ್ಯವನ್ನು ಅರಿತ ಕಾರ್ಮಿಕರು ಕಾರ್ಮಿಕ ವರ್ಗದ ಪರವಾಗಿ ಪ್ರಾಮಾಣಿಕವಾಗಿ



8 ನಿಮಿಷಕ್ಕೊಂದರಂತೆ ಇಂತಹ ಕಾರುಗಳು ಕಾರ್ಮಿಕರ ರಕ್ತ ಹೀರಿ ಕಂಪನಿಯಿಂದ ಹೊರಬರುತ್ತಿವೆ

ಮತ್ತೆ ಕಾರ್ಮಿಕ ಸಚಿವರ ಬಳಿ ಸಭೆ ನಡೆದರೂ ಯಾವುದೇ ಪ್ರಯೋಜನವಾಗಲಿಲ್ಲ. ಕಾರ್ಮಿಕರು ಇತರೆ ಕಾರ್ಮಿಕರ ಮತ್ತು ಸಾರ್ವಜನಿಕರ ಬೆಂಬಲ ಪಡೆದು ದೊಡ್ಡ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ಫೆಬ್ರವರಿ 23 ರಂದು ವಿವಿಧ ಸಂಘಟನೆಗಳ ಮುಖಂಡರು ಸಭೆ ಸೇರಿ ಸೌಹಾರ್ದ ಬೆಂಬಲ ಸೂಚಿಸಿದ್ದಾರೆ. ಚಿಕ್ಕಲಾಲ್‌ಬಾಗ್‌ನಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಒತ್ತಾಯಿಸಿ ಸರ್ಕಾರಕ್ಕೆ ಮನವಿ ಕೊಡಲು ನಿರ್ಧರಿಸಿದರು. ಕಾರ್ಮಿಕರ ಧೀರ ಹೋರಾಟ ಮುಂದುವರಿದಿದೆ.

8 ನಿಮಿಷಕ್ಕೆ ಒಂದು ಕಾರು


ಕೇವಲ 8 ನಿಮಿಷಕ್ಕೆ ಒಂದು ಕಾರು ! ದಿನಕ್ಕೆ 120 ಕಾರು! ಫೆಬ್ರವರಿ ತಿಂಗಳಿಂದ ಕೇವಲ 6 ನಿಮಿಷಕ್ಕೆ ಒಂದು ಕಾರು ತಯಾರಿಸಲು ಆಡಳಿತ ವರ್ಗ ನಿರ್ಧರಿಸಿ ಆದೇಶಿಸಿದೆ. 1200 ಕಾರ್ಮಿಕರ ಅವಿರತ ಶ್ರಮದಿಂದ, ಟೊಯೊಟಾ ಕಿರ್ಲೋಸ್ಕರ್ ಕಾರ್ಖಾನೆ ಮಾಲಿಕರು ಕೋಟಿಗಟ್ಟಲೆ ಹಣ ಲೂಟಿ ಹೊಡೆಯುತ್ತಿದ್ದಾರೆ. ದಿನದಲ್ಲಿ 6 ಕೋಟಿ ರೂಗಳ ವ್ಯಾಪಾರ ವಹಿವಾಟು ನಡೆಸುತ್ತಿದೆ. ಇಷ್ಟೊಂದು ಕಾರುಗಳನ್ನು ಉತ್ಪತ್ತಿ ಮಾಡುವ 1200 ಕಾರ್ಮಿಕರ ವೇತನ ದಿನವೊಂದಕ್ಕೆ ಕೇವಲ ಒಂದು ಲಕ್ಷದ ಐವತ್ತು ಸಾವಿರ ರೂ. ಮಾತ್ರ. ವಾಹನ ತಯಾರಿಕಾ ಕಾರ್ಖಾನೆಗಳಲ್ಲಿಯೇ ಅತ್ಯಂತ ಶೋಚನೀಯ ವೇತನವನ್ನು ಇಲ್ಲಿ ಕಾರ್ಮಿಕರಿಗೆ ನೀಡುತ್ತಿದ್ದಾರೆ. ಇತರೆ ಕಾರ್ಖಾನೆಗಳಲ್ಲಿ ಕಾರ್ಖಾನೆಯ ಒಟ್ಟು ... ಮಾತ್ರ.

ಇಷ್ಟಿದ್ದೂ ಕಾರ್ಮಿಕರಿಗೆ ಅಧಿಕ ಸವಲತ್ತು ಕೊಡುತ್ತಿದ್ದೇನೆ, ಯಾವುದೇ ಕಾರ್ಖಾನೆ ನೀಡದಷ್ಟು ಅಧಿಕ ವೇತನ ನೀಡುತ್ತಿದ್ದೇವೆ ಎಂದು ಆಡಳಿತ ವರ್ಗ ಅಪ್ಪಟ ಸುಳ್ಳು ಪ್ರಚಾರ ಮಾಡುತ್ತಿದೆ. ಬಸ್ಸಿನ ಸೌಲಭ್ಯ ಒದಗಿಸಿ 200ರೂ ಕಸಿದುಕೊಳ್ಳುತ್ತಿದೆ. ಕ್ಯಾಂಟೀನ್ ಸೌಲಭ್ಯ ಒದಗಿಸಿ 400 ರೂ. ಕಸಿದುಕೊಳ್ಳುತ್ತಿದೆ.

ನಿಮ್ಮ ಮಕ್ಕಳ ಭವಿಷ್ಯ ಹಾಳು ಮಾಡದಿರಿ

ನಿಮ್ಮ ಮಗ ಕೆಲವು ಪುಂಡರ ಜೊತೆ ಸೇರಿ ಕೆಲಸಕ್ಕೆ ಗೈರು ಹಾಜರಾಗುತ್ತಿದ್ದಾನೆ. ನಿಮ್ಮ ಮಗನಿಗೆ ಬುದ್ಧಿ ಹೇಳಿ ಕೆಲಸಕ್ಕೆ ಕಳಿಸಿ ನಿಮ್ಮ ಮಗನ ಭವಿಷ್ಯ ಹಾಳು ಮಾಡದಿರಿ.

ಕಾರ್ಮಿಕ ಸಂಘಟನೆ ಮುರಿಯಲು ಮಾಲಿಕ ವರ್ಗ ಕಾರ್ಮಿಕರ ತಂದೆ ತಾಯಿಗಳಿಗೆ ನೀಡಿದ ಉಪದೇಶವಿದು. ಕನಕಪುರ, ಹಾಸನ, ಬೆಂಗಳೂರಿನ ಹಲವು ಕಡೆ ಕಾರ್ಮಿಕರ ಪೋಷಕರಿಗೆ ಅನುಕೂಲವಾಗುವ ಕಡೆ ದೊಡ್ಡ ದೊಡ್ಡ ಹೊಟೆಲ್‌ಗಳಲ್ಲಿ ಸಭೆ ಕರೆದು ಭರ್ಜರಿ ಊಟದ ವ್ಯವಸ್ಥೆ ಮಾಡಿ ಸಂಘಟನೆಯ ವಿರುದ್ಧ ಅಪ ಪ್ರಚಾರ ನಡೆಸಿದರು. ಕೆಲವೇ ಕಾರ್ಮಿಕರು ಮುಷ್ಕರದಲ್ಲಿದ್ದಾರೆ. ಆಡಳಿತ ವರ್ಗದ ಸದಸ್ಯರ ಮೇಲೆ ಹಲ್ಲೆ ನಡೆಸಲು ಯತ್ನಿಸಿದ, ಕುಡಿದು ಗಲಾಟೆ ಮಾಡಿದ ಇಬ್ಬರು ಕಾರ್ಮಿಕರನ್ನು ವಜಾ ಮಾಡಿದ್ದೇವೆ. ನಿಮ್ಮ ಮಗನನ್ನು ಕೆಲಸಕ್ಕೆ ಕಳಿಸಿ ನಿಮ್ಮ ಮನೆಗೆ ವಾಹನ ಕಳಿಸಿ ಕೊಡುತ್ತೇವೆ ಅಥವಾ ಕಾರ್ಖಾನೆಯಲ್ಲೇ ರಾತ್ರಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಹೀಗೆ ಪೋಷಕರಿಗೆ ಹೇಳಿದರು. ಸಿಐಟಿಯು ಸಂಘದ ವಿರುದ್ಧ ಹಲವು ಸುಳ್ಳು ಆರೋಪಗಳನ್ನು ಹೊರಿಸಿದರು. ಸಿ.ಐ.ಟಿ.ಯು ಜೊತೆ ಕೈಜೋಡಿಸಿದರೆ ನಿಮ್ಮ ಮಕ್ಕಳ ಭವಿಷ್ಯ ಹಾಳಾಗುತ್ತದೆ ಎಂದು ನಂಬಿಸಲು ಯತ್ನಿಸಿದರು. ಸರ್ಕಾರ ಮತ್ತು ಪೋಲೀಸ್ ಇಲಾಖೆಯ ಬಂಡವಾಳಶಾಹಿ ಪರ ನೀತಿಯಿಂದಾಗಿ ಕೆಲವು ಕಾರ್ಖಾನೆ ಕಾರ್ಮಿಕರು ಎದುರಿಸಿದ ಸಂಕಷ್ಟಗಳಿಗೆ ಸಂಘವೇ ಕಾರಣ ಎಂದು



ಸೊಂಟಕ್ಕೆ ಪಟ್ಟಿ ಕಟ್ಟಿಕೊಂಡಿರುವ ಕಾರ್ಮಿಕ

ಗಾಢ ಸ್ತ್ರೀ ಸಂವೇದನೆ ಕೊಟ್ಟ ವಿದ್ಯಾರ್ಥಿನಿಯರ ರಾಜ್ಯ ಸಮಾವೇಶ

ರಾಜ್ಯಮಟ್ಟದ ವಿದ್ಯಾರ್ಥಿನಿಯರ ಸಮಾವೇಶ ಉಡುಪಿಯಲ್ಲಿ ನಡೆದದ್ದೇ ಒಂದು ವಿಶೇಷ. ವಿಶ್ವಹಿಂದೂ ಪರಿಷತ್, ಭಜರಂಗದಳದ ಅಟ್ಟಹಾಸ, ದಬ್ಬಾಳಿಕೆಗಳು, ಸಂಘ ಪರಿವಾರದ ಕೋಮುವಾದೀ ಕೃತ್ಯಗಳು ಮತ್ತು ಅವರಿಗೆ ಪೇಜಾವರ ಮಠಾಧೀಶರ ಆಶೀರ್ವಾದಗಳು ಇರುವ ಕೇಂದ್ರದಲ್ಲಿ ಸವಾಲು ಎಸೆಯುವಂತೆ ಯಶಸ್ವಿಕಾರ್ಯಕ್ರಮ ನಡೆದವು. ಉಡುಪಿಗೆ ಕಾಲಿಟ್ಟರೆ ಕೈ-ಕಾಲು ಮುರಿಯುವುದಾಗಿ ಚೆಡ್ಡಿಗಳ ಬೆದರಿಕೆಯನ್ನು ಧಿಕ್ಕರಿಸಿ ಲಂಕೇಶ್ ಪತ್ರಿಕೆಯ ಸಂಪಾದಕಿ ಗೌರಿ ಲಂಕೇಶ್ ಭಾಗವಹಿಸಿ ಕೋಮುವಾದಿಗಳ ಮುಖವಾಡಗಳನ್ನು ಬಯಲಿಗೆಳೆದದ್ದು ಗಮನಾರ್ಹ. ಅದರತ್ತ, ಸಮಾವೇಶದ ಒಂದು ವರದಿ.

ಆರ್.ರಾಮಕೃಷ್ಣ

8ನೇ ತರಗತಿಯ ವಿದ್ಯಾರ್ಥಿನಿ 'ಭಾಗ್ಯ'ಳಿಗೆ 13 ವರ್ಷ. ಸೌಂದರ್ಯದ ಸಾಮಾನ್ಯ ಕಲ್ಪನೆಯಲ್ಲಿ ಸುಂದರಿ ಎಂದೇ ಕರೆಯಬೇಕು. (ಪಾಪ ಅದಕ್ಕೆ ಅವಳು ಜವಾಬ್ದಾರಿಯಲ್ಲ) ಆಕೆ ಶಾಲೆಗೆ ಹೋಗುವ ದಾರಿಯಲ್ಲಿ ಪೋಕರಿ ಹುಡುಗರು ಹಿಂದೆ ಬರುತ್ತಾರೆ. ಒಬ್ಬ ಹುಡುಗ ಒಂದು ದಿನ Love you ಅಂತ ಬರೆದು ಒಂದು ಪತ್ರವನ್ನು ಕೊಟ್ಟೇ ಬಿಟ್ಟ.



ಇಂತಹ ಘಟನೆಯೊಂದರ ಪರಿಣಾಮ ಏನೇನಾಗಬಹುದು? ಭಾಗ್ಯ ಬೆದರಿ ಬೆವರಿ ಗಾಬರಿಯಾಗಬಹುದು. ಆ ವಯಸ್ಸಿನಲ್ಲಿ ಪ್ರೀತಿ ಎಂಬ ಭ್ರಮೆಗೆ ಬೀಳಬಹುದು. ಶಾಲೆಯಲ್ಲಿ ದೂರು ಕೊಡಬಹುದು. ತನ್ನ ಮನೆಯಲ್ಲಿ ದೊಡ್ಡವರಿಗೆ ದೂರು ಕೊಟ್ಟು ರೋಡ್ ರೋಮಿಯೋಗೆ ತಕ್ಕ ಪಾಠ ಕಲಿಸಬಹುದು. ಅಥವಾ ಇದು ಯಾವುದೂ ಆಗದೆ ಈ ವಿಚಾರ ಆಕೆಯ ಮನೆಯಲ್ಲಿ ಗೊತ್ತಾಗಿ ಅನಗತ್ಯ ರಾದ್ಧಾಂತಗಳಾಗಿ ಮನೆಯವರೆಲ್ಲಾ ಸೇರಿ ಭಾಗ್ಯ ಶಾಲೆಗೆ ಹೋಗುವುದು ಅಗತ್ಯವಿಲ್ಲ ಎಂಬ ತೀರ್ಪನ್ನು ಕೊಟ್ಟು ಶಾಲೆ ಬಿಡಿಸಬಹುದು. ತನ್ನ ಯಾವ ರೀತಿಯ ತಪ್ಪು ಇಲ್ಲದೇ ಯಾರೋ ಕಿಡಿಗೇಡಿಗಳ ಕಿಡಿಗೇಡಿತನಕ್ಕೆ ತನ್ನ ಶಿಕ್ಷಣವನ್ನೇ ಜೀವನವನ್ನೇ ಕಳೆದುಕೊಳ್ಳಬೇಕಾದ ಪರಿಸ್ಥಿತಿ ನಮ್ಮ ಸಮಾಜದಲ್ಲಿ ಮಹಿಳೆಗೆ ಅಪರೂಪವೇನಲ್ಲ. ಇಂತಹ ಒಂದು ಸಂಕೀರ್ಣವಾದ ಸಾಮಾಜಿಕ ಸಂದರ್ಭದಲ್ಲಿ ಹೆಣ್ಣು ಮಕ್ಕಳ ಒಂದು, ವಿಭಾಗ ನಮ್ಮ ಸಮಾಜದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಭಾರತದ ಸಮಾಜವನ್ನು ಸಾವಿರಾರು ವರ್ಷಗಳ ಕಾಲ ಆಳಿದ, ಆಳುತ್ತಿರುವ ಚಿಂತನೆಗಳ (ಸಂಸ್ಕೃತಿ) ಕ್ರೋಢೀಕರಣವಾದ ಮನುಸ್ಮೃತಿ ನಮ್ಮ ಸಮಾಜದಲ್ಲಿ ಹೇಗೆ ಅಡ್ಡಾಡಿ ಅಸಮಾನವಾಗಿ ವಿಭಜಿಸಿದೆ. ಮೇಲಿನಿಂದ ಕೆಳಕ್ಕೆ ಅಸಮಾನವಾಗಿ ಶ್ರೇಣೀಕರಣಗೊಳಿಸಿದೆ.

ಲಿಂಗ ಸಮಾನತೆ, ಎಲ್ಲರಿಗೂ (ಮಹಿಳೆಗೂ) ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಕ್ಕುಗಳನ್ನು ಪ್ರತಿಪಾದಿಸುವ ಶಕ್ತಿಗಳಿಗೂ, ಚಿಂತನೆಗಳಿಗೂ, ಸಂಪ್ರದಾಯಸ್ಥ ಶಕ್ತಿಗಳಿಗೂ ಚಿಂತನೆಗಳಿಗೂ ಸಂಘರ್ಷ ಅನಿವಾರ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ವಿದ್ಯಾರ್ಥಿನಿಯರ, ಮಹಿಳೆಯರ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಚರ್ಚಿಸುವ, ಸಮಸ್ಯೆಗಳ ವಿರುದ್ಧ ಹೋರಾಟ ರೂಪಿಸುವ ಪ್ರಯತ್ನವನ್ನು ನಡೆಸಿದೆ. ರಾಜ್ಯ ಮಟ್ಟದ ವಿದ್ಯಾರ್ಥಿನಿಯರ ಸಮಾವೇಶ ಉಡುಪಿಯಲ್ಲಿ ಜನವರಿ 12-13 2002 ಅತ್ಯಂತ ಯಶಸ್ವಿಯಾಗಿ ನಡೆಯಿತು. ಮಹಿಳೆಯರ ಕುರಿತ ಸಂಪ್ರದಾಯವಾದಿ ಮೂಲಭೂತವಾದಿ ಚಿಂತನೆಗಳೂ ಪ್ರಬಲವಾಗಿರುವ ಪ್ರಾಬಲ್ಯ ಹೊಂದಿರುವ ಉಡುಪಿ ಜಿಲ್ಲೆಯಲ್ಲಿ ಇಂತಹ ಒಂದು ಸಮಾವೇಶ ನಡೆದದಕ್ಕೆ ಮತ್ತಷ್ಟು ಮಹತ್ವ ಇದೆ.

ರಾಜ್ಯದ ಹದಿನೇಳು ಜಿಲ್ಲೆಗಳಿಂದ 110 ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದ ಈ ಸಮಾವೇಶವನ್ನು ಜನವರಿ 12.ರಂದು ದೇಶದ ಪ್ರತಿಷ್ಠಿತ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಹಾಗೂ ಎಸ್.ಎಫ್.ಐ.ನ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾದ ಅಲ್ಬಿನಾ ಶಕೀಲ್ ಉದ್ಘಾಟಿಸಿದರು. ರಾಷ್ಟ್ರದ ಪ್ರಸಕ್ತ ರಾಜಕೀಯ ಪರಿಸ್ಥಿತಿಯ ಕುರಿತು ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ಕುರಿತು ತಮ್ಮ ಮಹತ್ವದ ವಿಚಾರ ಮಂಡಿಸಿದರು.

ಭಯೋತ್ಪಾದನೆ ಒಂದು ರಾಜಕೀಯ ಸಮಸ್ಯೆ ಅದಕ್ಕೆ ರಾಜಕೀಯ ಪರಿಹಾರ ರೂಪಿಸಬೇಕು ಎಂದು ಆಗ್ರಹಿಸಿದ ಅಲ್ಬಿನಾ ರಾಜಕೀಯ ಶೈಕ್ಷಣಿಕ ಪ್ರಶ್ನೆಗಳನ್ನೂ ಅವರು ವಿವರಿಸಿದರು.

ವಿದ್ಯಾರ್ಥಿಗಳಿಗೆ ರಾಜಕೀಯ ಪ್ರಜ್ಞೆ ಬೇಕು - ಸತ್ಯ.ಎಸ್

ರಾಜಕೀಯ ಪ್ರಜ್ಞೆ ಎಂದರೆ ಶುಲ್ಕ ಏರಿಕೆ ಏಕೆ ಎಂದು ತಿಳಿಯುವುದು, ಶಾಲಾ ಕಾಲೇಜು, ನಮ್ಮ ಶಿಕ್ಷಣ ಬದುಕನ್ನು ನಿಯಂತ್ರಿಸುವ ನಮ್ಮ ಬದುಕಿನ ಸೂತ್ರವನ್ನು ಹಿಡಿದಿರುವ ರಾಜಕೀಯ ವ್ಯವಸ್ಥೆ ಬಗೆಗೆ ಅರಿಯುವುದು. ಅನ್ಯಾಯವನ್ನು ಪ್ರಶ್ನಿಸುವುದು, ಪ್ರತಿಭಟಿಸುವುದು ಇದನ್ನು ಮಾಡಲು ಸಂಘಟನೆ ಬೇಕು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಂಘಟಿತರಾಗಬೇಕು ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಮುಖಂಡರು ಪತ್ರಕರ್ತರೂ ಆದ ಸತ್ಯಾ.ಎಸ್ ಕರೆನೀಡಿದರು.

ಹಿಂದೆ ಸೋವಿಯತ್ ದೇಶದಲ್ಲಿ ಐರೋಪ್ಯ ರಾಷ್ಟ್ರಗಳೂ ಹಾಗೂ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ನಡೆಯುವ ಹೋರಾಟಗಳನ್ನು ಗಮನಿಸಿದರೆ ಮಹಿಳೆಯರು ಅಲ್ಲಿ ನಡೆಯುವ ಚಳುವಳಿಗಳಲ್ಲಿ ಪ್ರಧಾನ ಪಾತ್ರ ವಹಿಸುವುದನ್ನು, ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವುದು ನೋಡಬಹುದು. ತಮ್ಮ ವಿದ್ಯಾರ್ಥಿ ದೆಸೆಯಲ್ಲೆ ಎಸ್.ಎಫ್.ಐ ನಂತಹ ಸಂಘಟನೆಯ ಸಂಪರ್ಕ ಸಿಗುವುದು ಒಂದು ಉತ್ತಮ ಅವಕಾಶ ಎಂದ ಅವರು ಸಾಕ್ಷರತೆ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು, ಹೋರಾಟ ಸಮಸ್ಯೆಗೆ ಪರಿಹಾರ ಎಂದರು.

ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಆರ್. ರಾಮಕೃಷ್ಣ ಸಮಾಜದಲ್ಲಿ ಮಹಿಳೆಯರ ಸ್ಥಿತಿ-ಗತಿ -ದೃಷ್ಟಿಕೋನ, ಯುವ-ವಿದ್ಯಾರ್ಥಿನಿಯರ ಸಮಸ್ಯೆ, ಕೋಮುವಾದ, ಶಿಕ್ಷಣ ಕುರಿತು ಮಾತನಾಡಿದರು. ಸಮಾವೇಶದ ಗುರಿ ವಿವರಿಸಿದರು.

ಎಸ್.ಎಫ್.ಐ ರಾಜ್ಯ ಉಪಾಧ್ಯಕ್ಷರು, ಉಡುಪಿ ಜಿಲ್ಲಾ ಅಧ್ಯಕ್ಷರೂ ಆದ ಮಮತಾ ಆರ್. ಶೆಟ್ಟಿಯವರು ಮಾತನಾಡಿ ಶಿಕ್ಷಣದ ಖಾಸಗೀಕರಣದಿಂದ ವಿದ್ಯಾರ್ಥಿನಿಯರಿಗೆ ಶಿಕ್ಷಣ ಅವಕಾಶದ ನಿರಾಕರಣೆ ಹೆಚ್ಚಲಿದೆ ಎಂದರು.

ಎಸ್.ಎಫ್.ಐನ ರಾಜ್ಯಾಧ್ಯಕ್ಷೆ ಕೆ.ಎಸ್. ಲಕ್ಷ್ಮಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಮೀರಾ ಅವರು ಸ್ವಾಗತ

'ಎಲ್ಲಾ ಮತಾಂಧರಿಂದಲೂ ಮಹಿಳೆಯರ ಧ್ವನಿ ದಮನ'

ಉಡುಪಿ ಅಷ್ಟಮಠಗಳಲ್ಲಿ ಮಹಿಳೆಯರಿಗೆ ದನಿ ಇಲ್ಲ. ಮಹಿಳೆಯರ ವಿಚಾರದಲ್ಲಿ ಮನುಸ್ಮೃತಿ, ಅಸಮಾನತೆಯನ್ನು ಹೇರಿದೆ ಎಂದು ಲಂಕೇಶ ಪತ್ರಿಕೆಯ ಸಂಪಾದಕರಾದ ಗೌರಿ ಲಂಕೇಶ್ ಹೇಳಿದರು. ಅವರು 'ಕೋಮುವಾದ-ಮಹಿಳೆ' ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡುತ್ತಿದ್ದರು. ಅಫಘಾನಿಸ್ತಾನದ ತಾಲಿಬಾನ್ ಮಹಿಳೆಯರು ತೊಂದರೆಗೊಳಗಾದರೂ ನಮ್ಮಲ್ಲಿಯೂ ಅಂತಹ ಬೆಳವಣಿಗೆ ಇದೆ. ಬಾಂಗ್ಲಾ ದೇಶದಲ್ಲಿ ಹಿಂದೂ ಮಹಿಳೆಯರ ಮೇಲೆ ಅತ್ಯಾಚಾರಗಳು ದಬ್ಬಾಳಿಕೆಗಳು ನಡೆದಿವೆ. ನಮ್ಮ ದೇಶದಲ್ಲಿ ಮಧ್ಯಪ್ರದೇಶದಲ್ಲಿ ಜಬುವಾದಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಯಿತು. ಅಡ್ವಾಣಿಯವರು ಅತ್ಯಾಚಾರ ನಡೆಸಿದವರು ಹಿಂದೂಗಳಲ್ಲ ಎಂದರು. ಆದರೆ ಈ ಪ್ರಕರಣದಲ್ಲಿ ಪಾಲ್ಗೊಂಡವರಲ್ಲಿ 24 ರಲ್ಲಿ 12 ಮಂದಿ ಹಿಂದುಗಳು ಮತ್ತು ಭಜರಂಗ ದಳಕ್ಕೆ ಸೇರಿದವರಾಗಿದ್ದಾರೆ. ಕೋಮುಗಲಭೆ ಎಲ್ಲೇ ನಡೆಯಲಿ ಮಹಿಳೆಯರು ಅತ್ಯಾಚಾರಕ್ಕೆ ಗುರಿಯಾಗುತ್ತಾರೆ. ಆದರೆ ಲೂಟಿ, ದೊಂಬಿಯ ವರದಿಗಳು ಮಾತ್ರ ಪ್ರಕಟವಾಗುತ್ತವೆ. ಅತ್ಯಾಚಾರವನ್ನು ಮುಚ್ಚಿಹಾಕಲಾಗುತ್ತದೆ.

ಇತ್ತೀಚೆಗೆ ರಾಜ್ಯದಲ್ಲಿ ಸ್ವತಃ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಬಾಲ್ಯವಿವಾಹ ನಡೆಯಿತು ಎಂದು ಅವರು ವಿಷಾಧಿಸಿದರು.

ಜಿ.ಕೆ.ಗೋವಿಂದರಾವ್ ಅವರು ವಿಚಾರಸಂಕಿರಣದಲ್ಲಿ ವಿಷಯ ಮಂಡಿಸಿದರು. ಮಹಿಳೆಯರ ಆತ್ಮಾಭಿಮಾನ, ಆತ್ಮಗೌರವಕ್ಕೆ ಧಕ್ಕೆ ತರುವಂತಹ ಕೆಲಸಗಳು ನಮ್ಮ ಸಮಾಜದಲ್ಲಿ ಅವ್ಯಾಹತವಾಗಿ ನಡೆದಿವೆ. ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ಭಯೋತ್ಪಾದನೆ- ಕೊಲ್ಲುವುದು, ನಾಶ ಮಾಡುವುದು ನಡೆದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ದಲಿತರು ಮತ್ತು ಮಹಿಳೆಯರ ಮೇಲೆ ಈಗ

ವಿಚಾರಸಂಕಿರಣದಲ್ಲಿ ಗೌರಿ ಲಂಕೇಶ್

ಅಲ್ಪಸಂಖ್ಯಾತರ ಮೇಲೂ ಅವು ನಡೆಯುತ್ತಿವೆ. ಗಾಂಧಿಯನ್ನು ಗುಂಡು ಹಾಕಿ ಕೊಂದದ್ದು , ಬುದ್ಧನನ್ನು ದೇಶದಿಂದ ಉಚ್ಚಾಟನೆ ಮಾಡುವುದು, ಬಸವಣ್ಣನಿಗೆ ಮಠವನ್ನು ಕಟ್ಟಿರುವುದು ಇವು ರಾಷ್ಟ್ರದ ಮೂರು ಘೋರ ದುರುಂತಗಳು. ಹಿಂದೂ ಮತಾಂಧ ಗೋಲ್ವಾಲ್ಕರ್‌ಗೆ ಸ್ವಾತಂತ್ರ್ಯ ಪರಿಕಲ್ಪನೆ ಹೊಳೆಯಲಿಲ್ಲ. ಕೋಮುವಾದಿಗಳಿಗೆ ಶೈಕ್ಷಣಿಕ ಆರ್ಥಿಕ-ಸಾಮಾಜಿಕ ಕಾರ್ಯಕ್ರಮ ಬರುವುದಿಲ್ಲ. ವ್ಯವಸ್ಥಿತ ಧರ್ಮಕ್ಕೆ ಕೋಮುವಾದಿಗಳಿಗೆ ಸ್ವಾತಂತ್ರ್ಯ-ಸಮಾನತೆ ಎಂದರೆ ದುಃಸ್ವಪ್ನದಂತೆ ಎಂದು ಅವರು ವಿವರಿಸಿದರು.

ನಮ್ಮ ಸಮಾಜದಲ್ಲಿ ಬ್ರಾಹ್ಮಣರಾದವರು, ಹಿಂದುಗಳಾದವರು, ಪುರುಷರಾದವರು, ಬೇಷರತ್ತಾಗಿ ನಮ್ಮ ದೋಷಗಳನ್ನು ತಿದ್ದಿಕೊಳ್ಳುವುದಕ್ಕೆ ತಯಾರಾಗಬೇಕು. ನಮ್ಮ ಮನೆಯ ಕಸ ತೆಗೆಯುವುದು, ಬೇರೆಯವರು ಅವರವರ ಮನೆಯ ಕಸ ತೆಗೆದುಕೊಳ್ಳುವುದನ್ನು ಅವಲಂಬಿಸಬೇಕಾಗಿಲ್ಲ. ಅದೇ ರೀತಿ ನಾವು ಬೇಷರತ್ತಾಗಿ ಜಾತ್ಯಾತೀತರಾಗಬೇಕು. (ಕೋಮುವಾದಿ ವಿರೋಧಿಗಳಾಗಬೇಕು) ಭಗವದ್‌ಗೀತೆ ಅಂತಿಮ ಅಲ್ಲ. ಬಾಬರಿ ಮಸೀದಿ ಧ್ವಂಸವನ್ನು ರಾಷ್ಟ್ರೀಯ

ಪುಟ 10 ಕ್ಕೆ



ಕೇರಳದ ಶಿಕ್ಷಕರು-ಸರ್ಕಾರಿ ನೌಕರರು ರಣಾಂಗಣದಲ್ಲೀಗ. ಹಿಂದೆ ಇ.ಕೆ.ನಾಯನಾರ್‌ರವರ ಎಲ್‌ಡಿಎಫ್ ಸರ್ಕಾರವಿರುವಾಗ ವಿರೋಧ ಪಕ್ಷದ ನಾಯಕರಾಗಿದ್ದ ಎ.ಕೆ.ಆಂಟೋಣಿ 'ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರದ ನೌಕರರ ಸಂಬಳ, ಸೌಲಭ್ಯ ಸಿಗಬೇಕೆಂದು ವಾದಿಸಿದ್ದರು. ಆದರೀಗ ಮುಖ್ಯಮಂತ್ರಿಯಾಗಿರುವ ಅವರು ಸಂಬಳ, ಸೌಲಭ್ಯ ಹಾಗೂ ಉದ್ಯೋಗಗಳ ತೀವ್ರ ಕಡಿತಕ್ಕೆ 'ಟೊಂಕಕಟ್ಟಿ' ನಿಂತುಬಿಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರದ ಈ ಕ್ರಮಗಳು ವಿಶ್ವಬ್ಯಾಂಕಿನ ಆಣತಿಯ ಪಾಲನೆಯಷ್ಟೇ. ಕರ್ನಾಟಕದಲ್ಲಿಯೂ ಹಾರ್ನಳ್ಳಿ ರಾಮಸ್ವಾಮಿಯ ಕ್ರೂರ ಶಿಫಾರಸುಗಳ ವರದಿ ಜಾರಿಗಾಗಿ ಸಿದ್ಧಗೊಂಡಿರುವಾಗ ರಾಜ್ಯದ ಹಾಗೂ ಇತರೆ ಸರ್ಕಾರಿ ನೌಕರರ ಹೋರಾಟದತ್ತ ನೋಟ ಇಲ್ಲಿ.



ಕೇರಳ

ಸಮರಕ್ಕಿಳಿದಿರುವ ಸರ್ಕಾರಿ ನೌಕರರು

ಕೇರಳದಲ್ಲಿ 5 ಲಕ್ಷ ಸರ್ಕಾರಿ ನೌಕರರು ಕಳೆದ ಫೆ. 5ರ ಮಧ್ಯರಾತ್ರಿಯಿಂದ ಮುಷ್ಕರ ದಲ್ಲಿದ್ದಾರೆ. ಮುಷ್ಕರದಲ್ಲಿ ಸರ್ಕಾರದ ನೇತೃತ್ವದಲ್ಲಿರುವ ಹಾಗೂ ವಿರೋಧ ಪಕ್ಷದ ನೇತೃತ್ವದಲ್ಲಿರುವ ಎಲ್ಲಾ ಸರ್ಕಾರಿ ನೌಕರರ ಸಂಘಟನೆಗಳು ಭಾಗವಹಿಸಿವೆ.

ಇತ್ತೀಚೆಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಎ.ಕೆ. ಆಂಟೋನಿ ಸರಕಾರ ರಾಜ್ಯ ಸರ್ಕಾರಿ ನೌಕರರ ಶೇ. 20 ಕಡಿತ ಮಾಡಿದೆ. ಇದಲ್ಲದೆ ಜಾರಿಯಲ್ಲಿರುವ ಅನೇಕ ಸವಲತ್ತು, ಸೌಲಭ್ಯಗಳನ್ನು ಹಿಂತೆಗೆದುಕೊಂಡಿದೆ. ಇಂತಹ ತೀರ್ಮಾನ ತೆಗೆದುಕೊಳ್ಳಲು ಸಚಿವ ಸಂಪುಟ ಸಭೆ ಸೇರಿದ ದಿನದಂದೇ ಈ ವಿಷಯ ನೌಕರರಿಗೆ ತಿಳಿದು, ಸಾವಿರಾರು ನೌಕರರು ವಿಧಾನ ಸಭಾ ಚಲೋ ನಡೆಸಿದರು. ಈ ಹೋರಾಟ ನೋಡಿ ಸಚಿವರು ಹಾಗೂ ಕಾರ್ಯದರ್ಶಿಗಳು ಸಭಾನಿಲಯದ ಹಿಂದಿನ ಬಾಗಿಲಿನಿಂದ ಓಡಿಹೋದರು.

ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರದ ಆಡಳಿತದಿಂದ ಸರ್ಕಾರಿ ಖಜಾನೆ ಬರಿದಾಗಿದೆ ಎಂಬ ಸುಳ್ಳು ಕಾರಣ ಹೇಳಿ ಜನರನ್ನು ಎಡ ರಂಗದ ವಿರುದ್ಧ ತಿರುಗಿಸುವ ಯತ್ನವನ್ನು ಆಡಳಿತ ಸರ್ಕಾರ ನಡೆಸಿದೆ. ಮುಷ್ಕರದಲ್ಲಿ ಗಡಿ ಪ್ರದೇಶದ ತಪಾಸಣಾ ಠಾಣೆಗಳ ನೌಕರರು, ಸರ್ಕಾರಿ ಮುದ್ರಣಾಲಯ ನೌಕರರು, ಗ್ರಾಮ ಲೆಕ್ಕಿಗರ ಕಛೇರಿಯಿಂದ ಹಿಡಿದು ಸಚಿವಾಲಯದ ನೌಕರರು, ಎಲ್ಲಾ ಸರ್ಕಾರಿ ಶಾಲಾ ಕಾಲೇಜು ಅಧ್ಯಾಪಕರು ಸಂಘಟನಾ ವ್ಯತ್ಯಾಸವಿಲ್ಲದೆ ಮುಷ್ಕರಕ್ಕೆ ಇಳಿದಿದ್ದಾರೆ. ಮುಷ್ಕರವನ್ನು ಮುರಿಯಲು ತುರ್ತುಪರಿಸ್ಥಿತಿಯ ಸಮಯದಂತೆ ಕರ್ನಾಟಕ ತಮಿಳುನಾಡು ಹಾಗೂ ಕೇಂದ್ರ ಮೀಸಲು ಪಡೆಯ ಪೊಲೀಸರನ್ನು ಇಳಿಸಿದ್ದಾರೆ. ಮುಖ್ಯಮಂತ್ರಿ ಎ.ಕೆ. ಆಂಟೊನಿ, ಪೊಲೀಸ್ ಮಹಾ ನಿರ್ದೇಶಕ ಕೆ.ಜೆ. ಜೋಸಫ್, ಗುಪ್ತ ದಳದ ಮಹಾ ನಿರ್ದೇಶಕ ತರಗನ್ ಇವರು ಒಟ್ಟಾಗಿ ಪೊಲೀಸರ ಮೂಲಕ ನೌಕರರ ಹೋರಾಟ ಮುರಿಯಲು ಮುಂದಾಗಿದ್ದಾರೆ. ಅಗತ್ಯ ಸೇವೆಗಳ ಕಾಯಿದೆ (esma) ಮೂಲಕ ಅನೇಕ ನೌಕರರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ಪೊಲಿಸ್ ಮಹಾನಿರ್ದೇಶಕರಂತೂ ಈ ಚಳುವಳಿಗಾರರಿಗೆ ಬುದ್ಧಿ ಕಲಿಸಿ ಎಂದು ಬಹಿರಂಗವಾಗಿ ಹೇಳಿಕೆ ನೀಡಿ, ಮುಷ್ಕರ ವಿರೋಧಿ ಶಾಹಿಗೆ ಬಂಬಲಿಸುತ್ತಿದ್ದಾರೆ. ಈತ ಅಧಿಕಾರಿಯಲ್ಲ ಕಾಂಗ್ರೆಸ್‌ನ ಕೂಲಿಯಾಳು ರಾಜಕಾರಣಿಯೆ? ಮುಷ್ಕರ ಮುರಿಯಲು ಯುವಕಾಂಗ್ರೆಸ್‌ನ ಪುಂಡರನ್ನು ಬಳಸಿ ಈ ಮುಷ್ಕರ ಜನ ವಿರೋಧಿ ಎಂದು ಪ್ರಚಾರ ನಡೆಸಿ ಮುಷ್ಕರ, ಮೆರವಣಿಗೆನಿರತ ನೌಕರರ ಮೇಲೆ ಹಲ್ಲೆ ನಡೆಸಿದ್ದಾರೆ.

ಕಡಿತ ಮಾಡುವುದು ಈ ಎಲ್ಲಾ ಉದ್ದೇಶ ಸರ್ಕಾರದ ಕ್ರಮಗಳ ಹಿಂದೆ ಅಡಗಿದೆ. ಆಸ್ಪತ್ರೆ, ಮೃಗಾಲಯದ ಸಿಬ್ಬಂದಿ, ವಿದ್ಯುಚ್ಛಕ್ತಿ, ನೀರು ಸರಬರಾಜು ನೌಕರರು ಅಗತ್ಯ ಸೇವೆಗಳ ಪರಿಪಾಲನೆ ದೃಷ್ಟಿಯಿಂದ ಮುಷ್ಕರದಿಂದ ವಿನಾಯ್ತಿ ಪಡೆದಿರುತ್ತಾರೆ.

ಸಂಧಾನದ ಮೂಲಕ ಮುಷ್ಕರ ಬಗೆಹರಿಸಬೇಕೆಂದು ಕೇರಳ ಬುದ್ಧಿಜೀವಿಗಳು, ಕಾನೂನು ತಜ್ಞರು ಹಾಗೂ ರಾಜಕೀಯ ಪಕ್ಷಗಳು, ಅಲ್ಲದೇ ಹಿರಿಯ ಕಾಂಗ್ರೆಸ್ ಮುಖಂಡ, ಮಾಜಿ ಮುಖ್ಯಮಂತ್ರಿ ಕೆ. ಕರುಣಾಕರನ್ ಸರ್ಕಾರವನ್ನು ವಿನಂತಿಸಿದ್ದಾರೆ. ಆದರೆ ಸರ್ಕಾರ ಯಾವ ಸಂಧಾನಕ್ಕೂ ತಯಾರಾಗುತ್ತಿಲ್ಲ. ಸರ್ಕಾರದ ಹಠಮಾರಿ ಧೋರಣೆಯಿಂದ ಮಾರ್ಚ್‌ನಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರಿಕ್ಷೆಗೆ ತೊಂದರೆಯಾಗುತ್ತಿದೆ. ಮುಷ್ಕರವನ್ನು ಪೊಲೀಸ್ ಬಲ ಪ್ರಯೋಗ, ಎಸ್ಮಾ ಕಾಯಿದೆ ಬಳಸಿ ದಮನಮಾಡುವ ನೀತಿಯನ್ನು ಕೂಡಲೇ ಕೈಬಿಡಬೇಕೆಂದು ಹಾಗೂ ನೌಕರರ ಜೊತೆ ಸೌಹಾರ್ದ ಮಾತುಕತೆ ಮೂಲಕ ಪರಿಹಾರ ಕಾಣಬೇಕೆಂದು ಸಿಪಿಐ(ಎಂ) ಸರ್ಕಾರವನ್ನು ಆಗ್ರಹಿಸಿದೆ. ಪೊಲೀಸ್ ಮಹಾ ನಿರ್ದೇಶಕರ ಮೂಲಕ ಮುಷ್ಕರ ನಿರತ ನೌಕರರ ಮೇಲೆ ESMA ಕರಾಳ ಕಾಯಿದೆ ಬಳಸಿ ಮುಷ್ಕರ ಮುರಿಯಲು ಸರ್ಕಾರ ಮುಂದಾದರೆ ಕೇರಳದ ಪ್ರಬುದ್ಧ ಜನತೆ ಸುಮ್ಮನೆ ಮೂಕ ಪ್ರೇಕ್ಷಕರಾಗಿ ಕುಳಿತಿರುವುದಿಲ್ಲವೆಂದು ಸಿಪಿಐ(ಎಂ) ಕೇರಳ ರಾಜ್ಯಕಾರ್ಯದರ್ಶಿ ಹಾಗೂ ಪಾಲಿಟ್ ಬ್ಯೂರೋ ಸದಸ್ಯ ಕಾಂ। ಪಿ. ಪಿನರಾಯನ್ ವಿಜಯನ್ ಸರ್ಕಾರವನ್ನು ಎಚ್ಚರಿಸಿದ್ದಾರೆ. ಈ ರೀತಿಯ ಕರಾಳ ಕಾಯಿದೆಗಳನ್ನು ಹಲವಾರು ಬಾರಿ ಕಂಡಿರುವ ಸಂಘಟಿತ ಕಾರ್ಮಿಕ ವರ್ಗ ಕೈಕಟ್ಟಿ ಕುಳಿತಿರುವುದಿಲ್ಲ, ಹೋರಾಟದಲ್ಲಿರುವ ನೌಕರರಿಗೆ ಎಲ್ಲಾ ರೀತಿಯ ಸಹಾಯ, ಸೌಹಾರ್ದತೆ ನೀಡಲು ಸಿಐಟಿಯು ಮುಂದಾಗಿದೆ. ಸರ್ಕಾರಿ ನೌಕರರ ಮುಷ್ಕರವನ್ನು ಕೂಡಲೇ ಮಾತುಕತೆ ಮೂಲಕ ಬಗೆಹರಿಸಬೇಕೆಂದು ಸಿಐಟಿಯು ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ESMA ತರಹದ ಕರಾಳ ಕಾನೂನು, ಜೈಲಿನ ಗೋಡೆಗಳು, ಪೊಲಿಸರ ಅತಿರೇಕವನ್ನು ಎದುರಿಸಿ ಬೆಳೆದು ಬಂದಿರುವ ಕಾರ್ಮಿಕ, ನೌಕರರ ಚಳುವಳಿಯನ್ನು ಮುರಿಯಲು ಹೊರಟರೆ ಅದು ಸರ್ಕಾರಕ್ಕೆ ಒಳ್ಳೆಯದಲ್ಲ ಎಂದು ಕಾರ್ಮಿಕ ಮುಖಂಡರು ತಿರುವನಂತಪುರದಲ್ಲಿ ಘೋಷಿಸಿದ್ದಾರೆ.

ಇ.ಕೆ.ಎನ್.ರಾಜನ್

ಕೇರಳ ರಾಜ್ಯ ಸರ್ಕಾರ ಎಂ.ಆರ್.ಎಫ್. ತರಹದ ದೊಡ್ಡ ಬಂಡವಾಳಗಾರರಿಗೆ ನೂರಾರು ಕೋಟಿ ರೂಪಾಯಿ ತೆರಿಗೆ ವಿನಾಯಿತಿ ನೀಡಿದ್ದು ದೊಡ್ಡ ಭೂ ಮಾಲಿಕರಿಂದ ತೆರಿಗೆ ವಸೂಲಿ ನಿಲ್ಲಿಸಿದೆ. ಇವುಗಳ ಬದಲು ಸರ್ಕಾರ ರಾಜ್ಯ ಸರ್ಕಾರಿ ನೌಕರರ ಸಂಬಳ, ಸೌಲಭ್ಯ ಕಡಿತ ಮಾಡುವುದು ಸರಿಯಲ್ಲ ಎಂದು ಸಿಐಟಿಯು ಎಚ್ಚರಿಸಿದೆ.

ಯುವ ಕಾಂಗ್ರೆಸ್ ಗೂಂಡಾ ಪಡೆಗಳ ಮೂಲಕ ಹೋರಾಟ ಮುರಿಯಲು ಹೊರಟರೆ ಕೇರಳದ ಯುವಜನರು ಮೂಕ ಪ್ರೇಕ್ಷಕರಾಗುವದಿಲ್ಲ ಎಂದು ಡಿವೈಎಫ್‌ಐ ಎಚ್ಚರಿಕೆ ನೀಡಿದೆ. ಮುಷ್ಕರದಲ್ಲಿ ಇರುವ ನೌಕರರ ಜೊತೆ ಶಾಂತಿಯುತ ಮಾತುಕತೆಗೆ ಮುಂದಾಗಿ, ಸಮಸ್ಯೆ ಬಗೆಹರಿಸಿ ಸಾಮಾನ್ಯ ಜನರಿಗಾಗುತ್ತಿರುವ ತೊಂದರೆ ನಿವಾರಿಸಬೇಕೆಂದು ಡಿವೈಎಫ್‌ಐ ಆಗ್ರಹಿಸಿದೆ. ಈಗಾಗಲೇ ಪೊಲೀಸರು ಮುಷ್ಕರದ ನೇತೃತ್ವದ ಹಲವಾರು ಮುಖಂಡರನ್ನು esma ಬಳಸಿ ಜೈಲಿಗೆ ಹಾಕಿದ್ದಾರೆ.

ಹೋರಾಟ ನಿರತ ನೌಕರರು, ಎಲ್ಲಾ ಸಂಘಟನೆಗಳು ಒಂದಾಗಿ ಹೋರಾಟ ಸಮಿತಿ ರಚಿಸಿವೆ, ಜಿಲ್ಲಾ , ತಾಲೂಕು, ಪಂಚಾಯತ್ ಮಟ್ಟದಲ್ಲಿ ಸಾಮಾನ್ಯ ಜನರ ಬೆಂಬಲದೊಂದಿಗೆ ಸಮಿತಿಗಳನ್ನು ರಚಿಸಲಾಗಿದೆ. ಎಲ್ಲಾ ಕಾರ್ಮಿಕ ಸಂಘಗಳು ಈ ಹೋರಾಟವನ್ನು ಬೆಂಬಲಿಸಿ ರಾಜ್ಯದಾದ್ಯಂತ ಹರತಾಳಕ್ಕೆ ಸಜ್ಜಾಗುತ್ತಿದ್ದಾರೆ. ಸರ್ಕಾರದ ಎಲ್ಲಾ ಬೆದರಿಕೆಗಳನ್ನು ಧೈರ್ಯದಿಂದ ಎದುರಿಸಲು ನೌಕರರು ಸಿದ್ಧರಾಗಿದ್ದಾರೆ.

ಕೇರಳದ ಶಿಕ್ಷಕರು ಸರ್ಕಾರಿ ನೌಕರರು ಈಗ ಸಮರಾಂಗಣದಲ್ಲಿದ್ದಾರೆ. ಎ.ಕೆ. ಆಂಟೊನಿ ಸರ್ಕಾರ ಸರ್ಕಾರಿ ನೌಕರರ ಉದ್ಯೋಗಕ್ಕೆ ಸಂಚಕಾರ ತಂದಿದೆ. ಹಲವು ದಶಕಗಳ ತ್ಯಾಗಮಯಿ ಹೋರಾಟ ಮಾಡಿ ಗಳಿಸಿದ ಸೌಲಭ್ಯಗಳನ್ನು ಕಿತ್ತುಕೊಳ್ಳಲು ಮುಂದಾಗಿದೆ. ಇದು ವಿಶ್ವಬ್ಯಾಂಕ್, ಐಎಂಎಫ್ ಸರ್ಕಾರವನ್ನು ಕಿರಿದುಗೊಳಿಸಿ ಎಂಬ ಫರ್ಮಾನಿನ ಜಾರಿ, ಅದಕ್ಕಾಗಿಯೇ ESMA ದಂತಹ ಕರಾಳ ಕಾನೂನು ಬಳಸಿ, ದಮನಿಸಲು ನಾಗರೀಕರನ್ನು ಎತ್ತಿಕಟ್ಟಲು ಹೊರಟಿದ್ದಾರೆ. ಆದರೆ ನೌಕರರು ದೃತಿಗೆಡದೇ ಸಮರಧೀರ ಹೋರಾಟ ಮುಂದುವರಿಸುತ್ತಾರೆ ನೆನಪಿರಲಿ. ಕರ್ನಾಟಕದ ಕೃಷ್ಣ ಸರ್ಕಾರವೂ ಹಾರ್ನಳ್ಳಿ ರಾಮಸ್ವಾಮಿ ವರದಿಯನ್ನು ಇಟ್ಟುಕೊಂಡು ಅದರ ಜಾರಿಗೆ ಕಾಯುತ್ತಿದೆ. ಕೇರಳದ ನೌಕರರ ಹೋರಾಟ ದೇಶದ ಎಲ್ಲಾ ಕಡೆಗೂ ಸ್ಫೂರ್ತಿದಾಯಕ ಸಂದೇಶ .

○

ಗಳಿಸಿದ ಹಕ್ಕುಗಳನ್ನು ಉಳಿಸುವ ಹೋರಾಟ

ಸರಕಾರೀ ನೌಕರರು ಮತ್ತು ಶಿಕ್ಷಕರ ಹೋರಾಟದಲ್ಲಿ ಕೇರಳಕ್ಕೆ ವಿಶಿಷ್ಟವಾದ ಸ್ಥಾನವಿದೆ. ಹಲವಾರು ವರ್ಷಗಳಿಂದ ಧೀಮಂತ ಹೋರಾಟ ನಡೆಸಿದ ಇಲ್ಲಿನ ನೌಕರರು ತಮ್ಮ ತ್ಯಾಗ ಬಲಿದಾನದ ಮೂಲಕ ವಿವಿಧ ಸವಲತ್ತುಗಳನ್ನು ಪಡೆದಿದ್ದಾರೆ.

ಈಗ ಅಧಿಕಾರದಲ್ಲಿರುವ ಅಂತೋಣಿ ಸರಕಾರ, ನೌಕರರು ಹೋರಾಟ ಮಾಡಿ ಗಳಿಸಿದ ಹಕ್ಕುಗಳನ್ನು ಕಿತ್ತುಕೊಳ್ಳಲು ಹೊಂಚು ಹಾಕುತ್ತಿದೆ. ಆದ್ದರಿಂದಲೇ ಎಸ್ಮಾದಂತಹ ಕರಾಳ ಕಾನೂನನ್ನು ಎದುರಿಸಿ, ಅಲ್ಲಿನ ನೌಕರರು ಸತತ ಮುಷ್ಕರ ನಡೆಸುತ್ತಿದ್ದಾರೆ.

ಬೇಡಿಕೆಗಳು

- *'ಲಾಭದಾಯಕವಲ್ಲದ ಶಾಲೆಗಳು' ಎಂಬ ಹೆಸರಿನಲ್ಲಿ 2000 ಶಾಲೆಗಳ ಮುಚ್ಚುವಿಕೆ ವಿರುದ್ಧ*
- *ಹೆಚ್ಚುವರಿ ಎಂದು ಕಾರಣ ನೀಡಿ, ಸರಕಾರಿ ನೌಕರರನ್ನು ಕೆಲಸದಿಂದ ಕಿತ್ತುಹಾಕುವುದು ನಿಲ್ಲಬೇಕು.*
- *ರಜಾ ದಿನಗಳ ವೇತನ ರದ್ದು ಖಂಡಿಸಿ*
- *ನಿವೃತ್ತಿವೇತನದಲ್ಲಿ ಕಡಿತ ಮತ್ತು ಹೊಸತಾಗಿ ನೇಮಕಗೊಂಡವರಿಗೆ ನಿವೃತ್ತಿವೇತನ ಸೌಲಭ್ಯ*
- *ಪ್ರತಿತಿಂಗಳೂ 1 ನೇ ತಾರೀಖಿಗೆ ನೀಡಬೇಕಾದ ವೇತನವನ್ನು 15ನೇ ತಾರೀಕಿನ ನಂತರ ನೀಡುವುದು*
- *ಸರಕಾರಿ ಮತ್ತು ಶಿಕ್ಷಕ ಸೇವೆಗಳಲ್ಲಿ ಖಾಯಂ ಹುದ್ದೆಗಳಿಗೆ ತಡೆ*

ಇವುಗಳ ವಿರುದ್ಧ 5 ಲಕ್ಷಕ್ಕೂ ಹೆಚ್ಚು ಶಿಕ್ಷಕರು, ಸರಕಾರಿ ನೌಕರರು ಮುಷ್ಕರ ನಡೆಸುತ್ತಿದ್ದಾರೆ. ಅಧಿಕಾರರೂಢ ಕಾಂಗ್ರೆಸ್ಸಿನ ಬೆಂಬಲಿಗ ಸಂಘಟನೆಯೂ ಮುಷ್ಕರದಲ್ಲಿ ಭಾಗವಹಿಸುತ್ತಿದೆ. ಈ ವರದಿ ಮುದ್ರಣಕ್ಕೆ ಹೋಗುವ ಹೊತ್ತಿನಲ್ಲಿ ಸತತ 7 ದಿನ ಮುಷ್ಕರ ನಡೆದಿದ್ದು 20 ಕ್ಕೂ ಹೆಚ್ಚು ನೌಕರರ ಮುಖಂಡರು, ಕಾರ್ಯಕರ್ತರನ್ನು ಎಸ್ಮಾ ಅಡಿಯಲ್ಲಿ ಬಂಧಿಸಲಾಗಿದೆ.

ವಿರೋಧ ಪಕ್ಷದಲ್ಲಿರುವಾಗ ಕೇಂದ್ರ ಸರಕಾರೀ ನೌಕರರಿಗೆ ನೀಡುವ ವೇತನ ನೀಡಬೇಕೆಂದು ಒತ್ತಾಯಿಸುತ್ತಿದ್ದ ಇಂದಿನ ಮುಖ್ಯಮಂತ್ರಿ ಅಂತೋಣಿ ಈಗಿರುವ ಸೌಲಭ್ಯಗಳನ್ನೇ ಕಿತ್ತುಕೊಳ್ಳುತ್ತಿದ್ದಾರೆ. ಎಸ್ಮಾ ಕಾನೂನು ಬಳಸಿದ್ದು ಮಾತ್ರವಲ್ಲದೆ ವಿವಿಧ ರೀತಿಯ ಬೆದರಿಕೆಗಳನ್ನು ಒಡ್ಡಲಾಗುತ್ತಿದೆ. ಅಧಿಕಾರದ ಗದ್ದುಗೆಗ ಏರಿದ ಎಂಟು ತಿಂಗಳಲ್ಲೇ ಬದಲಾವಣೆಯಾದ ಬೊಗಳೆ ಬಿಡುತ್ತಿದ್ದಾರೆ ಕೇರಳದ ಮುಖ್ಯಮಂತ್ರಿ ಎ.ಕೆ.ಅಂತೋಣಿ. ಹಿಂದಿನ ಸರ್ಕಾರದ ಮೇಲೆ ದೂರನ್ನು ಹೊರಿಸುತ್ತಿದ್ದಾರೆ. 7000 ಕೋಟಿ ರೂ. ಖಜಾನೆಯಲ್ಲಿ ಇದೆ ಎಂದು ವಿರೋಧ ಪಕ್ಷದ ನಾಯಕ ಅಚ್ಯುತಾನಂದನ್ ಅಂಕಿ ಅಂಶಗಳ ಆಧಾರದೊಂದಿಗೆ ತಿಳಿಸಿದ್ದಾರೆ. ಆದರೂ ಕೂಡ ರೈತರು ಮತ್ತು ಕಾರ್ಮಿಕರು ಹಾಗೂ ಸರಕಾರೀ ನೌಕರರು, ಶಿಕ್ಷಕರ ನಡುವೆ ಬೇಧ ಹುಟ್ಟು ಹಾಕಲು ಸುದೀರ್ಘ ಪ್ರಯತ್ನ ನಡೆದಿದೆ. ಹಣವಿಲ್ಲವೆಂದು ಅಣಕಿಸುವ ಅಂತೋಣಿ ದೊಡ್ಡ ಉದ್ಯಮದಾರರಿಗೆ ರಿಯಾಯಿತಿ ನೀಡಿದ್ದಾರೆ.

ಹಾಗಾದರೆ ಬೊಕ್ಕಸದಲ್ಲಿ ಹಣವಿಲ್ಲ ಎಂದು ಬೊಬ್ಬೆ ಹೊಡೆಯುವ ಅಗತ್ಯವಾದರೂ ಏನು? ಸಂಘಟಿತ ಸರ್ಕಾರೀ ನೌಕರರು ಮತ್ತು ಶಿಕ್ಷಕರ ಮೇಲೆ ಇಷ್ಟೊಂದು ದಬ್ಬಾಳಿಕೆ ಏಕೆ? ಜಾಗತಿಕ ಹಣಕಾಸು ಬಂಡವಾಳದ ತಾಳಕ್ಕೆ ತಕ್ಕಂತೆ ಕುಣಿಯುವ ಅಂತೋಣಿ ನೇತೃತ್ವದ ಕೇರಳದ ಕಾಂಗ್ರೆಸ್ ಸರಕಾರ, ಸಂಘಟಿತ ನೌಕರರು ಮತ್ತು ಶಿಕ್ಷಕರನ್ನು ಬಗ್ಗು ಬಡಿಯಲು ಹೊರಟಿದೆ. ಅದು

'ಟಯೋಟಾ' ಎಂಬ ರಾಕ್ಷಸನ ದವಡೆಯಲಿ

ಪುಟ 7 ರಿಂದ

ಮೋಸದ ಮಾತಿಗೆ ಬಲಿಯಾದರೆ ಹಲವು ಪೋಷಕರು ಮಾಲೀಕರ ವಿರುದ್ಧ ತಿರುಗಿ ಬಿದ್ದರು. ತಮ್ಮ ಮಕ್ಕಳು ದಿನನಿತ್ಯ ಅನುಭವಿಸುತ್ತಿರುವ ನೋವು ಸಂಕಟಗಳಲ್ಲಿ ಹಗಲ್ಲು ರಾತ್ರಿ ತಾವೂ ಭಾಗಿಯಾಗಿದ್ದರು. ತಮ್ಮ ಮುದ್ದಿನ ಮಕ್ಕಳ ಬಗ್ಗೆ ಕಂಡಿದ್ದ ಕನಸನ್ನು ಈ ಕಂಪೆನಿ ಹಾಳು ಮಾಡಿತ್ತು. ನಿಮ್ಮ ಮಾತಿಗೆ ನಾವು ಮರುಳಾಗುವುದಿಲ್ಲ. ನಮ್ಮ ಮಗನಿಗೆ ಕೆಲಸವಿಲ್ಲದಿದ್ದರೂ ಚಿಂತೆಯಿಲ್ಲ ಮತ್ತದೇ ನರಕಕ್ಕೆ ನಾವು ತಳ್ಳಲಾರೆವು ಎಂದು ಮಾರುತ್ತರ ನೀಡಿದರು. ಶೇ. 15 ರಷ್ಟು ಅಂದರೆ 150 ರಿಂದ 200 ಕಾರ್ಮಿಕರನ್ನು ಮಾತ್ರ ಸೆಳೆಯಲು



ನಿಂತು ಕೆಲಸ ಮಾಡುವಾಗ ಕಾಲುನೋವು ತಡೆಯಲಾರದೆ ಪಟ್ಟಿ ಕಟ್ಟಿಕೊಂಡಿರುವ ಕಾರ್ಮಿಕ

ಮಾಲೀಕನಿಗೆ ಸಾಧ್ಯವಾಯಿತು.

10 ಗಂಟೆ ದುಡಿಮೆ 2 ಗಂಟೆ ಪ್ರಯಾಣ

ಬೆಳಿಗ್ಗೆ 7 ಗಂಟೆಗೆ ಮನೆ ಬಿಟ್ಟರೆ ಮತ್ತೆ ಮನೆಗೆ ಬರುವುದು ರಾತ್ರಿ 7 ಗಂಟೆಗೆ. ರಾತ್ರಿ ಪಾಳಿಯಾ ಕಾರ್ಮಿಕರ ಸ್ಥಿತಿ ಬೇರೆಯೇನಲ್ಲ 2 ಗಂಟೆಗಳ ಪ್ರಯಾಣ 10 ಗಂಟೆಗಳ ದುಡಿಮೆ ಒಟ್ಟು ದಿನದಲ್ಲಿ 12 ಗಂಟೆಗಳ ಶ್ರಮ. ಬೆಳಿಗ್ಗೆ 8.15 ಕ್ಕೆ ಕಾರ್ಖಾನೆ ಒಳ ಪ್ರವೇಶಿಸಿದರೆ 10 ನಿಮಿಷ ಸಭೆ, 5 ನಿಮಿಷ ವ್ಯಾಯಾಮ 8.30ಕ್ಕೆ ಕೆಲಸ ಮಾಡಲು ಶುರುವಿಟ್ಟರೆ 10.30ರವರೆಗೆ 2 ಗಂಟೆಗಳ ಅವಿರತ ದುಡಿಮೆ. ಟೀ ಸಮಯವೆಂದು 10 ನಿಮಿಷ ನಿಗದಿಪಡಿಸಿದ್ದರೂ 8 ನಿಮಿಷಕ್ಕೆ ಮತ್ತೆ ಕೆಲಸಕ್ಕೆ ಹಾಜರಿರಬೇಕು. ಮಲ, ಮೂತ್ರ ವಿಸರ್ಜನೆ ಮಾಡುವುದಿದ್ದರೆ ಆ 8 ನಿಮಿಷದಲ್ಲೆ ಎಲ್ಲಾ ಮುಗಿಸಬೇಕು. ಮತ್ತೆ ನಿಮಗೆ ಎಷ್ಟೇ ತುರ್ತು ಎನಿಸಿದರೂ ಶೌಚಾಲಯಕ್ಕೆ ಹೋಗುವಂತಿಲ್ಲ. ಮತ್ತೆ 2 ಗಂಟೆಗಳ ನಿರಂತರ ದುಡಿಮೆ ಮಧ್ಯಾಹ್ನ 12.30ಕ್ಕೆ 45 ನಿಮಿಷಗಳ ಊಟದ ಸಮಯ. ವಿಶ್ರಾಂತಿಯಂತೂ ಸಾಧ್ಯವೇ ಇಲ್ಲ. 1.15ಕ್ಕೆ ಕೆಲಸ ಪ್ರಾರಂಭಿಸಿದರೆ 3.15ಕ್ಕೆ 8 ನಿಮಿಷ ಟೀ ಸಮಯ. ಸಾಯಂಕಾಲ 5.15ಕ್ಕೆ ಬೆಲ್ ಆದರೂ ಕಾರ್ಮಿಕರು ಹೊರ ಬರುವಂತಿಲ್ಲ. ನಂತರವೇ ಟೂಲ್ಸ್ ಮೆಷಿನ್‌ಗಳನ್ನು ಶುಚಿಗೊಳಿಸಬೇಕು, ಕಸಗುಡಿಸಬೇಕು. ತಾವು ಕೆಲಸ ಮಾಡುತ್ತಿರುವ ಸ್ಥಳದಲ್ಲಿರುವ ಮೋರಿ ಶುಚಿಗೊಳಿಸಬೇಕು. 5.45ಕ್ಕೆ ಬಸ್ ಹತ್ತಬೇಕು. 10 ಗಂಟೆಗಳ ನಿರಂತರ ಕೆಲಸದಿಂದ ನಿತ್ರಾಣರಾಗಿ ಬಸ್ಸಿನಲ್ಲಿ ಕುಳಿತು ಮನೆಗೆ ಬಂದಾಗ ಯಾವುದೇ ಲವಲವಿಕೆ ಇರುವುದಿಲ್ಲ. ಮರುದಿನ ಮತ್ತದೆ ಕೆಲಸ ಅದೇ ನಿತ್ರಾಣ, ಅದೇ

ಓವರ್ ಟೈಮ್ ಮಾಡಲೇಬೇಕು.

2 ವರ್ಷ ತರಬೇತಿ ಒಂದು ವರ್ಷ ಪ್ರೊಬೆಷನರಿ.

ಎಲ್ಲ ಕಾರ್ಮಿಕರೂ ತರಬೇತಿ ಹೊಂದಿದವರೆ. ಐ.ಟಿ.ಐ ಅಥವಾ ಡಿಪ್ಲೊಮಾ ಮಾಡಿರುವಂತಹವರೆ. ಆಡಳಿತ ವರ್ಗ ಆಯ್ಕೆ ಮಾಡಿಕೊಂಡಿರುವುದೂ ಅಂತಹ ಕಾರ್ಮಿಕರನ್ನೆ. ಆದರೂ 2 ವರ್ಷ 2 ತಿಂಗಳೂ ತರಬೇತಿ ನಂತರ ಕಾಯಂ ಗೊಳಿಸುವುದಾಗಿ ಹೇಳುತ್ತಿದೆ. ತರಬೇತಿಗೆ ಯಾವುದೇ ಪಠ್ಯಕ್ರಮವಿಲ್ಲ. ಪರಿಕ್ಷೆಯಂತೂ ಇಲ್ಲವೇ ಇಲ್ಲ. ಹೀಗಾಗಿ ಆಡಳಿತ ವರ್ಗಕ್ಕೆ ಕಾರ್ಮಿಕನನ್ನು ಖಾಯಂ ಗೊಳಿಸುವುದು ಇಷ್ಟವಿಲ್ಲದಿದ್ದರೆ, ಮತ್ತೆರಡು ವರ್ಷ ತರಬೇತಿ ಮಾಡಬೇಕು ಎಂದು ತೀರ್ಮಾನಿಸಿದರೆ ಯಾರೂ ಕೇಳುವಂತಿಲ್ಲ. ಕೆಲಸಕ್ಕೆ ಸೇರಿಸಿಕೊಳ್ಳುವಾಗ 2 ವರ್ಷಗಳ ತರಬೇತಿ, ನಂತರ ಖಾಯಂಗೊಳಿಸುವುದಾಗಿ ಭರವಸೆ ನೀಡಿದ್ದ ಆಡಳಿತ ವರ್ಗ ಎರಡು ವರ್ಷ ಮುಗಿದ ನಂತರ 1 ವರ್ಷ ಪ್ರೊಬೆಷನರಿ ಅವಧಿ ನಂತರ ಖಾಯಂ ಎಂದು ಹೇಳಿತು. ಜುಲೈ ತಿಂಗಳಲ್ಲಿ ಕಾರ್ಮಿಕರು ಇದನ್ನು ಪ್ರತಿಭಟಿಸಿ 6 ದಿನಗಳ ಮುಷ್ಕರ ನಡೆಸಿದಾಗ 2 ವರ್ಷಗಳಿಗೆ ಖಾಯಂಗೊಳಿಸುವುದಾಗಿ ಭರವಸೆ ನೀಡಿತು. ಆದರೂ ಬಹುತೇಕ ಕಾರ್ಮಿಕರ ಕಾಯಂ ಇನ್ನೂ ಆಗಿಲ್ಲ.

ಕೆರಿಗೆ ವಿನಾಯ್ತಿ.

ವಿದೇಶಿ ಕಂಪೆನಿಗಳ ವ್ಯಾಮೋಹ ಹೊಂದಿರುವ ನಮ್ಮ ಸರ್ಕಾರ ಜಪಾನಿನ ಮಾಲೀಕ ಕಾರ್ಖಾನೆ ತೆರೆಯಲು ಮುಂದೆ ಬಂದಾಗ ಬಿಡದಿ ಬಳಿ 420 ಎಕರೆ ಜಮೀನನ್ನು ಅಲ್ಲಿನ ರೈತರಿಂದ ಕಡಿಮೆ ಬೆಲೆಗೆ ಖರೀದಿಸಿ ಈ ಕಂಪೆನಿಗೆ ಕೊಟ್ಟಿತು. ಅವರ ಕುಟುಂಬದ ಮಕ್ಕಳಿಗೆ ಉದ್ಯೋಗ ಕೊಡುವುದಾಗಿ ಭರವಸೆ ನೀಡಿತ್ತು. ಆದರೆ ಆ ಮಕ್ಕಳಿಗೆ ಉದ್ಯೋಗ ಕೊಡುವುದಿರಲಿ ಸ್ವಾಮಿ ನಮ್ಮ ಜಮೀನಿಗೆ ಸರಿಯಾದ ಬೆಲೆ ಕೊಡಲಿಲ್ಲ ಎಂದು ಅಲ್ಲಿನ ಗ್ರಾಮಸ್ಥರು ದೂರುತ್ತಾರೆ.

ಆಲಮಟ್ಟಿ ಆಣೆಕಟ್ಟಿನ ಕರ್ಮಕಾಂಡ..........

ಪುಟ 4 ರಿಂದ

ಗೊಂಡಿತು. ಜಿಲ್ಲೆಯ ತುಂಬ ಎಲ್ಲಾಕಡೆಗಳಿಂದಲೂ ಆಲಮಟ್ಟಿ ಯೋಜನೆಯನ್ನು ಕೈಗೊಳ್ಳಬೇಕೆಂಬ ಕೂಗು ಹೊರಟು ಅದು ದಿಲ್ಲಿಯವರೆಗೆ ಮುಟ್ಟಿ ಕೇಂದ್ರ ನೀರಾವರಿ ಮಂತ್ರಿ ಡಾ. ಕೆ.ಎಲ್.ರಾವ್ ಅವರಿಂದ ಒಂದು ಆಶ್ವಾಸನೆಯನ್ನು ಪಡೆಯಲು ಸಮರ್ಥವಾದುದು ನಿಜವಾಗಿ ಜಾಗೃತ ಜನಬಲದ ದಿಗ್ವಿಜಯವೆಂದೇ ಹೇಳಬಹುದು. ಡಾ. ರಾವ್ ಅವರು ಬಿಜಾಪುರದ ಜಿಲ್ಲೆಯ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿಯೇ ನೀರಾವರಿ ಸೌಕರ್ಯವು ದೊರೆಯುವಂತೆ ನೋಡಿಕೊಳ್ಳುವುದಾಗಿ ಭರವಸೆಯನ್ನು ಕೊಟ್ಟಿರುವರು. ಇದನ್ನುಗಮನಿಸಿ ಸದ್ಯಕ್ಕೆ ಸತ್ಯಾಗ್ರಹ ಶಸ್ತ್ರವನ್ನು ಒರೆಗಣೆಸಲಾಗಿದೆ. ಇದುನಿಜವಾಗಿ ಸ್ವಾಗತಾರ್ಹವಾಗಿದೆ. ಏಕೆಂದರೆ ಸತ್ಯಾಗ್ರಹ ಶಸ್ತ್ರವನ್ನು ಒರೆಯಿಂದ ಹೊರತೆಗೆದಿದ್ದ ಬಿಜಾಪುರ ಜನತೆಯು ಶಿಸ್ತು ಸಂಯಮಗಳನ್ನುಉತ್ತಮ ರೀತಿಯಿಂದ ಪಾಲಿಸಬಲ್ಲದೆಂಬ ಮಾತಿನ ನಿದರ್ಶನ ಇದು. ಜನಶಕ್ತಿಯ ಈ ಮರ್ಮವನ್ನು ಸಂಬಂಧಿಸಿದ ಮಂತ್ರಿಗಳೂ ಸರಕಾರಗಳೂ ಅರ್ಥಮಾಡಿಕೊಂಡು ಸಕಾಲಕ್ಕೆ ಆಗಬೇಕಾದ ಆಣೆಕಟ್ಟಿನ ಕೆಲಸವನ್ನು ಕೈಗೊಳ್ಳಲು ಮುಂದಾಗಬೇಕಲ್ಲದೆ ಎಚ್ಚೆತ್ತ ಜನತೆಯ ಆಶಾಂಕುರಗಳನ್ನು ಚಿವುಟುವಲ್ಲಿ ಆಸ್ಥೆ ವಹಿಸಬಾರದು. ನಮಗೆ ತಿಳಿದ ಮಟ್ಟಿಗೆ ಬಿಜಾಪುರ ಜಿಲ್ಲೆಯ ಬರಗಾಲ ಬವಣೆಯನ್ನು ತಪ್ಪಿಸಲು ಆಲಮಟ್ಟಿ ಯೋಜನೆ ಹೊರತು ಬೇರೆ ದಾರಿಯೇ ಇಲ್ಲ" ಎಂದು ಅಭಿಪ್ರಾಯ ವ್ಯಕ್ತಮಾಡಿತ್ತು.

ಡಾ|| ಕೆ.ಎಲ್.ರಾವ್ ಅವರು ಬಿಜಾಪುರಕ್ಕೆ ಬಂದು ಸಾರ್ವಜನಿಕರಿಂದ ಮನವಿ ಸ್ವೀಕರಿಸಿ, ಆಲಮಟ್ಟಿ, ನಾರಾಯಣಪುರ ಪ್ರದೇಶಗಳನ್ನು ಸಂದರ್ಶಿಸಿ ತಮ್ಮ ಮೊದಲಿನ ವಿಚಾರವನ್ನು ಕೈಬಿಟ್ಟು ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟಿನ ಕೆಲಸ ಜೊತೆ ಜೊತೆಯೇ ಪ್ರಾರಂಭಿಸಲು ರಾಜ್ಯ ಸರ್ಕಾರಕ್ಕೆ ಆದೇಶನೀಡಿದರು.

ಡಾ. ಕೆ.ಎಲ್.ರಾವ್ ಅವರು ಬಿಜಾಪುರ ಜಿಲ್ಲೆಯ ಆಲಮಟ್ಟಿ ಹಾಗೆಯೇ ನಾರಾಯಣಪುರ ಆಣೆಕಟ್ಟಿನ ಪ್ರದೇಶಗಳನ್ನು ಪರಿಶೀಲಿಸಿದ ನಂತರ ಅವರ ಹೇಳಿಕೆಯನ್ನು ಸಮರ್ಥಿಸುತ್ತಾ, 23.4.64 ರ ತನ್ನ ಸಂಪಾದಕೀಯದಲ್ಲಿ ಸಂದರ್ಶನ ವಾರಪತ್ರಿಕೆ ಈ ರೀತಿ ಬರೆದಿದೆ. 'ಬಿಜಾಪುರದ ವಿಜಯ, ಆಲಮಟ್ಟಿ ಗೆದ್ದಿತು' ಎಂಬ ಶಿರೋನಾಮೆ ಯಡಿಯಲ್ಲಿ 'ಆಲಮಟ್ಟಿ ಆಣೆಕಟ್ಟನ್ನು ಅದರ ಪೂರ್ಣ ಎತ್ತರಕ್ಕೆ ಕಟ್ಟಲಾಗುವುದು, ಆಲಮಟ್ಟಿ - ನಾರಾಯಣಪುರ ಆಣೆಕಟ್ಟುಗಳು ಒಂದಕ್ಕೊಂದು ಪೂರಕವಾಗಿವೆ. ಅವೆರಡನ್ನೂ ನಿರ್ಮಿಸುವುದು ಅಗತ್ಯವಾಗಿದೆ. ಆಲಮಟ್ಟಿ ಆಣೆಕಟ್ಟಿನ ಬೇಡಿಕೆಯ ಔಚಿತ್ಯ ಅನೌಚಿತ್ಯಗಳನ್ನು ದಿಲ್ಲಿಯಲ್ಲಿಯೇ ಕುಳಿತು ತೀರ್ಮಾನಿಸಹೊರಟ ಸರಕಾರದ ಹಾಗೂ ಯೋಜನಾ ಆಯೋಗದ ಕಾರ್ಯಪದ್ಧತಿಯು ಎಷ್ಟು ದೋಷಯುಕ್ತವಾಗಿದೆಂಬ ಮಾತನ್ನು ಮಂತ್ರಿಗಳು ತಮ್ಮ ಸಂಚಾರ ಸಂದರ್ಶನದಲ್ಲಿ ವ್ಯಕ್ತಪಡಿಸಿದರೆಂಬ ಸಂಗತಿ ಅವರ ಈ ಹೇಳಿಕೆಯೇ ಸಾಕ್ಷಿ. ಬಿಜಾಪುರದ ಜನರು ಮೈಮರೆತು ಸರಕಾರವೇ ಎಲ್ಲವನ್ನು ಸರಿಯಾಗಿಯೇ ಮಾಡುವುದೆಂದು ಮಲಗಿಬಿಟ್ಟಿದ್ದರೆ ಏನು ಗತಿಯಾಗುತ್ತಿತ್ತೆಂಬುದನ್ನು ನೆನೆದರೆ ಮೈ ನಡುಗುತ್ತದೆ. ಈ ಒಂದು ಉದಾಹರಣೆಯಿಂದ ಪ್ರಜಾಪ್ರಭುತ್ವದ ಯಶಸ್ಸು ಜನತೆಯ ಜಾಗ್ರತೆಯನ್ನು ಅವಲಂಬಿಸಿದೆಯೆಂದು ನಿಚ್ಚಳವಾಗುತ್ತಿದೆ... ಬಿಜಾಪುರ ಜಿಲ್ಲೆಯ ಆಶೋತ್ತರಗಳ ಪೂರೈಕೆ ಯಾಗುವ ಸುಸಂಧಿಯು ತಡವಾಗಿಯಾದರೂ ಸನ್ನಿಹಿತವಾಯಿತೆಂದು ನಾವು ಸಂತೋಷಪಟ್ಟು ಆಲಮಟ್ಟಿ ಆಣೆಕಟ್ಟಿನ ಬಗೆಗೆ ಸತ್ಯಾಗ್ರಹವನ್ನು ಬತ್ತಳಿಕೆಯಿಂದ ಹೊರತೆಗೆದ ಸತ್ಯಾಗ್ರಹಸಮಿತಿ ಹಾಗೂ ಅದಕ್ಕೆ ಬೆಂಬಲವಿತ್ತ ಜನತೆ ಮತ್ತು ಸಂಸ್ಥೆಗಳನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ" ಎಂದು ಬರೆದಿದೆ.

22.5.69 ರಂದು ಕೇಂದ್ರದ ಖಾತಾ ರಹಿತ ಮಂತ್ರಿಗಳಾದ ಲಾಲಬಹದೂರ ಶಾಸ್ತ್ರಿಯವರು ಆಲಮಟ್ಟಿ- ನಾರಾಯಣಪುರ ಆಣೆಕಟ್ಟುಗಳ ಅಡಿಗಲ್ಲು ಸಮಾರಂಭವನ್ನು ನೆರವೇರಿಸಿದರು. ಯೋಜನಾ ಆಯೋಗ ಕೈಬಿಟ್ಟಿದ್ದ ಆಲಮಟ್ಟಿ ಯೋಜನೆಯ ಪುನರಾರಂಭಕ್ಕೆ ಕಮ್ಯುನಿಸ್ಟ್ ಪಾರ್ಟಿಯ ದೃಢನಿಲುವು ಹಾಗೂ ಅದು ಸಂಘಟಿಸಿದ ಹೋರಾಟವೇ ಮುಖ್ಯ ಕಾರಣವೆಂಬುದನ್ನು ನೆನಪಿಡಬೇಕು.

ಎಲ್ಲಾ ಮತಾಂಧರಿಂದಲೂ ಮಹಿಳೆಯರ ಧ್ವನಿ ದಮನ

ಪುಟ 8 ರಿಂದ

ಸ್ವಾಭಿಮಾನ ಎಂದು ಕರೆಯಲಾಗುತ್ತಿದೆ. ಸ್ವಾತಂತ್ರ್ಯ ನಂತರ ಈಗ್ಗೆ 500 ವರ್ಷಗಳ ಹಿಂದಕ್ಕೆ ಸ್ವಾಭಿಮಾನವನ್ನು ರೆಟ್ರಾಸ್‌ಪೆಕ್ಟಿವ್ (ಪೂರ್ವಾನ್ವಯ) ಆಗಿ ಜಾರಿ ಮಾಡಬೇಕಾಗಿ ಬಂದಿದೆ? ಈ ಹಿಂದೆ ಸ್ವಾಬಿಮಾನ ಇರಲಿಲ್ಲವೇ? ಇದೇ ಕೇಂದ್ರ ಸರ್ಕಾರದ ನಿರ್ಧಾರದ ವಿರುದ್ಧ ಪಾಕಿಸ್ತಾನದ ಕ್ರಿಕೆಟ್ ತಂಡ ಭಾರತದಲ್ಲಿ ಕ್ರಿಕೆಟ್ ಆಡದಂತೆ ಬಾಳಾಠಾಕ್ರೆ ಕ್ರಿಕೆಟ್ ಪಿಚ್ ಹಾಳು ಮಾಡಿದಾಗ ಈ ಸ್ವಾಭಿಮಾನ ಎಲ್ಲಿ ಹೋಗಿತ್ತು? ಅಟಂಬಾಂಬ್ ತಯಾರಿಸಿ ಅದನ್ನು ಪಾಶುಪತಾಸ್ತ್ರ ಎಂದು ಕರೆಯಲಾಯಿತು. ಪಾಕಿಸ್ತಾನವೂ ಹಿಂದೆಯೇ ಅಟಂಬಾಂಬ್ ಸಿಡಿಸಿದಾಗ ಪಾಶುಪತಾಸ್ತ್ರದ ಕತೆ ಏನಾಯಿತು? ಎಂದೂ ಜಿ.ಕೆ. ಗೋವಿಂದರಾವ್ ಪ್ರಶ್ನಿಸಿದರು.

ಭಯೋತ್ಪಾದಕರಾರು?

ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಅಲ್ಬಿನಾ ಶಕೀಲ್ ವಿಚಾರ ಸಂಕಿರಣದಲ್ಲಿ ಮಾತನಾಡಿ ದೇಶದ ಪಾರ್ಲಿಮೆಂಟಿನ ಮೇಲೆ ಭಯೋತ್ಪಾದಕರು ಧಾಳಿ ನಡೆಸಿದ ನಂತರ

ನೀಡಿದರು. ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಳ್ಳುವ ಪೋಟೋ ಜೊತೆಗಿರಿ - ಇಲ್ಲವೇ ಭಯೋತ್ಪಾದನೆಯ ಜೊತೆಗಿರಿ ಎಂಬಂತಹ ಮಾತುಗಳು ಕೇಳಿಬರುತ್ತಿವೆ. ಅಲ್ಪಸಂಖ್ಯಾತರ ಮೇಲೆ ಅತ್ಯಾಚಾರ ನಡೆಸುವ, ಅಲ್ಪಸಂಖ್ಯಾತರನ್ನು ಜೀವಂತ ಸುಡುವ ಭಜರಂಗದಳ, ಮತಾಂಧ ಭಯೋತ್ಪಾದಕ ಸಂಘಟನೆಯಲ್ಲವೇ? ಅದನ್ನೇಕೆ ನಿಷೇಧಿಸಬಾರದು ಎಂದು ಕೇಳಿದರೆ ಭಜರಂಗದಳ ಮತಾಂಧ ಸಂಘಟನೆ ಆದರೆ ಅದು ದೇಶ ವಿರೋಧಿ ಸಂಘಟನೆ ಅಲ್ಲ ಎಂದು ಉತ್ತರಿಸಲಾಗುತ್ತಿದೆ. ಮತಾಂಧತೆಯಲ್ಲಿ -ಭಯೋತ್ಪಾದನೆಯಲ್ಲಿ ದೇಶದ ಪರ-ವಿರೋಧ ಎಂಬುದು ಎಲ್ಲಾದರೂ ಉಂಟೇ ಎಂದು ಅಲ್ಬಿನಾ ಶಕೀಲ್ ಪ್ರಶ್ನಿಸಿದರು.

ಕೋಮುವಾದ ಮನಸನ್ನು ಜಡಗೊಳಿಸಿದೆ

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿದ್ದ ಖ್ಯಾತ ಲೇಖಕ ರಾಜಶೇಖರ್‌ರವರು ಮಾತನಾಡಿ ದೇಶದ, ಅತ್ಯಂತ ಪ್ರತಿಷ್ಠಿತ ವಿಶ್ವ ವಿದ್ಯಾಲಯ ಜೆಎನ್‌ಯು ನಲ್ಲಿ ಎಸ್‌ಎಫ್‌ಐನ ನಿರಂತರ ವಿಜಯ ಅತ್ಯಂತ ಸಂತಸದ ವಿಷಯ ಎಂದರಲ್ಲದೆ ಲಂಕೇಶ್ ಪತ್ರಿಕೆ ರಾಜ್ಯದಲ್ಲಿ ಕೋಮುವಾದದ ವಿರುದ್ಧ ದೃಢ ನಿಲುವು ತಳೆದು ಹೋರಾಡುತ್ತಿದೆ

ಎರಡು ಮಹಾದುರಂತಗಳ ಬಗೆಗೆ ಅವರು ಗಮನ ಸೆಳೆದರು. ಒಂದು, ಸ್ವಾತಂತ್ರ್ಯದ ಹೊಸ್ತಿಲಲ್ಲೇ ಹೈದರಾಬಾದ್ ಪ್ರಾಂತದಲ್ಲಿ ರಜಾಕರ ಚಳುವಳಿ ಸಂದರ್ಭದಲ್ಲಿ ಹಿಂದೂಗಳ ಮೇಲೆ ನಡೆದ ದಬ್ಬಾಳಿಕೆ ಮಾರಣ ಹೋಮ - ಕೇಂದ್ರ ಸರ್ಕಾರದ ಮಧ್ಯ ಪ್ರವೇಶದಿಂದಾಗಿ ಭಾರತ ಒಕ್ಕೂಟದಲ್ಲಿ ಹೈದರಾಬಾದ್ ವಿಲೀನದ ನಂತರ ಅಧಿಕಾರಸ್ಥರು, ಹಿಂದೂಗಳು ಮುಸಲ್ಮಾನರ ಮೇಲೆ ನಡೆಸಿದ ಘೋರ ದೌರ್ಜನ್ಯ. ಅತ್ಯಾಚಾರಗಳು. ಹಿಂದೂ-ಮುಸ್ಲಿಂ ಎರಡು ಸಮುದಾಯಗಳಲ್ಲಿ ಮಹಿಳೆಯರು ಕ್ರೂರ ಧಾಳಿಗೆ ಗುರಿಯಾಗಿದ್ದರು ಎಂದ ಅವರು ಕೋಮುವಾದ ನಮ್ಮ ಮನಸ್ಸುಗಳನ್ನು ಜಡ ಮಾಡಿವೆ. ಹೀಗಾಗಿ ಭೋಪಾಲ ಅನಿಲ ದುರಂತದಲ್ಲಿ ನೊಂದವರ ಬಗೆಗೆ ಅವರಿಗೆ ಪರಿಹಾರ ಸಿಗದ ಬಗೆಗೆ ಸಹ ನಾವು ಜಡವಾಗಿದ್ದೇವೆ ಎಂದರು. 1993 ರ ಮುಂಬೈ ನರಮೇಧದಲ್ಲಿ ಹತ್ಯೆಯಾದ ಸಹಸ್ರಾರು ಮುಸಲ್ಮಾನರನ್ನು ಕೊಂದವರು ಯಾರು, ಎಲ್ಲಿ, ಯಾವಾಗ ಎಂಬ ನಿರ್ದಿಷ್ಟ ಆಧಾರ ನೀಡಿರುವ ಶ್ರೀಕೃಷ್ಣ ಆಯೋಗ ವರದಿ ಮೇಲೆ ಕ್ರಮಕ್ಕೆ ಮುಂದಾಗದೇ ಮೂಲೆಗೆಸೆಯಲಾಗಿದೆ.

ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ ವಿಚಾರ ಸಂಕಿರಣದಲ್ಲಿ ಪ್ರಸ್ತಾವನೆಯ ಮಾತನಾಡಿದರೆ, ಮಮತಾಶೆಟ್ಟಿ

'ಇನ್ನೊಂದು ಜಗತ್ತು ಸಾಧ್ಯ'

ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಬದಲಿಯೇ ಇಲ್ಲ ಎಂದು ಎಲ್ಲಾ ಮಾಧ್ಯಮಗಳು ಎಲ್ಲರನ್ನೂ ನಂಬಿಸಲು ಪ್ರಯತ್ನಿಸುತ್ತಿವೆ. ಇದಕ್ಕೆ ಸೆಡ್ಡು ಹೊಡೆದು ಜಗತ್ತಿನ ಎಲ್ಲೆಡೆಯಿಂದ ಬಂದ 40 ಸಾವಿರ ಜನ ಒಂದೆಡೆ ಕಲೆತು 'ಇನ್ನೊಂದು ಜಗತ್ತು ಸಾಧ್ಯ' ಎಂದು ಘೋಷಿಸಿದ್ದಾರೆ. ಇದು ನಡೆದದ್ದು ದಕ್ಷಿಣ ಅಮೆರಿಕದ ಬ್ರೆಜಿಲ್ ದೇಶದಲ್ಲಿ ಪೊರ್ಟೋ ಅಲೆಗ್ರೆ ಎಂಬ ನಗರದಲ್ಲಿ. ಈ ಸಭೆಯನ್ನು 'ಜಾಗತಿಕ ಸಾಮಾಜಿಕ ವೇದಿಕೆ' ಎಂದು ಕರೆಯಲಾಯಿತು. ಇದು ಇಂತಹ ಎರಡನೇ ಸಭೆ. 2001 ರಲ್ಲೂ ಇಂತಹುದೇ ಸಭೆ ನಡೆದಿತ್ತು. ಬಹುರಾಷ್ಟ್ರೀಯ ಕಂಪನಿಗಳು, ಅಭಿವೃದ್ಧ ಬಂಡವಾಳಶಾಹಿ

ಫ್ರೆಂಚ್ ಮಾಸ ಪತ್ರಿಕೆ 'ಲೆ ಮಾಂಡೆ ಡಿಪ್ಲಾಮೆಟಿಕ್', 'ಅಟಾಕ್'ಎಂಬ ಯುರೋಪಿಯನ್ ಸಂಘಟನೆ, ನೋವಿಬ್ ಎಂಬ ಹಾಲೆಂಡ್‌ನ ಅಂತರ್‌ರಾಷ್ಟ್ರೀಯ ಬೆಳವಣಿಗೆ ಸಹಕಾರಕ್ಕೆ ಪ್ರೋತ್ಸಾಹಿಸುವ ಸಂಘಟನೆ ಮುಂತಾದವು 'ಸಾಮಾಜಿಕ ವೇದಿಕೆ' ಸಾಧ್ಯ ಮಾಡಿದ ಸಂಘಟನೆಗಳು.

ವಿಶ್ವದ ಶ್ರೀಮಂತರ ಸೊಕ್ಕಿಗೆ ಸವಾಲು

ಬಂಡವಾಳಶಾಹಿ-ಜಾಗತೀಕರಣಕ್ಕೆ ವಿರೋಧ ವ್ಯಕ್ತಪಡಿಸಿರುವ ಎಲ್ಲಾ

ಯಾವಾಗಲೂ ಸ್ವಿಟ್‌ಜರ್‌ಲ್ಯಾಂಡ್‌ನ ದಾವೋಸನಲ್ಲಿ ನಡೆಯುವ 'ಆರ್ಥಿಕ ವೇದಿಕೆ' ಯನ್ನು ನ್ಯೂಯಾರ್ಕ್‌ಗೆ ಸ್ಥಳಾಂತರಿಸಿ ಪ್ರತಿಭಟನೆ (WTO ನಾಶದ ಸಂತ್ರಸ್ತರಿಗೆ ಗೌರವ ಹೆಸರಲ್ಲಿ) ತಡೆಯಲು ಸಾಧ್ಯವಾಗುತ್ತದೆ ಎಂದು ಬಗೆದಿದ್ದರು. ಆದರೆ ನ್ಯೂಯಾರ್ಕ್‌ನ 'ಆರ್ಥಿಕ ವೇದಿಕೆ' ಸಮಯದಲ್ಲಿ

ಸಾರ್ವಜನಿಕ ರಂಗ' ಮತ್ತು 'ರಾಜಕೀಯ ಶಕ್ತಿ ಮತ್ತು ನೈತಿಕತೆ' ಇವೆ ಆ ನಾಲ್ಕು ಮುಖ್ಯ ವಿಷಯಗಳು. ಸಾಮ್ರಾಜ್ಯಶಾಹಿ ಮತ್ತು



ನವ-ಉದಾರೀಕರಣದ ನೀತಿಗಳಿಗೆ ವಿರುದ್ಧವಾಗಿ ಜಗತ್ತಿನ ಸಮಸ್ಯೆಗಳ ಬಗ್ಗೆ ಜನಪರ ಪರಿಹಾರಗಳ ಬಗ್ಗೆ ಮುಕ್ತ, ಬಿಚ್ಚು ಮನಸ್ಸಿನ ಪ್ರಜಾಸತ್ತಾತ್ಮಕ ಚರ್ಚೆ 'ವೇದಿಕೆ'ಯಲ್ಲಿ

ಪುಟ 12 ಕ್ಕೆ

ಎರಡನೇ 'ಜಾಗತಿಕ ಸಾಮಾಜಿಕ ವೇದಿಕೆ' ಸಭೆ

ದೇಶಗಳ ರಾಜಕೀಯ-ಉದ್ಯಮಗಳ ನಾಯಕರು ಸ್ವಿಟ್ಜರ್‌ಲ್ಯಾಂಡ್‌ನ 'ದಾವೋಸ್' ನಲ್ಲಿ ಸಭೆ ಸೇರುತ್ತಿದ್ದು ಅದನ್ನು 'ಜಾಗತಿಕ ಆರ್ಥಿಕ ವೇದಿಕೆ' ಎಂದು ಕರೆಯಲಾಗುತ್ತಿತ್ತು. ಈ ವೇದಿಕೆಯಲ್ಲಿ ಜಗತ್ತಿನ ಶ್ರೀಮಂತರು ತೋರಿಸುತ್ತಿದ್ದ ಉದ್ಧಟತನದ ವಿರುದ್ಧ ಕಳೆದ ವರ್ಷ ಈ ಸಭೆ ಸಂಘಟಿಸಲಾಗಿತ್ತು. ಜಗತ್ತಿನ ಶ್ರೀಮಂತರು ಇಡೀ ಜಗತ್ತಿನ ಬಡವರನ್ನು ತುಳಿದು ಮಟ್ಟಹಾಕುವ ನೀತಿಗಳ ಬಗ್ಗೆ 'ಆರ್ಥಿಕ ವೇದಿಕೆ' ಯಲ್ಲಿ ಚರ್ಚಿಸಿದರೆ, 'ಸಾಮಾಜಿಕ ವೇದಿಕೆ'ಯಲ್ಲಿ ಅದನ್ನು ತಡೆಯುವುದು ಹೇಗೆ ಎಂದು ಚರ್ಚಿಸಲಾಗುತ್ತಿದೆ. 'ಆರ್ಥಿಕ ವೇದಿಕೆ' ನಡೆಯುವ ದಿನಗಳಲ್ಲೇ ನಡೆಯುವ 'ಸಾಮಾಜಿಕ ವೇದಿಕೆ' ಬಂಡವಾಳಶಾಹಿ-ಜಾಗತೀಕರಣದ ವಿರುದ್ಧ ಬಂಡೆದ್ದ ಇಡೀ ಜಗತ್ತಿನ ಎಲ್ಲಾ ಸಾಮಾಜಿಕ-ರಾಜಕೀಯ ಶಕ್ತಿಗಳ ಸಂಗಮ. ಇದಕ್ಕೆ 117 ದೇಶಗಳಿಂದ 15 ಸಾವಿರ, (8 ಸಾವಿರ ಬ್ರೆಜಿಲ್‌ನ ಹೊರಗಿಂದ) ಪ್ರತಿನಿಧಿಗಳು ಬಂದಿದ್ದು, 40 ಸಾವಿರ ಜನ ಹಲವು ಬಹಿರಂಗ ಚಟುವಟಿಕೆಗಳಲ್ಲಿ ಭಾಗವಹಿಸಿದರು. 'ಸಾಮಾಜಿಕ ವೇದಿಕೆ' ಯನ್ನು ಸಂಘಟಿಸಲು ಬ್ರೆಜಿಲ್‌ನ ಪ್ರಮುಖ ಎಡಪಕ್ಷ 'ಕಾರ್ಮಿಕರ ಪಕ್ಷ' ಮುಂದಾಗಿದ್ದು, ಅದು ನಡೆಯುವ ನಗರ ಹಾಗೂ ಪ್ರಾಂತ್ಯದಲ್ಲಿ ಆ ಪಕ್ಷ ಸರ್ಕಾರ ನಡೆಸುತ್ತಿದೆ. ಬ್ರೆಜಿಲ್‌ನ ಹಲವು ಟ್ರೇಡ್ ಯೂನಿಯನ್ನುಗಳು, ರೈತ-ಕೃಷಿ ಕೂಲಿಕಾರರ ಸಂಘಟನೆಗಳು, ಪ್ರಗತಿಪರ

ಸಂಘಟನೆಗಳು 'ಸಾಮಾಜಿಕ ವೇದಿಕೆ' ಸೇರಿವೆ. ಡಬ್ಲ್ಯುಟಿಓದ ಸೀಯಾಟ್ಲ್ ಶೃಂಗಸಭೆಯ ಸಮಯದಿಂದ (1999) ಜನ-ವಿರೋಧಿ ಐಎಂಎಫ್ - ವಿಶ್ವಬ್ಯಾಂಕ್ - ಡಬ್ಲ್ಯುಟಿಓ ತ್ರಿವಳಿಗಳ ಸಭೆ ಎಲ್ಲಿ ನಡೆದರೂ ತೀವ್ರ ಸಾಮೂಹಿಕ ಪ್ರತಿಭಟನೆ ನಡೆಯುತ್ತಿದ್ದು,

ವ್ಯಾಪಕ ಶಾಂತಿಯುತವಾದ ಪ್ರತಿಭಟನೆ ನಡೆದಿದೆ. ಇದಲ್ಲದೆ ಅದೇ ಸಮಯದಲ್ಲಿ ನಡೆದ 'ಸಾಮಾಜಿಕ ವೇದಿಕೆ' ಗೂ ಹಿಂದಿನ ವರ್ಷಕ್ಕಿಂತಲೂ

ಅಮೆರಿಕ 'ಶಾಶ್ವತ ಭಯೋತ್ಪಾದಕ ಏಜೆಂಟ್'

ಅಮೆರಿಕ ಸಂಯುಕ್ತ ಸಂಸ್ಥಾನ ಇಡೀ ಜಗತ್ತಿನ ಮೇಲೆ ತನ್ನ ನಿರ್ಧಾರವನ್ನು ಬಲಪೂರ್ವಕವಾಗಿ ಹೇರುತ್ತಿದೆ............ ಹೊಸ ಶೀತಸಮರದ ವಾತಾರಣವನ್ನು ಅದು ನಿರ್ಮಿಸಿದೆ.....

ವಿಶ್ವಸಂಸ್ಥೆ ತನ್ನ ಪಾತ್ರವನ್ನು ಕಳೆದುಕೊಂಡಿದೆ. ಬಂಡವಾಳಶಾಹಿ ಶಕ್ತಿಗಳು ಮತ್ತು ಹೆಚ್ಚಿನ ದೇಶಗಳ ಸರ್ಕಾರಗಳು ಅಮೆರಿಕಕ್ಕೆ 'ಶಾಶ್ವತ ಭಯೋತ್ಪಾದಕ ಏಜೆಂಟ್' ಪಾತ್ರ ವಹಿಸಿಕೊಟ್ಟಿದೆ.

ಜಗತ್ತಿನ ಶ್ರೀಮಂತರಿಗೆ ಅವರ ಸಭೆ ನಡೆಸುವುದೇ ಕಷ್ಟವಾಗಿ ಬಿಟ್ಟಿತ್ತು. ಕಳೆದ ವರ್ಷದ ಜುಲೈನಲ್ಲಿ 'ಜಿನೋವಾ' ದಲ್ಲಿ ನಡೆದ ಪ್ರತಿಭಟನೆಯಲ್ಲಿ ಮೂರು ಲಕ್ಷ ಜನ ಭಾಗವಹಿಸಿ, ಪೋಲೀಸ ಗೋಲಿಬಾರು ನಡೆದು ಶ್ರೀಮಂತರ ಬೀದಿಯಲ್ಲಿ ಪ್ರಜಾಸತ್ತಾತ್ಮಕ ಪ್ರತಿಭಟನೆ ಕಂಡು ಕಂಗಾಲಾಗಿದ್ದರು. ಸೆಪ್ಟೆಂಬರ್ 11 ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಭಯೋತ್ಪಾದನೆ ಘಟನೆಯ ದುರ್ಬಳಕೆ ಮಾಡಿ ಜಗತ್ತಿನ ಶ್ರೀಮಂತರು ಪುನಃ ತಮ್ಮ ದರ್ಬಾರು ಆರಂಭಿಸಿದರು. ದೋಹಾದಲ್ಲಿ ನಡೆದ ಡಬ್ಲ್ಯುಟಿಓ ಸಭೆಯ ಸಮಯದಲ್ಲಿ ಜನ ಆ ದೇಶಕ್ಕೆ ಬರದಂತೆ ಮಾಡಿದರೆ,

ಶರತ್‌ಚಂದ್ರ

ಹೆಚ್ಚಿನ ಸ್ಪಂದನ ದೊರೆತಿದೆ. ಸೆಪ್ಟೆಂಬರ್ 11 ರ ದುರ್ಘಟನೆ ಬಳಸಿ ಬಡವರ ಪ್ರತಿಭಟನೆ ಮೆಟ್ಟಲು ಮಾಡಿದ ಪ್ರಯತ್ನ ವಿಫಲವಾಗಿದೆ. ಇದಕ್ಕೆ ಇತ್ತೀಚೆಗೆ ನಡೆದ ಎರಡು ಪ್ರಮುಖ ಘಟನೆಗಳು ಕಾರಣವಾಗಿದೆ. ಮೊದಲನೆಯದು ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಕೊಳಕನ್ನು ಬಯಲು ಮಾಡಿದ 'ಎನ್ರೋನ್' ಹಗರಣ ಮತ್ತು ದಿವಾಳಿ, ಎರಡನೆಯದು ಬಂಡವಾಳಶಾಹಿ ಜಾಗತೀಕರಣದ ನೀತಿಯನ್ನು ಅನುಸರಿಸಿದ ಅರ್ಜೆಂಟಿನಾದಲ್ಲಿ ತಲೆದೋರಿದ ತೀವ್ರ ಆರ್ಥಿಕ ಬಿಕ್ಕಟ್ಟು. ಇವೆರಡೂ ಉಳ್ಳವರ ಜಾಗತೀಕರಣದ ವಿರುದ್ಧ ಪ್ರತಿಭಟನಾ ಚಳುವಳಿ ಮತ್ತು ಬದಲಿ ರೂಪಿಸಲು ಹೋರಾಟಕ್ಕೆ ಗರಿ ಗೆದರಿದಂತಾಗಿದೆ. ಈ ವರ್ಷದ 'ಸಾಮಾಜಿಕ ವೇದಿಕೆ' ಸಭೆ ಎಷ್ಟು ಗಮನ ಸೆಳೆದಿತ್ತೆಂದರೆ ಫ್ರಾನ್ಸ್‌ನ ಮೂವರು ಅಧ್ಯಕ್ಷೀಯ ಅಭ್ಯರ್ಥಿಗಳು ಅರ್ಧ ಡಜನ್ ಮಂತ್ರಿಗಳೂ ಬಂದಿಳಿದಿದ್ದರು.


ವಿಶ್ವ ಶಾಂತಿಗೆ ನಿರ್ಣಯ

ಜನವರಿ 30 ರಿಂದ ಫೆಬ್ರವರಿ 4 ರವರೆಗೆ ನಡೆದ ಸಭೆಯಲ್ಲಿ ವಿಶ್ವಶಾಂತಿಗೆ ಬೆಂಬಲದ, ಅಮೆರಿಕದ ಖಂಡಗಳ ನಡುವೆ 'ಮುಕ್ತವ್ಯಾಪಾರ ಒಪ್ಪಂದ'ದ ಹೆಸರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಅಧಿಪತ್ಯ ಮತ್ತು ಅಮೆರಿಕದ ಮಿಲಿಟರಿ ಕಾರ್ಯಾಚರಣೆ ಖಂಡಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಸಭೆಯಲ್ಲಿ 26 ಅಧಿವೇಶನಗಳು ನಡೆದು ನಾಲ್ಕು ಮುಖ್ಯ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. 'ಸಾಮಾಜಿಕ ಪುನರುತ್ಪಾದನೆ ಮತ್ತು ಸಂಪತ್ತಿನ ಉತ್ಪಾದನೆ' ಎಲ್ಲರಿಗೂ ನಿಲುಕುವ

'ಸಾಮಾಜಿಕ' ಸವಾಲಿನಿಂದ ಬೆದರಿದ 'ಆರ್ಥಿಕ'ವೇದಿಕೆ

ಜಗತ್ತಿನ ಶ್ರೀಮಂತರು ಪ್ರತಿಷ್ಠಿತರು ಸ್ವಿಟಜರ್‌ಲ್ಯಾಂಡಿನ ಬದಲು ಈ ಬಾರಿ ನ್ಯೂಯಾರ್ಕ್‌ನಲ್ಲಿ ತಮ್ಮ ಸಭೆ ನಡೆಸಿ ಸಾರ್ವಜನಿಕ ಸಹಾನುಭೂತಿ ಗಳಿಸುವ ಪ್ರಯತ್ನ ನಡೆಸಿದರು. ಇದು ಪ್ರತಿಭಟನೆಗಳನ್ನು ತಡೆಯಬಹುದು ಎಂಬ ಅವರ ಎಣಿಕೆ ಮಾತ್ರ ಹುಸಿಯಾಗಿತ್ತು. ತಲಾ 25 ಸಾವಿರ ಡಾಲರ್ ತೆತ್ತು 'ಜಾಗತಿಕ ಆರ್ಥಿಕ ವೇದಿಕೆ'ಯಲ್ಲಿ ಭಾಗವಹಿಸುತ್ತಿದ್ದ ವಿಶ್ವದ ಸಾವಿರ ದೊಡ್ಡ ಕಂಪನಿಗಳ ಮಾಲಕರು, ಅವರ ಬಾಲಬಡುಕ ಅಧಿಕಾರಿಗಳು, ರಾಜಕಾರಣಿಗಳಿಗೆ ಸಾವಿರಾರು ಜನರ ಪ್ರತಿಭಟನಾ ಪ್ರದರ್ಶನಗಳು ಸವಾಲು ಹಾಕಿದವು. ಎನ್ರೋನ್ ಮತ್ತು ಅರ್ಜೆಂಟಿನಾ ಬಿಕ್ಕಟ್ಟುಗಳು 'ಸೆಪ್ಟೆಂಬರ್ 11' ಬಂಡವಾಳಶಾಹಿ-ಜಾಗತೀಕರಣದ ವಿರೋಧಿ ಚಳುವಳಿಗೆ ಕವಿದಿದ್ದ ಮಂಕನ್ನು ಬಡಿಸಿದ್ದವು. ಪ್ರದರ್ಶನಕಾರರಷ್ಟೇ ಇದ್ದ ಸಾವಿರಾರು ಜನರ ಪೋಲೀಸ್ ಬಲ, ಸಭೆಯ ತಾಣಕ್ಕೆ ಪ್ರದರ್ಶನಕಾರರು ಹೋಗದಂತೆ ತಡೆಯಲು ಪಟ್ಟ ಶ್ರಮ, ಜಾಣಾಕ್ಷತೆ, ಮೋಸಗಳನ್ನೆಲ್ಲಾ ಮೆಟ್ಟಿ ನಿಂತು ನಿಂತಲ್ಲೇ ಪ್ರತಿಭಟನೆ ಪ್ರದರ್ಶನಗಳನ್ನು ಸಲ್ಲಿಸಿದರು. ಈ ಪ್ರತಿಭಟನಾ ಪ್ರದರ್ಶನಗಳನ್ನು 'ಆನ್ಸರ್' (ಉತ್ತರ - ANSWER : Act Now to Stop War and Pacism ಯುದ್ಧ ಮತ್ತು



ನಿಮ್ಮ ಆರ್ಥಿಕ ಚಟುವಟಿಕೆಗಳ ಸಾಮಾಜಿಕ ಪರಿಣಾಮಗಳ ಬಗ್ಗೆ ನಿಮಗೆ ನಿರ್ಲಕ್ಷ್ಯ, ಅಂತಾರೆ ಅವರು' - ಅನ್ನನ್

"ನಿಜ ಸಂಗತಿ ಎಂದರೆ ಸಂಪತ್ತು ಮತ್ತು ಅಧಿಕಾರ ಈ ಜಗತ್ತಿನಲ್ಲಿ ಅಸಮಾನವಾಗಿ ಹಂಚಲಾಗಿದೆ. ಬಹುಸಂಖ್ಯಾತ ಜನರು ಇದರಿಂದ ದುರ್ಬರ ಮತ್ತು ತೀವ್ರ ಬಡತನದಿಂದ ಬಳಲುತ್ತಿದ್ದಾರೆ....

.... ಜಗತ್ತಿನ ಬಹುಸಂಖ್ಯಾತರು ಇಂದು ಈ ಪರಿಸ್ಥಿತಿ ಜಾಗತೀಕರಣದ ಫಲ ಎಂದುಕೊಂಡಿದ್ದಾರೆ. ಈ ಜಾಗತೀಕರಣವನ್ನು ಇಲ್ಲಿ ನೆರೆದಿರುವ ಅಥವಾ ಕನಿಷ್ಠ ಇಲ್ಲಿ ನೆರೆದವರಿಂದ ಪ್ರತಿನಿಧಿತವಾಗಿರುವ ಜಾಗತಿಕ

.... 'ಜಾಗತಿಕ ಸಾಮಾಜಿಕ ವೇದಿಕೆ' ಯ ಹೆಸರೇ ನಿಮ್ಮ ಧೋರಣೆಯ ಟೀಕೆ. ನೀವು 'ಆರ್ಥಿಕ' ಅಥವಾ ಲಾಭದ ಬಗ್ಗೆ ಮಾತ್ರ ಯೋಚಿಸುತ್ತೀರಿ. ನಿಮ್ಮ ಆರ್ಥಿಕ ಚಟುವಟಿಕೆಗಳ ಸಾಮಾಜಿಕ ಪರಿಣಾಮಗಳ ಬಗ್ಗೆ ನಿಮಗೆ ನಿರ್ಲಕ್ಷ್ಯ, ಅಂತಾರೆ ಅವರು.....

.... ಅವರ ಎಣಿಕೆ ತಪ್ಪು ಎಂದು ನೀವು ನಿಮ್ಮ ಕಾರ್ಯಾಚರಣೆಯಿಂ ಸಿದ್ಧಪಡಿಸಬೇಕಾಗಿದೆ......

..... ವಿಶ್ವಸಂಸ್ಥೆ ಮಹಾಕಾರ್ಯದರ್ಶಿ 'ಕೋಫಿ

ರೂಢಿಯಂತೆ ಜುಬೇದಾ ಬೆಳಗ್ಗೆ ಬೇಗನೆ ಎದ್ದು ಹೊರಗೆ ಅಂಗಳಕ್ಕೆ ಬಂದಳು. ಆಕೆಯ ಬೂದು ಬಣ್ಣದ ತಲೆಕೂದಲಿನೊಂದಿಗೆ ಗಾಳಿ ಲಾಸ್ಯವಾಡುತ್ತಿತ್ತು. ಆದ್ದರಿಂದ ಆಕೆ ತನ್ನ ತಲೆಯ ಮುಸುಕಿನ ಹಳೆಯ ಬಟ್ಟೆಯನ್ನು ಸದಾ ಸರಿಪಡಿಸಿಕೊಳ್ಳುತ್ತಲೇ ಇದ್ದಳು. ಆಕೆಯ ಕೈಗಳ ಎಲುಬುಗಳು ಎದ್ದು ಕಾಣುತ್ತಿದ್ದವು. ಬೆರಳು ಗಳು ಗಂಟುಗಂಟಾಗಿ ದ್ದುವು ಮತ್ತು ಮುಖವು ಪೂರ್ತಿಯಾಗಿ ಸುಕ್ಕು ಅಂಟಿಕೊಂಡು ಬಾಗಿ ನಿಂತಿದ್ದಳು. ಪಾಪ, ಹೆಚ್ಚು ಹೊತ್ತು ನಿಂತಿರುವುದೂ ಈ ವಯಸ್ಸಾದ ಮುದುಕಿಗೆ ಕಷ್ಟವೇ ಆಗಿತ್ತು.



ಇದು ಅಫಘಾನದ ಕಥೆ. 1980 ರ ದಶಕದ ಆರಂಭದ್ದು. ಸಾವಿರಾರು ವರುಷಗಳ ಇತಿಹಾಸವಿರುವ ಈ ದೇಶದ ಜನತೆ ಅನುಭವಿಸಿದ ಸಂಕಟ, ನೋವು-ನಲಿವು ಮತ್ತು ಶೋಷಣೆಗಳಿಗೆದುರಾಗಿ ಸಿಡಿದ ಬಂಡಾಯಗಳು ಹಲವು. ಈ ದೇಶದ ರಾಜಕಾರಣ ಹಲವಾರು ಭಾರಿ ಏರಿಳಿತಗಳನ್ನು ಕಂಡಿದೆ. ಈ ಆಗು-ಹೋಗುಗಳ ತಿರುವು ಜನತೆಯಲ್ಲಿ ಹೊಸ ನಿರೀಕ್ಷೆಗಳನ್ನು ಉಕ್ಕಿಸಿದೆ. ಆದರೆ ಅಲ್ಲಿ ಜನತೆಯ ಪ್ರಜಾಪ್ರಭುತ್ವ ಚಿಗುರೊಡೆದು ಬೆಳೆಯದಂತೆ ಜಾಗತಿಕ ಸಾಮ್ರಾಜ್ಯಶಾಹಿಗಳು ಹಲವಾರು ಪಿತೂರಿ-ಹುನ್ನಾರಗಳನ್ನು ನಡೆಸಿ, ಭಯೋತ್ಪಾದಕರು ದಂಧ್ರತೆಯ ನರಕವನ್ನಾಗಿಸಲಾಗಿದೆ. ಈಗ ಅಮೆರಿಕಾದ ಜಾಗತಿಕ ಪ್ರಾಬಲ್ಯದ ಕಾಲ್ಚೆಂಡಾಗಿರುವ ಅಫಘಾನದ ಇಂದಿನ ಸ್ಥಿತಿಯನ್ನು ಸಂಕೇತಿಸುವಂತಿದೆ ಈ ಕಥೆ.

ಮನೆಗೊಂದು ಜಮಖಾನ

ಇಬ್ರಾಹಿಂ ಶೇಖ್ — ಅನುವಾದ : **ವಾಸುದೇವ**

ಆ ಹಳ್ಳಿಯಲ್ಲಿ ಅಜ್ಜಿ ಜುಬೇದಾ ಎಲ್ಲರಿಗೂ ಪರಿಚಿತಳೇ. ಆಕೆಯ ಮಗನು ದುಡಿಮೆಗಾಗಿ ಪಟ್ಟಣಕ್ಕೆ ಹೋಗಿದ್ದಾನೆ. ತನ್ನ ಬಾಳಿನಲ್ಲಿ ಜುಬೇದಾ ವಿಶೇಷ ಸುಖವನ್ನೇನೂ ಪಡೆಯಲಿಲ್ಲ. ಒಮ್ಮೆ ಅವಳು ತೆಳ್ಳಗಿದ್ದಳು. ಈಗ ಆಕೆಯ ಬೆನ್ನು ಬಗ್ಗಿದೆ. ಆಕೆಯ ಸುಕ್ಕುಗಳ ಮಧ್ಯೆ ಬಳಲಿಕೆ ವ್ಯಕ್ತಪಡಿಸುತ್ತಿರುವ ಮಸಕಾದ ಕಣ್ಣುಗಳು ತಮ್ಮ ಕಾಂತಿಯನ್ನು ಕಳೆದುಕೊಂಡಿವೆ. ಸಣ್ಣ ವಯಸ್ಸಿನಲ್ಲಿಯೇ ಅವಳು ವಿಧವೆಯಾದಳು ಮತ್ತು ತನ್ನ ಮಗನೊಂದಿಗೆ ಬಡವರ ಆಲಯದಲ್ಲಿ ಸೇರಿಕೊಂಡಳು. ಆಕೆಯ ಗಂಡನು ತೀರಿಕೊಂಡ ತರುವಾಯ ಅವಳನ್ನು ಮದುವೆ ಮಾಡಿಕೊಳ್ಳಲು ಅನೇಕರು ಮುಂದೆ ಬಂದರಾದರೂ ಆಕೆ ಮಾತ್ರ ಮದುವೆಯಾಗಲಿಲ್ಲ.

"ನಾನು ಹೇಗೆ ಮದುವೆ ಮಾಡಿಕೊಳ್ಳಲಿ? ನನ್ನ ಮಗನನ್ನು ನಾನು ಸಾಕಬೇಕಾಗಿದೆ" ಎಂದು ಜುಬೇದಾ ಹೇಳುತ್ತಿದ್ದಳು.

ಈಗ ಆಕೆಯು ಮುದುಕಿಯಾಗಿದ್ದಾಳೆ, ಬಲಹೀನಳಾಗಿದ್ದಾಳೆ. ಯಾವ ಕೆಲಸವನ್ನಾದರೂ ಕೈಗೊಂಡು ಮಾಡುವುದು ಆಕೆಗೆ ಸಾಧ್ಯವಿದ್ದ ಕಾಲ ಹೋಯಿತು. ಪ್ರತಿಯೊಂದೂ ಹೋದ ಹಾಗೆಯೇ. ಆದರೂ ನಿನ್ನೆ ತಾನೇ ಆಕೆ ಗಟ್ಟಿ ಮುಟ್ಟಾಗಿ, ಯುವತಿಯಾಗಿ ಇದ್ದಳು ಎನಿಸುತ್ತದೆ. ಒಂದೇ ದಿನದಲ್ಲಿ ಆಕೆ ಅನೇಕ ಬಟ್ಟೆಗಳನ್ನು ಒಗೆಯಲು ಸಮರ್ಥಳಾಗಿದ್ದಳು. ತೊಟ್ಟಿಯಲ್ಲಿ ಮಗ್ಗಲು ಹಾಸಿಗೆಗಳನ್ನು ದುಪ್ಪಟಗಳನ್ನು ಒಂದು ದೊಡ್ಡ ಕೋಲಿನಿಂದ ಎಳೆದು, ತಿರುಗಿಸಿ, ಒಗೆದು, ಹಿಂಡಿ, ಅವುಗಳನ್ನು ಆಕೆಯು ಒಣಗಿಸುತ್ತಿದ್ದಳು. ಚೆನ್ನಾಗಿ ಕೆಲಸ ಮಾಡುವುದು ಹೇಗೆ ಎಂಬ ವಿಷಯ ಖಂಡಿತವಾಗಿ ಅವಳಿಗೆ ತಿಳಿದಿತ್ತು.

"ನಿಜವಾಗಿಯೂ ಈಕೆ ಗಂಡನಿಲ್ಲದೆ ಬಾಳುವಳೇ?" ಎಂದು ನೆರೆ ಹೊರೆಯವರು ಬೆರಗಾಗಿದ್ದರು.

ಅವರಿಗೆ ಜುಬೇದಾ ಹೀಗೆ ಉತ್ತರ ಹೇಳುತ್ತಿದ್ದಳು ; "ನನಗೆ ಈಗ ಇರುವುದೆಲ್ಲ ಒಂದೇ ಚಿಂತೆ : ನನ್ನ ಮಗನು ತನ್ನ ಕಾಲುಗಳ ಮೇಲೆ ನಿಂತು ಕೊಳ್ಳುವ ಹಾಗೆ ಮಾಡಬೇಕು. ಈ ಸ್ಥಿತಿಯಲ್ಲಿ ಮರುಮದುವೆ ನಿರರ್ಥಕವೆಂದು ನನಗೆನಿಸ್ತದೆ".

ಜುಬೇದಾ ಮುಗುಳ್ನಗುತ್ತಿ ದ್ದಾಗಲೂ, ಅದರಲ್ಲಿ ವಿಷಾದವು ಎದ್ದು ಕಾಣುತ್ತಿತ್ತು. ಕಾಲವು ಬೇಗ ಬೇಗ ಕಳೆಯುತ್ತಿದ್ದು, ಆಕೆಯು ಇನ್ನೂ ಧೀರ್ಘಕಾಲದವರೆಗೆ ತನ್ನ ನೋಟವನ್ನು ಬೀರುತ್ತಿರುತ್ತಾಳೆ. ತನ್ನ ಯೌವನ ಕಾಲವನ್ನು ಕಾಣಬಯಸುತ್ತಾಳೇನೋ ಎಂಬಂತೆ. ಆಕೆಯ ತುಟಿಗಳ ಚಲನೆಯು ಆಕೆಯ ಗೊಣಗಾಟವನ್ನೇ ಸೂಚಿಸುತ್ತಿತ್ತು.

ಹೌದು, ಮಕ್ಕಳು ಇರುವುದೇ ವಿಶೇಷ ಸುಖ. ಇಡೀ ಬಾಳು ಅವರಿಗಾಗಿಯೇ ಮೀಸಲು. ನನ್ನ ಮಗ ನಾಸ್ರ್... ಇತರ ಹುಡುಗರಂತೆಯೇ ತನ್ನ ಶಾಲೆಯ ಓದು ಮುಗಿಸುವುದು ಸಾಧ್ಯವಾಗಬೇಕೆಂದು, ಅವನಿಗಾಗಿಯೇ ನಾನು ನನ್ನ ಆರೋಗ್ಯವನ್ನು ಸವೆಯಿಸಿದ್ದೇನೆ, ಇಷ್ಟೊಂದು ದುಡಿದಿದ್ದೇನೆ.

ತನ್ನ ತಲೆಯ ಮುಸುಕಿನ ಕೆಳಗೆ ಹೊರಬಂದಿದ್ದ ಕೂದಲನ್ನು ಮತ್ತೆ ಮುಸುಕಿನೊಳಕ್ಕೆ ಜುಬೇದಾ ಸೇರಿಸಿಕೊಂಡಳು. ತನ್ನ ಮಗನ ವಿಷಯವಾಗಿಯೇ ಆಲೋಚನೆಯನ್ನು ಮಾಡುತ್ತ ಆಕೆಯು ಅನೇಕ ಗಂಟೆಗಳ ಕಾಲದ ವರೆಗೆ ಹಾಗೆಯೇ ಇರಬಲ್ಲಳು.

ಆಕೆಗೆ ನೆನಪಾಯಿತು. ಒಮ್ಮೆ ಕಣ್ಣೀರಿಡುತ್ತ ಅವನು ಆಕೆಯ ಬಳಿಗೆ ಬಂದಿದ್ದ.

'ನಮ್ಮಗುಡಿಸಲನ್ನು ನಾವು ಮಾರಿಬಿಡೋಣ, ಅಮ್ಮಾ ಅದರಿಂದ ನಾವು ಕನಿಷ್ಠ ಪಕ್ಷ ಪ್ರತಿದಿನವೂ ಊಟ ಮಾಡಬಹುದು'

'ಏನು ಹೇಳ್ತಿರೋದು ನೀನು? ನಿಮ್ಮಪ್ಪನ ನೆನಪಿಗಾಗಿ ಕೇವಲ ಈ ಮನೆಯೊಂದು ಉಳಿದಿದೆ, ಇದನ್ನೂ ಮಾರಿಬಿಡೋದು ಹೇಗೆ ಸಾಧ್ಯ?'

'ಇದು ಎಂಥ ಮನೆ ? ಛಾವಣಿ ಮತ್ತು ಗೋಡೆಗಳು ಮಾತ್ರವೇ ಇವೆ. ಜಮಖಾನೆಗಳು ಇಲ್ಲದಿರುವ ಮನೆಗಳೂ ಇರುತ್ತವೆಯೇ?'

'ನೀನು ದೊಡ್ಡವನಾದಾಗ, ನಿನ್ನ ಕಾಲುಗಳ ಮೇಲೆಯೇ ನೀನು ನಿಂತುಕೊಂಡಾಗ, ಆಗ ನೀನೂ ಒಂದು ಜಮಖಾನ ಕೊಳ್ಳುವಿಯಂತೆ'

ಈ ಸಂಭಾಷಣೆಯು ನೆನಪಾದಾಗಲೆಲ್ಲ ಪ್ರತಿಯೊಂದು ಸಲವೂ ಜುಬೇದಾಳ ಕಣ್ಣುಗಳು ತೇವಗೊಳ್ಳುತ್ತವೆ. ಆಕೆಯು ತನ್ನ ಮನೆಯ ಕಡೆ ನೋಡುತ್ತಾಳೆ, ತನ್ನ ಮುದಿ ವಯಸ್ಸಿನ ಗಂಟು ಬೆರಳುಗಳನ್ನು ನೋಡಿಕೊಳ್ಳುತ್ತಾಳೆ ಮತ್ತು ನಿಟ್ಟುಸಿರಿಡುತ್ತಾಳೆ.

....

ಶಾಲೆಯ ವ್ಯಾಸಂಗವನ್ನು ಮುಗಿಸಿದ ತರುವಾಯ, ನಾಸ್ರ್ ನಗರಕ್ಕೆ ಹೋದನು. ಅವನಿಗೆ ಅಲ್ಲೊಂದು ಕೆಲಸವೂ ಬೇಗನೆ ಸಿಕ್ಕಿತು. ಅವನು ಬಹುಮಟ್ಟಿಗೆ, ಸ್ವಭಾವದಲ್ಲಿಯೂ ತನ್ನ ತಾಯಿಯನ್ನೇ ಹೋಲುತ್ತಿದ್ದನು. ಶ್ರಮವಹಿಸಿ ಬೇಗಬೇಗನೆ ಕೆಲಸ ಮಾಡಲು ಅವನು ಸಮರ್ಥನಾಗಿದ್ದನು. ಹೆಚ್ಚು ಮಾತುಕತೆಗಳಲ್ಲಿ ತೊಡಗಿರುವುದು ಅವನಿಗೆ ಇಷ್ಟವಿರಲಿಲ್ಲ. ಗದ್ದಲದ ಸ್ವಭಾವದವರ ಸಹವಾಸವನ್ನು ಅವನು ಆದಷ್ಟು ಮಟ್ಟಿಗೂ ತಪ್ಪಿಸಿಕೊಳ್ಳುತ್ತಿದ್ದನು. ತನ್ನ ಸ್ನೇಹಿತರ ಭೇಟಿಗೆ ಹೋದಾಗ, ಎಷ್ಟೋ ಸಲ ತೊಂದರೆಗಾರ ಮಾತುಗಾರರಿಂದ ತಪ್ಪಿಸಿಕೊಂಡು ಒಂದು ಮೂಲೆಯಲ್ಲಿ ಕುಳಿತುಕೊಂಡಿರುತ್ತಿದ್ದನು.

ಬಹುಮಟ್ಟಿಗೆ ಅವನು ಆಗಾಗ್ಗೆ ತನ್ನ ತಾಯಿಯ ಬಗೆಗೆ ಆಲೋಚಿಸುತ್ತಿದ್ದನು. ತನ್ನ ಕೋಣೆಯಲ್ಲಿಯೇ ಮೂಲೆಯಿಂದ ಮೂಲೆಗೆ ಶತಪಥ ತುಳಿಯುತ್ತಿದ್ದಾಗ, ವಿಷಾದದ ಮನೋಭಾವದಿಂದ ಅವನು ತನ್ನ ಬಾಲ್ಯಕಾಲವನ್ನು ಸ್ಮರಿಸಿಕೊಳ್ಳುತ್ತಿದ್ದನು. ತಾಯಿಯು ಬಳಲಿ, ಬೇಸತ್ತು ಮನೆಗೆ ಬರುತ್ತಿದ್ದಳು ಮತ್ತು ಅವನಿಗೆ ಆಹಾರ ನೀಡುತ್ತಿದ್ದಳು. ಆದರೆ ಆ ರೋಗ ಪೀಡಿತ ಮುಖದಲ್ಲಿ ಉಜ್ವಲವಾದ ಮುಗುಳ್ನಗೆ ಕಂಡು ಬರುತ್ತಿತ್ತು. ಒಡನೆಯೇ ಅದು ಹಿತಕರವಾಗಿ ಸುಖಕರವಾಗಿ, ಇರುತ್ತಿತ್ತು.

ತಾಯಿಯನ್ನು ನೋಡುವುದಕ್ಕಾಗಿ ಅವರು ಬೇಗನೆ ತನ್ನ ಊರಿಗೆ ಹಿಂದಿರುಗಿ ಹೋಗುವ ಪ್ರಯತ್ನದಲ್ಲಿದ್ದನು. ಆಕೆಗೊಂದು ಉಡುಗೊರೆಯನ್ನು ತೆಗೆದುಕೊಂಡು ಹೋಗಬೇಕೆಂದು ಅವನಿಗನಿಸಿತು. "ನೀನು ದೊಡ್ಡವನಾದಾಗ, ಮತ್ತು ನಿನ್ನ ಕಾಲುಗಳ ಮೇಲೆಯೇ ನೀನು ನಿಂತುಕೊಂಡಾಗ, ಆಗ ನೀನೊಂದು ಜಮಖಾನ ಕೊಳ್ಳುವಿಯಂತೆ" ಎಂದು ಹಿಂದೆ ಎಂದೋ ತನ್ನ ತಾಯಿಯು ಹೇಳಿದ್ದ ಮಾತು ಅವನಿಗೆ ನೆನಪಾಯಿತು.

ಜುಬೇದಾ ಬಳಲಿದ್ದಳು. ನೆಲದ ಮೇಲೆ ಕುಳಿತಿದ್ದಳು. ಇಲ್ಲಿ, ಮರದಡಿಯಲ್ಲಿ ಅಷ್ಟೇನೂ ನೆರಳಾಗಿಲ್ಲ. ಆಕೆಯ ಕಣ್ಣುಗಳು ರಸ್ತೆಯ ಕಡೆಗೇ ನೆಟ್ಟ ನೋಟವನ್ನು ಬೀರುತ್ತಿವೆ. ಇಂದು ಆಕೆಯ ಮಗನು ಪಟ್ಟಣದಿಂದ ಬರುತ್ತಿದ್ದಾನೆ.

ಬಿಸಿಲಿನ ಬೇಗೆಯು ಹೊಡೆತವು ಆಕೆಗೆ ತಟ್ಟಿತು, ಕಣ್ಣು ರೆಪ್ಪೆಗಳು ತಾವಾಗಿಯೇ ಮುಚ್ಚಿಕೊಂಡವು.

"ಅಜ್ಜೀ, ಅಜ್ಜೀ, ನಾಸ್ರ್ ಬಂದಿದ್ದಾನೆ." ಎಂಬ ಕೂಗು ಆಕೆಗೆ ಕೇಳಿಸಿತು.

ಜುಬೇದಾ ಕಣ್ತೆರೆದಳು, ಕೆಲವು ಮಂದಿ ಹುಡುಗರು ಆಕೆಯ ಕಡೆಗೆ ಓಡೋಡಿ ಬರುತ್ತಿದ್ದುದು ಆಕೆಗೆ ಕಾಣಿಸಿತು. ಅವರ ಹಿಂದೆ, ಆಕೆಯ ಮಗ ನಾಸ್ರ್ ಬರುತ್ತಿದ್ದನು.

"ಅಮ್ಮಾ ನಾನು ಬಂದಿದ್ದೇನೆ. ನಾವು ಹಿಂದೆ ಒಮ್ಮೆ ಜಮಖಾನದ ವಿಷಯವಾಗಿ ಮಾತನಾಡಿಕೊಂಡದ್ದು, ನಿನಗೆ ನೆನಪಿದೆಯೇ, ಅಮ್ಮಾ? ನಾನು ಈಗ ನಮ್ಮಮನೆಗೋಸ್ಕರ ಒಂದು ಜಮಖಾನೆ ತಂದಿದ್ದೇನೆ."

ತಾಯಿಯು ಮಾತನಾಡದೆಯೇ, ಮೌನಧಾರಣೆ ಮಾಡಿಕೊಂಡು ನಿಂತಿದ್ದಳು. ಆಕೆಯ ಮುಖದ ಸುಕ್ಕುಗಳ ಮೇಲೆ ಕಟುವಾದ ಕಣ್ಣೀರು ಹರಿಯುತ್ತಿತ್ತು. ಆಕೆಯು ಗೊಣಗತೊಡಗಿದಳು.

"ಆದರೆ ಮಗನೇ! ಮನೆಯೇ ಇಲ್ಲ. ಅದನ್ನು ಮಾರಿದ್ದಾಯಿತು"

ಬಹುಕಾಲ ಕಳೆದ ಮೇಲೆ ಪರಸ್ಪರರನ್ನು ಭೇಟಿಯಾಗುತ್ತಿದ್ದ, ಆ ತಾಯಿಯೂ ಮಗನೂ ಯಾಕೆ ಅಳುತ್ತಿದ್ದರೆಂಬುದನ್ನು ತಿಳಿದುಕೊಳ್ಳಲು, ಅಲ್ಲಿ ಗುಂಪುಗೂಡಿದ್ದ ಹುಡುಗರು ಅಸಮರ್ಥರಾಗಿದ್ದರು

ನವಕರ್ನಾಟಕ ಪ್ರಕಾಶನದ 'ವಿಶ್ವಕಥಾ ಕೋಶದ ಸಂಪುಟ - 23 'ಮರಳುಗಾಡಿನ ಮದುವೆ' ಯಿಂದ
ಪ್ರಧಾನ ಸಂಪಾದಕ : ನಿರಂಜನ

ಇನ್ನೊಂದು ಜಗತ್ತು ಸಾಧ್ಯ

ಪುಟ 11 ರಿಂದ

ನಡೆಯಿತು. ಅರ್ಜೆಂಟಿನಾದ ಇತ್ತೀಚಿನ ತೀವ್ರ ಆರ್ಥಿಕ ಬಿಕ್ಕಟ್ಟು 'ವೇದಿಕೆ'ಯ ಎಲ್ಲಾ ಅಧಿವೇಶನಗಳಲ್ಲಿ ಚರ್ಚೆಗೆ ಬಂದ ವಿಷಯ. ಅದೇ ರೀತಿ ಎನ್ರೋನ್ ಸಹ. ಅಧಿವೇಶನವೊಂದರಲ್ಲಿ ಒಬ್ಬ ಭಾಷಣಕಾರ ಎನ್ರೋನ್ 'ನಮ್ಮ ಜೇಬು ಮತ್ತು ಮನಸ್ಸುಗಳನ್ನು ಕದಿಯ ಬಯಸುವ ನವ -ಉದಾರೀಕರಣದ ವಾದಗಳಿಗೆಲ್ಲಾ ತೀವ್ರ 'ಶಾಕ್' ಕೊಟ್ಟಿದೆ ಎಂದು ಹೇಳಿದ್ದಾರೆ.

ಜನತೆಯ ಹಬ್ಬ (ಕಾರ್ನಿವಲ್)

'ಜಾಗತಿಕ ಸಾಮಾಜಿಕ ವೇದಿಕೆ' ಬಂಡವಾಳಶಾಹಿ - ಜಾಗತೀಕರಣದ ವಿರುದ್ಧ ಒಂದು ಸ್ಪಷ್ಟ ಬದಲಿಯ ಹುಡುಕಾಟದ ಮಹಾನ್ ವೇದಿಕೆ ಮಾತ್ರವಲ್ಲ, ಅದು ಶ್ರೀಮಂತರು ಹೊರಿಸಿದ ಎಲ್ಲಾ ಸಂಕಟಗಳನ್ನು ಮೀರಿ ನಿಂತ ಜೀವನ ಆಸ್ವಾದಿಸಬಲ್ಲ ಬ್ರೆಜಿಲ್ ಮತ್ತು ಎಲ್ಲೆಡೆಯ ಸಾಮಾನ್ಯ ಜನತೆಯ ಹಬ್ಬವೂ ಆಗಿತ್ತು. ಬ್ರೆಜಿಲ್‌ನ 'ಕಾರ್ನಿವಲ್' ಎಂಬ ಸಾಮೂಹಿಕ ಹಬ್ಬದ ಆಚರಣೆ ಜಗತ್‌ಪ್ರಸಿದ್ಧ. 'ಜಾಗತಿಕ ಸಾಮಾಜಿಕ ವೇದಿಕೆ' 500 ಕ್ಕೂ ಹೆಚ್ಚು ಅಧಿಕೃತ ವಿವಿಧ ವಿಷಯಗಳ ಸಮಾವೇಶಗಳಲ್ಲದೆ, ವ್ಯಾಪಕ ಸಾಂಸ್ಕೃತಿಕ ಚಟುವಟಿಕೆಗಳ (ಹಾಡು, ನೃತ್ಯ, ನಾಟಕ, ಚಿತ್ರ-ಪೋಸ್ಟರ್ ಪ್ರದರ್ಶನ) ಕೇಂದ್ರವೂ ಆಗಿತ್ತು.

ಕಳೆದ ವರ್ಷದ 'ಜಾಗತಿಕ ಸಾಮಾಜಿಕ ವೇದಿಕೆ'ಯ ಸಭೆಯನ್ನು ನಿರ್ಲಕ್ಷಿಸಿದ್ದ ಬಂಡವಾಳಶಾಹಿ ಮಾಧ್ಯಮ ಈ ಬಾರಿ ನಿರ್ಲಕ್ಷಿಸಲು ಸಾಧ್ಯವಾಗದಿದ್ದರೂ, ಅದರ ಬಗ್ಗೆ ತಪ್ಪು ಕಲ್ಪನೆಗಳನ್ನು ಹರಡಲು ಪ್ರಯತ್ನಿಸಿದೆ. ಜಾಗತೀಕರಣದ ವಿರೋಧಿಯಾಗಿರುವ ತಲೆತಿರುಕ ಅಲ್ಪಸಂಖ್ಯಾತ ಗುಂಪುಗಳ 'ಮೇಳ' ಎಂದು ಬಿಂಬಿಸಲು ಅವು ಪ್ರಯತ್ನಿಸಿದವು.

ಆದರೆ 'ಆರ್ಥಿಕ ವೇದಿಕೆ' ಯಲ್ಲಿ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಕೋಫಿ ಅನ್ನನ್ ಸೇರಿದಂತೆ ಹಲವು ಭಾಷಣಕಾರರು 'ಸಾಮಾಜಿಕ ವೇದಿಕೆ' ಎತ್ತಿರುವ ಹಲವು ಪ್ರಶ್ನೆಗಳಿಗೆ ಉತ್ತರ ಹುಡುಕಬೇಕು ಎನ್ನುವ ಮೂಲಕ ಮಾಧ್ಯಮಗಳ ಆಟಕ್ಕೆ ಕಡಿವಾಣ ಹಾಕಿದರು. ಅನ್ನನ್ ಅವರ ಇಂತಹ ಹೇಳಿಕೆಗಳಿಗೂ ಹೆಚ್ಚಿನ ಪ್ರಚಾರ ಸಿಗಲಿಲ್ಲ ಎಂದು ಹೇಳಬೇಕಾಗಿಲ್ಲವಲ್ಲ. ಒಟ್ಟಾರೆಯಾಗಿ 'ಜಾಗತಿಕ ಸಾಮಾಜಿಕ ವೇದಿಕೆ', 'ಇನ್ನೊಂದು ಜಗತ್ತು ಸಾಧ್ಯ' ಎಂದು ಘೋಷಣೆ ಮಾತ್ರ ಕೊಟ್ಟಿದ್ದಲ್ಲ. ಅಂತಹ ಜಗತ್ತಿನ ನಿರ್ಮಾಣದತ್ತ ಮೊದಲ ಹೆಜ್ಜೆಗಳನ್ನು ಇಟ್ಟಿದೆ.